REGISTERED NO. M. 1393.

ಕಂಠೀರವ

ಅರ್ದಾಣೆ

ESTD. 1919 ಸ್ಥಾಪನೆ.

ವಾರಕ್ಕೆರಡಾವರ್ತಿ ಪ್ರಕಟವಾಗುವ ಶ್ರೇಷ್ಠವರ್ಗದ ಕನ್ನಡ ವಾರ್ತಾಪತ್ರಿಕೆ.

KANTEERAVA, MANGALORE

The only Nationalist Kanarese BI-WEEKLY with the largest circulation.

ಸಂಪುಟ ೧೪ ಮಂಗಳೂರು, ೧೯೩೬ನೇ ಇಸವಿ ನವಂಬರ ತಾರೀಕು ೨೭ನೇ ಶುಕ್ರವಾರ ಸಂಚಿಕೆ ೬೮

VOL. XVIII MANGALORE, FRIDAY, NOVEMBER 27, 1936 NO. 68

BANK with the

UDIPI BANK Ltd.

(KALSANK, UDIPI S. KANARA)

and thereby **DEFEND** your own interest.

ALL KINDS OF BANKING BUSINESS TRANSACTED.

ESTD: 1925

The Canara Banking Corporation, Udipi, Ltd.

(Incorporated in British India)

Statement of affairs as at 31st October 1936:—

Capital & Liabilities:—

1.	Paid up capital	Rs.	2,88,925—0—0
2.	Reserve & other Funds	Rs.	3,72,349-15-11
3.	DEPOSITS	Rs.	36,19,400—1—9
4.	Due to Bankers	Rs.	5,252—3—8
5.	Bills per contra	Rs.	27,035-10—7
6.	Suspense	Rs.	5,215-14—0
7.	Sundries	Rs.	1,48,228 4—2
	TOTAL	Rs.	44,66,407—2—1

Property & Assets:—

1.	Landed property, premises etc.	Rs.	3,18,625—1—5
2.	Authorised Investments	Rs.	22,50,371—9—6
3.	Govt. Securities etc. at cost	Rs.	11,19,762-14—0
4.	Deposits with other Banks	Rs.	2,56,000—0—0
5.	Bills for collection	Rs.	27,035-10—7
6.	Sundries	Rs.	51,614—4—2
7.	Cash on hand & with Bankers at call	Rs.	4,42,997-10—5
	TOTAL	Rs.	44,66,407—2—1

Asiatic Government Security

LIFE ASSURANCE CO., LTD.,

Established 1913. **Life Branch 1922.**

The Pioneer Insurance Institution in Mysore State transacting business throughout India. Varied plans of Assurances for both male and female lives at competitive rates. Attractive Policies with liberal privileges including Disability Benefits. Substantial Bonus. Profitable Agency Connections.

For Prospectus and Agency terms apply to:

Head Office: "Asiatic Buildings" Bangalore City,

OR

to any of the Company's undernoted Branches:

Madras Branch: 187, Mount Road.
Bombay Branch: Hornby Road, Fort.
Calcutta Branch: 15, Clive Street.

V. RANGASWAMI, B. A., B. L.,
General Manager.

ಪೊಪ್ಯುಲರ್

- ಬ್ರಿಟಿಷ್ ಕರ್ನಾಟಕದ ಪ್ರಥಮ ವಿಮಾಸಂಸ್ಥೆ—ದಕ್ಷಿಣ ಕನ್ನಡದ ಆದರ್ಶ ವಿಮಾಸಂಸ್ಥೆ.
- ಪ್ರಥಮ ವರ್ಷದಿಂದಲೇ ವಿಮಾನಿಧಿ ಸ್ಥಾಪಿತವಾಗಿದ್ದು ಇದು ವರ್ಷಂಪ್ರತಿ ಬೆಳೆಯುತ್ತಾ ಇದೆ.
- ಪ್ರಥಮ ಮೌಲ್ಯವೇತನದಲ್ಲಿಯೇ ಬೋನಸ್—ಅಖಿಲ ಕರ್ನಾಟಕದಲ್ಲಿ ಪ್ರಥಮ ಬಾರಿಯೇ ಬೋನಸನ್ನು ಹಂಚಿದ ಸಂಸ್ಥೆಯೆಂದರೆ ಇದೊಂದೇ.

ವಿಮೆಯನ್ನು ಮಾಡಲೂ, ಮಾಡಿಸಲೂ ಇದೀಗ ನಿಮ್ಮ ಸಂಸ್ಥೆ.
ಸುಲಭವಾದ ವಿಮಾಕಂತುಗಳು—ಸರ್ವರಿಗೂ ಅನುಕೂಲವಾದ ಆಕ್ಟಾಧುನಿಕ ಶಾಸ್ತ್ರೀಯ ವಿಮಾಪದ್ಧತಿಗಳು—ಅಡಳಿತೆಯು ಸುವ್ಯವಸ್ಥಿತ—ಭದ್ರತೆಯು ವಿಶ್ವಾಸಾರ್ಹ.

ಯೋಗ್ಯ ವಿಜಂಟಿರುಗಳಿಗೆ ಧಾರಾಳ ಕಮಿಶನ್.

ಮಾಹಿತಿಪತ್ರ ಇತ್ಯಾದಿ ಹೆಚ್ಚಿನ ವಿವರಗಳಿಗೆ ಮಂಗಳೂರಿನ ಮುಖ್ಯ ಕಾರ್ಯಾಲಯಕ್ಕೆ ಬರೆಯಿರಿ.

THE POPULAR INSURANCE CO. LTD. HEADOFFICE MANGALORE

Complete Service

We are here to serve your banking requirements, and to place at your command the practical cooperation of our resources and banking facilities. Whether your needs are local, provincial or world-wide this bank through its experience, connections and organisations is eminently qualified to serve you.

THE PALAI

CENTRAL BANK, LIMITED,

(INCORPORATED IN TRAVANCORE.)

Bunder Road, **MANGALORE.**

London Agents: LLOYDS BANK, LIMITED.

New York ,, : NATIONAL CITY BANK OF NEW YORK.

ಮೋಸಹೋಗಬೇಡಿ!

ಶ್ರೀ ಅಂಬಾಳ್ ಮದರಾಸು ನಶ್ಯವು ಅನೇಕ ವರ್ಷಗಳಿಂದ ಅಸಮಾನವಾದ ಮತ್ತು ಶಾಶ್ವತವಾದ ಕೀರ್ತಿಯನ್ನು ಹೊಂದಿ ಜಗತ್ಪ್ರಸಿದ್ಧವಾಗಿರುವುದನ್ನು ಅರಿತು ಕೆಲವರು ಹಣದಾಸೆಯುಳ್ಳವರಾಗಿ ಕಿರಿದು ಹೊಗೆಸೊಪ್ಪನ್ನು ತರಿಸಿ ಅವುಗಳಲ್ಲಿರುವ ಮಣ್ಣು, ಮಂಬು, ಮಸಿಗಳನ್ನು ತೆಗೆಯದೆ ಬೆರಕೆ ತುಪ್ಪವನ್ನು ಸೇರಿಸಿ ನಶ್ಯವನ್ನು ತಯಾರಿಸಿ ವ್ಯಾಪಾರಸ್ಥರಲ್ಲಿ ಹೋಗಿ ಕಡಿಮೆ ಬೆಲೆಗೆ ಸಾಲವಾಗಿ ಕೊಟ್ಟು ಬರುತ್ತಿರು. ಕೆಲವು ವ್ಯಾಪಾರಸ್ಥರು ಸರಸವಾಗಿಯೂ ಸಾಲವಾಗಿಯೂ ಸಿಗುವುದರಿಂದ ಮೇಲ್ಕಂಡ ಹಲ್ಕಾ ನಶ್ಯವನ್ನು ತರಿಸಿ ಇದೇ ಹಸನಾದ ಮದರಾಸು ನಶ್ಯವೆಂದು ಬಿಕರಿ ಮಾಡಿ ಬರುತ್ತಿರುವರು. ಸಹೋದರೇ! ಮೋಸಹೋಗಬೇಡಿ. ಇಂಥಾ ಪೋಲಿ ನಶ್ಯವನ್ನು ಉಪಯೋಗಿಸಿದರೆ ಮೇಲ್ಕಂಡ ನಶ್ಯದಲ್ಲಿರುವ ಮಣ್ಣು, ಮಸಿ ಮೊದಲಾದವುಗಳು ಮೂಗಿನ ಮೂಲಕ ಮೆದುಳಿಗೆ ಹೋಗಿ ಮೆದುಳನ್ನು ಬಲೆಯೋಪಾದಿಯಲ್ಲಿ ಮುಚ್ಚಿಕೊಂಡು ಅಜ್ಞಾನವನ್ನುಂಟುಮಾಡುವುದು, ನಾಸಿಕದ್ವಾರವನ್ನು ಬಂಧಿಸುವುದು. ಮೂಗಿನಲ್ಲಿ ವ್ರಣವನ್ನುಂಟುಮಾಡುವುದಲ್ಲದೆ ಪಂಚೇಂದ್ರಿಯಗಳ ಶಕ್ತಿಯನ್ನು ಕುಂದಿಸುವದು. ಆದುದರಿಂದ ಅಪ್ತರೇ, ಅನೇಕ ವರ್ಷಗಳಿಂದ ಅನೇಕ ಡಾಕ್ಟರುಗಳಿಂದಲೂ, ಜಡ್ಜಿಗಳಿಂದಲೂ, ಇನ್ನೂ ಅನೇಕ ಗ್ರೇಮಂತರಿಂದಲೂ ಶ್ಲಾಘಿಸಲ್ಪಟ್ಟಿರುವ ಶ್ರೀ ಅಂಬಾಳ್ ಅಂಡ್ ಕಂಪೆನಿ, ಪೋಸ್ಟ್ ಬಾಕ್ಸ್ ನಂ. ೩, ಮದರಾಸು, ಇವರ ಮದರಾಸು ನಶ್ಯ, ಸುಗಂಧ ನಶ್ಯವನ್ನೇ ಉಪಯೋಗಿಸಿ ಆನಂದಪಡಿರಿ. ಎಲ್ಲಾ ವ್ಯಾಪಾರಸ್ಥರಲ್ಲಿಯೂ ಸಿಗುವುದು.

ಸೂತಿಕಾವಾಯು ಅಪಸ್ಮಾರ 10 ನಿಮಿಷಗಳಲ್ಲಿ ನಿಲ್ಲಿಸಲ್ಪಡುವದು, "ವಾಯುಮುಕ್ತಾ"

ಈ ಔಷಧವು ದೇಶೀಯ ಮೂಲಿಕೆಗಳಿಂದ ತಯಾರಿಸಲ್ಪಡುತ್ತದೆ. ಕಳೆದ 30 ವರ್ಷಗಳಿಂದ ಮಾನವರ ಸೇವೆಯನ್ನು ಮಾಡುತ್ತಿದೆ. ಅನಾರೋಗ್ಯದಲ್ಲಿರುವ ಅಥವಾ ಗರ್ಭಿಣಿಯರಾಗಿರುವ ಸಾವಿರಾರು ಸ್ತ್ರೀಯರ ಈ ಭಯಂಕರ ವ್ಯಾಧಿಯಿಂದ ಮುಕ್ತರಾಗಿದ್ದಾರೆ. ಹಿಸ್ಟಿರಿಯಾವನ್ನು ಭೂತ ಯಾ ಪ್ರೇತಬಾಧೆಯೆಂದು ತಿಳಿಯತಕ್ಕುದಲ್ಲ. ಅದು ಇತರ ರೋಗಗಳಂತೆಯೇ ದೇಹಸಂಬಂಧವಾದ ರೋಗವಾಗಿರುತ್ತದೆ. ಬಡಬಡಿಕೆ, ಕೂಗು, ಹೊರಳಾಟ, ಬಲಹೀನತೆ, ತಲೆತಿರುಗುವಿಕೆ, ಶೀತ, ಎಡೆಬಿಡದ ಅಪಸ್ಮಾರ, ಹುಚ್ಚುತನ ಮೊದಲಾದ ಪೇಚಾಟಗಳು 24 ತಾಸುಗಳಲ್ಲೆ ಇಲ್ಲುವುವು. ಸ್ಮೃತಿಯಿಲ್ಲದಿರುವಿಕೆ, ಅಪಸ್ಮಾರ, ಒಡ್ಡಾಟ 10 ನಿಮಿಷಗಳಲ್ಲೆ ಮಾಯವಾಗುತ್ತವೆ. ಮತ್ತು ಹೋಗಿಯು ಶಾಂತಿಯನ್ನೂ, ತ್ರಾಣವನ್ನೂ ಪಡೆಯುತ್ತಾನೆ. 10 ದಿನಗಳ ಔಷಧಿಗೆ ರೂ. 2/- ಮತ್ತು 30 ದಿನಗಳ ಔಷಧಕ್ಕೆ ರೂ. 5/-. ಪೋಸ್ಟೇಜು ಅಲಾಯಿದಾ.

C. L. Namawala,
Palace Road, BARODA.

[illegible], 25-9.

ಅಪೂರ್ವ ಗ್ರಂಥಗಳು

ಪುರಂದರ ದಾಸರ ಕೀರ್ತನೆಗಳು 5 ಭಾಗ ಪೂರ್ತಿ 3—7—0. ಋಗ್ವೇದ ಅಥವಾ ಯಜುರ್ವೇದ ವೈಷ್ಣವ ಅಹ್ನಿಕ ಮಂಜರಿ ಕಿತ್ತಾನಾರು ಬೈಂಡು 2—8—0. ಪಂಚದಶೀ ತತ್ವಾರ್ಥ (ಚಿದಂಬರಯ್ಯ) 2—0—0. ಭಗವದ್ಗೀತಾ ಸಾರ ವಿಚಾರ (ಚಿದಂಬರಯ್ಯ) 1—8—0. ಶ್ರೀವೇದಾಂತ ಪಂಚದಶೀ 5—0—0. ನವನಾಥ ಭಕ್ತಿಸಾರ 2—8—0.

ಟಪಾಲು ಖರ್ಚು ಪ್ರತ್ಯೇಕ.
ಅಡ್ವಾನ್ಸಿಲ್ಲದ ಆರ್ಡರ್‌ಗಳಿಗೆ ಗಮನ ಕೊಡಲಾಗುವುದಿಲ್ಲ.
ಸಂಪೂರ್ಣ ಕನ್ನಡ ಕೆಟಲಾಗು ಅಪೇಕ್ಷಿಸುವವರಿಗೆ ಮುಫತ್ತಾಗಿ ರವಾನಿಸಲಾಗುವುದು.

ಎಚ್. ಎನ್. ರಾವ್ ಬ್ರದರ್ಸ್,
ಪುಸ್ತಕ ವ್ಯಾಪಾರಿಗಳು,
ಚಿಕ್ಕಪೇಟೆ, ಬೆಂಗಳೂರು ಸಿಟಿ.

For your Diamonds
enquire at
Sowcar
SRINIVAS RANGA PAI,
Sowcar Mahal,
Car Street,
MANGALORE.

ಪತಿತವರ್ಗದವರಿಗಾಗಿ ಸರಕಾರದವರು ಮಾಡುವ ಕೆಲಸಗಳು.

೧. ಪತಿತವರ್ಗದವರಿಗೂ ಇತರರಿಗೂ ಸರಕಾರಿ ಜಾಗಗಳನ್ನು ಕೊಡುವಂಥಾದ್ದು:—

ಸರಕಾರದವರ ಸ್ವಾಧೀನವಿರುವ ಖಾಲಿ ಸ್ಥಳಗಳನ್ನು ಪತಿತವರ್ಗದ ಮತ್ತು ಇತರ ಯೋಗ್ಯ ಜನರಿಗೆ ಅವರಿಂದ ಮೌಲ್ಯ ಪಡಿಯದೇನೇ ಸರಕಾರದವರು ಹೆಚ್ಚಾಗಿ ಕೊಡುತ್ತಾರೆ. ಈ ಜಿಲ್ಲೆಯಲ್ಲಿ ಸೆಟ್ಲಮೆಂಟ ನಂತರದ ೩೦ ವರ್ಷಗಳಲ್ಲಿ ಜಿಲ್ಲೆಯ ಪ್ರತಿ ತಾಲೂಕಿನಲ್ಲಿಯೂ ಅನಾಧೀನ ಪುಂಜಸ್ಥಳಗಳ ವಿಸ್ತೀರ್ಣವು ಬಹಳ ಕಡಿಮೆಯಾಗಿ ಹೋಗಿರುತ್ತದೆ. ಅದರ ವಿವರ, ಸೆಟ್ಲಮೆಂಟಿನ ಸಮಯ ಮತ್ತು ೧೩೩೮ ಫಸ್ಲಿಯಲ್ಲಿ ಇದ್ದ ಎಕ್ರೆಗಳ ಸಂಖ್ಯೆಗಳು ಈ ಕೆಳಗಿನಂತಿವೆ:—

ಕುಂದಾಪುರ ತಾಲೂಕು ಎಕ್ರೆ ೧೯೨,೦೨೧ ಮತ್ತು ಎಕ್ರೆ ೧೮೦,೨೭೨; ಕಾರ್ಕಳ ತಾಲೂಕು ೨೪೬,೬೮೭ ಮತ್ತು ೨೦೮,೭೧೫; ಕಾಸರಗೋಡು ತಾಲೂಕು ೨೨೨,೧೯೩ ಮತ್ತು ೧೬೬,೨೨೬; ಮಂಗಳೂರು ತಾಲೂಕು ೧೩೬,೦೫೧ ಮತ್ತು ೮೦,೮೨೮; ಪುತ್ತೂರು ತಾಲೂಕು ೫೫೫,೩೭೦ ಮತ್ತು ೫೩೧,೫೪೯; ಉಡುಪಿ ತಾಲೂಕು ೧೧೧,೬೩೨ ಮತ್ತು ೭೯,೭೨೮; ಜುಮ್ಲಾ ೧,೪೬೩,೯೫೪ ಮತ್ತು ೧,೨೪೭,೩೧೮.

ಅನಾಧೀನ ಸ್ಥಳಗಳನ್ನು ಸರಕಾರದವರು ರೈತರಿಗೆ ಕೊಟ್ಟದ್ದರಿಂದಲೂ ಅಂಥಾ ಸ್ಥಳಗಳನ್ನು ರೈತರ ಹಿಡುವಳಿಗಳಲ್ಲಿ ಸೇರಿಸಿದ್ದರಿಂದಲೂ ಅನಾಧೀನ ಸ್ಥಳಗಳ ವಿಸ್ತೀರ್ಣವು ಹೀಗೆ ಕಡಿಮೆಯಾಗಲಿಕ್ಕೆ ಕಾರಣವಾಗಿರುತ್ತದೆ. ಈಗಲೂ ಪ್ರತಿಯೊಂದು ತಾಲೂಕಿನಲ್ಲಿ ಹೀಗೆ ಸ್ಥಳಗಳನ್ನು ದರಕಾಸ್ತಿಗೆ ಕೊಡುತ್ತಿರುವುದರಿಂದ ಅನಾಧೀನ ಸ್ಥಳಗಳ ವಿಸ್ತೀರ್ಣವು ಪ್ರತಿವರ್ಷವೂ ಕಡಿಮೆಯಾಗುತ್ತಾ ಹೋಗುತ್ತಿದೆ. ೧೯೧೮ನೇ ವರ್ಷದ ತನಕ ಸರ್ವಸಮ್ಮತವಾದ ನಿಯಮಗಳ ಪ್ರಕಾರ ಅನಾಧೀನ ಸ್ಥಳಗಳನ್ನು ದರಕಾಸ್ತಿಗೆ ಕೊಡುವುದಿತ್ತು. ಹೀಗೆ ದರಕಾಸ್ತಿನಲ್ಲಿ ಜಾಗಗಳನ್ನು ಕೊಡುವಾಗ ಸಮೀಪದ ವರ್ಗದಾರರಿಗೆ—ಮುಖ್ಯ ಕುಮ್ಕಿ ಹಕ್ಕುಳ್ಳವರಿಗೆ—ಮತ್ತು ಖಾಲಿ ಸ್ಥಳಗಳನ್ನು ಸಾಗ್ವಳ್ಳಿಗೆ ತಂದವರಿಗೆ ಅಂಥಾ ಜಾಗಗಳ ಮೇಲೆ ಪ್ರಥಮ ಹಕ್ಕೆಂದು ನಿಶ್ಚಯಿಸಿತ್ತು. ೧೯೧೮ನೇ ವರ್ಷದಲ್ಲಿ ಈ ನಿಯಮಗಳ ಪ್ರಕಾರ ದರಕಾಸ್ತಿಗೆ ಜಾಗಗಳನ್ನು ಕೊಡುತ್ತಾಹೋದರೆ ಪತಿತವರ್ಗದವರಿಗೆ ಜಾಗಗಳು ಸಿಕ್ಕುವುದು ಕಷ್ಟವೆಂದು ಸರಕಾರದವರಿಗೆ ತೋರಿತು. ಆದ್ದರಿಂದ ಪ್ರತಿಯೊಂದು ಗ್ರಾಮದಲ್ಲಿ ಈ ವರ್ಗದವರಿಗೆ ಮುಂದೆ ಎಷ್ಟು ಜಾಗ ಬೇಕಾದೀತೆಂದು ನಿಶ್ಚಯಿಸಿ ಅಷ್ಟು ಅನಾಧೀನ ಗುಡ್ಡೆ ಸ್ಥಳಗಳನ್ನು ಆ ವರ್ಗದವರಿಗೋಸ್ಕರ ಮನ್ನಾ ಇಡಬೇಕೆಂದು ಸರಕಾರದವರು ವಿಧಿಸಿದರು. ಈ ಜಿಲ್ಲೆಯಲ್ಲಿ ಕಳೆದ ಐದು ವರ್ಷಗಳಲ್ಲಿ ಪತಿತವರ್ಗದ ಜನರಿಗೆ ಕೊಟ್ಟ ಜಾಗಗಳ ವಿಸ್ತೀರ್ಣವನ್ನು ಕೆಳಗೆ ಕಾಣಿಸಿದೆ:—

	ಎಕ್ರೆ
೧೯೩೧—೩೨	೧೨೨—೯೭
೧೯೩೨—೩೩	೧೨೮—೩೩
೧೯೩೩—೩೪	೧೦೪—೦೦
೧೯೩೪—೩೫	೧೧೫—೫೨
೧೯೩೫—೩೬	೧೨೩—೯೯

ಪ್ರತಿಯೊಂದು ಗ್ರಾಮದಲ್ಲಿಯೂ ಪತಿತವರ್ಗದವರಿಗೋಸ್ಕರ ಮನ್ನಾ ಇಟ್ಟ ಸ್ಥಳಗಳ ಪಟ್ಟಿಯೊಂದನ್ನು ತಯಾರಿಸಿದ್ದಾರೆ. ರೆವೆನ್ಯೂ ಡಿವಿಜನಲ್ ಆಫೀಸರರ ಹುಕುಮನ್ನು ಪಡೆಯದೆ ಈ ಪಟ್ಟಿಗಳಲ್ಲಿ ತಬ್ದೀಲಿಗಳನ್ನು ಮಾಡಲಿಕ್ಕೆ ಯಾರಿಗೂ ಅಧಿಕಾರವಿರುವುದಿಲ್ಲ.

ಗುಡ್ಡೆ ಸ್ಥಳಗಳನ್ನು ರೂಪಿತಕ್ಕೆ ತರಲಪೇಕ್ಷಿಸುವವರಿಗೆ ಸರಕಾರದವರು ಸುಲಭಶರ್ತಗಳ ಮೇಲೆ ಮುಬಾದಿಲೆಗಳನ್ನು ಕೊಡುತ್ತಾರೆ. ಪತಿತವರ್ಗದವರಿಗೆಲ್ಲಾ ಸರಕಾರದವರ ವಿಶೇಷತರದ ಪ್ರೋತ್ಸಾಹವಿರುತ್ತದೆ.

ಗುಡ್ಡೆಸ್ಥಳಗಳನ್ನು ಸಾಗ್ವಳ್ಳಿಗೆ ತರುವ ವಿಷಯದಲ್ಲಿ ಬಡಜನರಿಗೆಲ್ಲಾ ಸರಕಾರದವರು ತಮ್ಮಿಂದ ಸಾಧ್ಯವಿರುವಷ್ಟರ ಸಹಾಯವನ್ನು ಮಾಡುತ್ತಿದ್ದಾರೆ.

II. ಪತಿತವರ್ಗದವರ ಆರ್ಥಿಕ, ಸಾಮಾಜಿಕ ಮತ್ತು ವಿದ್ಯಾಸಂಬಂಧದ ಉದ್ಧಾರದ ಬಗ್ಯೆ ಸರಕಾರದವರು ನಡೆಸುವ ಕಾರ್ಯಕ್ರಮಗಳ ಸಂಕ್ಷಿಪ್ತ ವೃತ್ತಾಂತ:—

ಈ ಉದ್ದಿಶ್ಯದಿಂದ ಸರಕಾರದವರು ಮಾಡುವ ಮುಖ್ಯ ಕಾರ್ಯಕ್ರಮಗಳನ್ನು ಕೆಳಗೆ ಕೊಟ್ಟಿರುತ್ತದೆ:—

(೧) ಪತಿತವರ್ಗದವರು ಸಮುದಾಯವಾಗಿ ಜೀವಿಸುವ ಪ್ರದೇಶಗಳಲ್ಲಿ ಜನವಸ್ತಿಯ ನಿಬಿಡತೆಯನ್ನು ಹೋಗಲಾಡಿಸುವ ಉದ್ದಿಶ್ಯ ಅವರಿಗೆ ಮನೆ ಅಡಿಸ್ಥಳಗಳನ್ನು ಒದಗಿಸಿಕೊಡುವುದು.

(೨) ಸಹಕಾರ ಸಂಘಗಳನ್ನು ಸ್ಥಾಪಿಸಿ ಅವುಗಳ ಮೇಲ್ವಿಚಾರ ನೋಡುತ್ತಿರುವದು; ಮುಬಾದಿಲೆಗಳನ್ನು ಕೊಡುವುದು.

(೩) ಪತಿತವರ್ಗದವರ ಬಗ್ಯೆ ಶಾಲೆಗಳನ್ನು ತೆರೆಯುವುದು; ವಿದ್ಯಾರ್ಥಿಗಳಿಗೆ ವೇತನ ಸಂಬಳಗಳನ್ನು ಕೊಡುವುದು. ಅವರಿಗೆ ಅನ್ನ ಕೊಡುವ ಬಗ್ಯೆ ಗ್ರಾಂಟುಗಳನ್ನು ಕೊಡುವುದು.

ಪತಿತವರ್ಗದವರಿಗೆ ಪ್ರಯೋಜನ ಸಿಕ್ಕುವಂತೆ ಖಾಸಗಿ ವಿದ್ಯಾಸಂಸ್ಥೆಗಳಿಗೆ ಹಣಸಹಾಯಮಾಡುವುದು.

(೪) ಹಳ್ಳಿಗಳಲ್ಲಿ ಬಾವಿ, ಕೆರೆ, ದಾರಿ, ಸ್ಮಶಾನ ಯಾ ದಫನ ಸ್ಥಳ ಮೊದಲಾದ ನಿರ್ಮಲಕರಣದ ಅನುಕೂಲತೆಗಳನ್ನು ಪತಿತವರ್ಗದವರಿಗೋಸ್ಕರವಾಗಿ ಕಲ್ಪಿಸುವುದು.

(೫) ಪತಿತವರ್ಗದವರ ಸಾಮಾಜಿಕ ವ ಆರ್ಥಿಕ ಉದ್ಧಾರಗೋಸ್ಕರ ಸಾಹಸಮಾಡುವ ಖಾಸಗಿ ಸಂಸ್ಥೆಗಳಿಗೆ ಹಣಸಹಾಯಮಾಡುವುದು.

(೬) ಕೃಷಿ ಬಗ್ಯೆ ಜಾಗಗಳನ್ನು ದರಕಾಸ್ತಿಗಾಗಲಿ ಗೇಣಿಗಾಗಲಿ ಕೊಡುವುದು.

೨. ಈ ಉದ್ದಿಶ್ಯಗಳ ಬಗ್ಯೆ ಮತ್ತು ಕೆಲಸಗಾರರ ಸಂಘಗಳ ವ ಕೆಲಸಗಾರರ ಪ್ರತಿಫಲದ ಆಕ್ಷಿನ ಸಂಬಂಧವಾದ ಎಲ್ಲಾ ಕೆಲಸದ ಬಗ್ಯೆ—೧೯೨೦ನೇ ವರ್ಷದಲ್ಲಿ ಪ್ರಥಮ ಪ್ರತ್ಯೇಕ ಲೇಬರ್ ಕಮ್ಮಿಶನರ್ ಒಬ್ಬರನ್ನು ಸರಕಾರದವರು ನೇಮಕಮಾಡಿದರು. ೧೯೩೧ನೇ ಇಸವಿ ಮಾರ್ಚಿ ಲಾಗಾಯಿತು ಮೂರು ವರ್ಷಗಳ ತನಕ ಆರ್ಥಿಕ ಸ್ಥಿತಿಯು ಬಿಗಿಯಿದ್ದುದರಿಂದ ಲೇಬರ್ ಕಮೀಶನರರ ಕೆಲಸವನ್ನೆಲ್ಲಾ ರೆವೆನ್ಯು ಬೋರ್ಡಿನ ಮೆಂಬರರೊಬ್ಬರಿಗೆ ಹಂಗಾಮಿಯಾಗಿ ಕೊಟ್ಟರು. ೧೯೩೪ನೇ ಎಪ್ರಿಲ್ ತಿಂಗಳಲ್ಲಿ ಪ್ರತ್ಯೇಕ ಲೇಬರ್ ಕಮೀಶನರರನ್ನು ತಿರಿಗಿ ಮೊಕ್ರೂರಿಮಾಡಿರುತ್ತಾರೆ. ಪತಿತವರ್ಗದವರ ಸಲುವಾಗಿ ಸರಕಾರದವರು ಕೈಕೊಳ್ಳುತ್ತಿರುವ ಕಾರ್ಯಗಳು ಅಷ್ಟರ ತನಕ ಒಂದಕ್ಕೊಂದು ಗಂಟಾಗಿ ನಡಿಯುತ್ತಿರಲಿಲ್ಲವಾದ್ದರಿಂದ ಈ ಹುದ್ದೆಯನ್ನು ಸರಕಾರದವರು ೧೯೨೦ನೇ ವರ್ಷದಲ್ಲಿ ನಿರ್ಮಿಸಿದ್ದಾಗಿರುತ್ತದೆ. ಇದರಿಂದ ಪತಿತವರ್ಗದವರಿಗೋಸ್ಕರ ಮಾಡುವ ಕಾರ್ಯಭಾಗಗಳೆಲ್ಲಾ ಈಗ ಒಂದೇ ಧ್ಯೇಯದಿಂದ ಒಂದೇ ಸಮನಾಗಿ ನಡೆದು ಸಾರ್ಥಕವಾಗುವಂತಾಗಿಯದೆ. ಕಮೀಶನರರ ಕೆಳಗೆ ಪ್ರತಿ ಜಿಲ್ಲೆಯಲ್ಲಿ ಜಿಲ್ಲಾ ಲೇಬರ್ ಆಫೀಸರರು, ಸ್ಪೆಶ್ಯಲ್ ಇನ್ಸ್‌ಪೆಕ್ಟರುಗಳು, ಸ್ಪೆಶ್ಯಲ್ ಓವರ್ಸಿಯರರು, ಉಪಾಧ್ಯಾಯರು, ಪಾಲಕರು, ಔದ್ಯೋಗಿಕ ಶಿಕ್ಷಕರು ಅನೇಕ ಮಂದಿ ಇರುತ್ತಾರೆ. ಜಿಲ್ಲಾ ಲೇಬರ್ ಆಫೀಸರರ, ಇನ್ಸ್‌ಪೆಕ್ಟರುಗಳ, ಓವರ್ಸಿಯರರ ಮತ್ತು ಉಪಾಧ್ಯಾಯರ ಮೇಲ್ವಿಚಾರವನ್ನು ಆಯಾಯ ಜಿಲ್ಲೆಯ ಕಲೆಕ್ಟರರು ನೋಡುತ್ತಾರೆ. ಲೇಬರ್ ಶಾಖೆಯೊಂದಿಗೆ ಸಹಕರಿಸಿ ಅವರಿಗೆ ಸಹಾಯವನ್ನು ಮಾಡುವದು ಇಡೀ ಜಿಲ್ಲೆಯ ರೆವೆನ್ಯು ಶಾಖೆಯ ಉದ್ಯೋಗಸ್ಥರಿಲ್ಲವರ ಕರ್ತವ್ಯಭಾಗಗಳಲ್ಲೊಂದೆಂಬುದು ಅವರೆಲ್ಲರಿಗೂ ತಿಳಿದಿರುವ ಸಂಗತಿಯಾಗಿರುತ್ತದೆ. ದಕ್ಷಿಣ ಕನ್ನಡ ಜಿಲ್ಲೆ ಕೂಡಿ ಈಗ ಈ ಆಧಿಪತ್ಯದಲ್ಲಿ ಒಟ್ಟಿಗೆ ಹದಿನೈದು ಜಿಲ್ಲೆಗಳಲ್ಲಿ ಲೇಬರ್ ಶಾಖೆಗೆ ಸಂಬಂಧಪಟ್ಟ ಸ್ಪೆಶ್ಯಲ್ ಶಿಬಂದಿಯವರು ಕೆಲಸ ಮಾಡುತ್ತಾರೆ.

(೩ನೇ ಪುಟಕ್ಕೆ ಮುಂದರಿಸಿಯದೆ)

ಇಂಡಿಯಾದ ಪ್ರಮುಖ ಟಾನಿಕ್

ಆತಂಕನಿಗ್ರಹ ಮಾತ್ರೆಗಳು.

ಮಲಬದ್ಧತೆ, ಮನೋದೌರ್ಬಲ್ಯ, ನರಗಳ ಬಲಹೀನತೆ ಇವನ್ನು ಗುಣಪಡಿಸಿ, ಆರೋಗ್ಯಕಾರಿಯಾದ ಹಸಿವು ಹುಟ್ಟಿಸಿ ರಕ್ತಶುದ್ಧಿ ಮಾಡುತ್ತದೆ.

ಉಚಿತವಾಗಿ ಕೊಡುವ
"ಜೀವದ ವೃಕ್ಷಮೂಲ"
ಒಂದು ಡಬ್ಬಿ ಉಪಯೋಗಿಸಿ ನೋಡಿ.
ಮೂವತ್ತೆರಡು ಮಾತ್ರೆಗಳ ಡಬ್ಬಿ ೧ಕ್ಕೆ ಒಂದು ರೂಪಾಯಿ ಮಾತ್ರ.
ಕ್ಯಾಟಲಾಗಿಗೆ ಬರೆಯಿರಿ:—

ಆತಂಕನಿಗ್ರಹ ಫಾರ್ಮೆಸಿ,
ಚಿಕ್ಕಪೇಟೆ, ಬೆಂಗಳೂರು ಸಿಟಿ.
ಏಜಂಟರು—
ಪರ್ಲ್ ಎಂಡ್ ಸನ್ಸ್, ಮಂಗಳೂರು.

ನರಸಿಂಹ ಲೇಹಂ

(ಸ್ವರ್ಣ ಸಹಿತ) ನಿಶ್ಶಕ್ತರಿಗೊಂದು ವರಪ್ರದಾನ.

ರಕ್ತ, ಶಕ್ತಿ, ಚೈತನ್ಯ, ತ್ರಾಣ ಮತ್ತು ಮನುಷ್ಯತ್ವವನ್ನು ವೃದ್ಧಿಗೊಳಿಸುತ್ತದೆ. ಉಷ್ಣ ಮತ್ತು ಬಹುಮೂತ್ರವನ್ನು ಗುಣಪಡಿಸುತ್ತದೆ. 2 ಕರಡಿಗೆಗಳು ಸಾಕು.
20 ತೊಲೆಗಳ ಕರಡಿಗೆಯೊಂದರ ರೂ. 2—8—0
ವಿ. ಪಿ. ಪ್ರತ್ಯೇಕ.

P. C. A. & Co., Ayurvedic Samaj,
Peridepi, Nellore Dt.

ಮೈಸೂರು ಅಗರಬತ್ತಿ

ನಮೂನೆ	ಶೇರಿಗೆ ಕಿಮ್ಮತ್ತು
ಅಂಬರ ಬತ್ತಿ	೨ ರೂ.
ಜವ್ವಾಜಿ ಬತ್ತಿ	೪ ರೂ.
ಕಸ್ತೂರಿ ಬತ್ತಿ	೩ ರೂ.
ಸುಗಂಧ ಧೂಪ	೨ ರೂ.

ಆಂಗ್ಲೊ-ಇಂಡಿಯನ್ ಟ್ರೇಡಿಂಗ ಕಂಪೆನಿ,
12, 30-10. ಮಲ್ಲೇಶ್ವರಮ್, ಬೆಂಗಳೂರು.

THE DECCAN CO.,

Cantonment, :: MANGALORE,
Agents for
"Mohini Coffee Powder"
and
"Kelagur Tea"

ಡೆಕ್ಕಾನ್ ಕಂಪೆನಿ

ಕೆಂಟೋನ್‌ಮೆಂಟ್—ಮಂಗಳೂರು.

ಕಾಫಿ ತೋಟಗಳಿಗೂ, ತೆಂಗು ಇತ್ಯಾದಿ ಫಲವಸ್ತುಗಳ ಮರಗಳಿಗೂ, ಅಡಕೆ ತೋಟಗಳಿಗೂ ಬೇಕಾಗುವ ಗೊಬ್ಬರಗಳು ಇವರಲ್ಲಿ ಯಾವಾಗಲೂ ದೊರೆಯುತ್ತವೆ.

ಪ್ರಸಿದ್ಧ "ಮೋಹಿನಿ ಕಾಫಿ ಹುಡಿ" ಮತ್ತು "ಕೆಳಗೂರ್ ಟೀ" ಇದರ ಏಜಂಟರು.

ಶ್ರೀ ಶೇಷಾಚಲ ಗ್ರಂಥಮಾಲೆಯ ಹೊಸ ಪುಸ್ತಕಗಳು.

೧. ಊರ್ಮಿಳೆ
ಉಜ್ಜ್ವಲವಾದ ಐತಿಹಾಸಿಕ ಕಥೆ.
ಬೆಲೆ ೧೦ ಆಣೆ.

೨. ತುಬ್ಬುಗಾರ ಸುಬ್ಬಣ್ಣ
ಹೃದಯವಿದಾರಕವಾದ ಪತ್ತೆದಾರಿ ಕಾದಂಬರಿ.
ಬೆಲೆ ರೂ. ೧—೪—೦.

ಕಾಯಂ ಗ್ರಾಹಕರಿಗೆ ಅಂಚೆ ವೆಚ್ಚ ಇಲ್ಲ.
೨ ರೂ. ಮ. ಆ. ಕಳುಹಿಸಿ ಬರೆಯಿರಿ.

ವಿಳಾಸ:—
ಶ್ರೀ ಶೇಷಾಚಲ ಪ್ರೆಸ್ಸ್,
ಪೋಸ್ಟ್ ಆನಂದವನ,
ಜಿ. ಧಾರವಾಡ.

(೨ನೇ ಪುಟದಿಂದ)

೩. ಲೇಬರ್ ಶಾಖೆಯವರು ಮಾಡುತ್ತಿರುವ ಕಾರ್ಯಭಾಗಗಳು ಮುಖ್ಯ—ಕೆಳಗೆ ಕಾಣಿಸಿದವುಗಳಾಗಿರುವವು. ಅವುಗಳನ್ನು ಪ್ರತ್ಯೇಕಿಸಿ ಪರಿಶೋಧಿಸಿದರೆ ಈ ಕೆಲಸವು ಯಾವ ತರದ್ದು, ಎಷ್ಟು, ಎಂಬುದನ್ನು ಎಲ್ಲರೂ ತಿಳಿಯಬಹುದು. ಪತಿತವರ್ಗದವರು ಸಮುದಾಯವಾಗಿ ಜೀವಿಸಿಕೊಂಡು ಬರುವ ಪ್ರದೇಶಗಳಲ್ಲಿ ಜನವಸ್ತಿಯ ನಿಬಿಡತೆಯನ್ನು ಹೋಗಲಾಡಿಸುವ ಬಗ್ಯೆ ಪತಿತವರ್ಗದವರಿಗೆ ಸರಕಾರದವರು ಎರಡು ರೀತಿಯಾಗಿ ಮನೆ ಅಡಿಸ್ಥಳಗಳನ್ನು ಒದಗಿಸಿಕೊಡುತ್ತಾರೆ:—

(a) ಪತಿತವರ್ಗದವರಲ್ಲಿ ಜಾಗ ಬೇಕಾದವರಿಗೆ ಸರಕಾರದವರು ತಮ್ಮ ಸ್ವಾಧೀನವಿರುವ ಖಾಲಿ ವ ಪೊರಂಬೋಕು ಸ್ಥಳಗಳನ್ನು ಮೌಲ್ಯ ಪಡಿಯದೇನೇ ಕೊಡುತ್ತಾರೆ. ಲೇಬರ್ ಶಾಖೆಯವರು ಈ ಜಿಲ್ಲೆಯಲ್ಲಿ ಕಾರ್ಯ ಪ್ರಾರಂಭ ಮಾಡಿದಂದಿನಿಂದ ೧೯೩೫ನೇ ವರ್ಷದ ಮಾರ್ಚಿ ೩೧ರ ತನಕ ಪತಿತವರ್ಗದವರಿಗೆ ಒಟ್ಟಿಗೆ ಸರಕಾರದವರು ಜಿಲ್ಲೆಯಲ್ಲಿ ೩೫,೧೬೯ ಮನೆ ಅಡಿಗಳನ್ನು ದರಕಾಸ್ತಿಗೆ ಕೊಟ್ಟಿರುತ್ತಾರೆ. ೧೯೩೧—೩೬ರ ನಡುವೆ ೧,೧೦೯ ಮನೆ ಅಡಿಗಳನ್ನು ಹೀಗೆ ದರಕಾಸ್ತಿಗೆ ಕೊಟ್ಟಿರುತ್ತಾರೆ. ದರಕಾಸ್ತಿನ ಸಾಮಾನ್ಯ ನಿಯಮಗಳಿಂದ ಪತಿತವರ್ಗದವರಿಗೆ ಪ್ರಯೋಜನ ಸಿಕ್ಕುವದಿಲ್ಲವಾದ್ದರಿಂದ ದಕ್ಷಿಣ ಕನ್ನಡ ಜಿಲ್ಲೆಯ ಪ್ರತಿಯೊಂದು ಗ್ರಾಮದಲ್ಲಿ ಪತಿತವರ್ಗದವರಿಗೆ ಕೊಡುವ ಬಗ್ಯೆ ಜಾಗಗಳನ್ನು ಮನ್ನಾ ಇಟ್ಟಿರುತ್ತಾರೆ.

(b) ಪತಿತವರ್ಗದವರಿಗೆ ಮನೆಕಟ್ಟುವ ಬಗ್ಯೆ ಸಾಕಾದಷ್ಟು ಸರಕಾರಿ ಸ್ಥಳವಿಲ್ಲದಲ್ಲಿ ಸರಕಾರದವರು ಖಾಸಗಿ ಜನರಿಂದ ಜಾಗಗಳನ್ನು ಕ್ರಯಕ್ಕೆ ಪಡಕೊಂಡು ಪತಿತವರ್ಗದವರಿಗೆ ಮನೆ ಕಟ್ಟಲಿಕ್ಕೆ ಅನುಕೂಲವಾಗುವಂತೆ ಪಾಲುಮಾಡಿ ಕೊಡುತ್ತಾರೆ. ಹೀಗೆ ಪಡಕೊಂಡ ಜಾಗಗಳ ಮೌಲ್ಯವನ್ನು ಅವರಿಂದ ಅನೇಕ ವಾರ್ಷಿಕ ಕಂತುಗಳಿಂದ ಮೆಲ್ಲನೆ ವಸೂಲುಮಾಡುತ್ತಾರೆ; ಆ ಜಾಗಗಳನ್ನು ಅರ್ಜಿ ಕೊಟ್ಟು ಅಪೇಕ್ಷಿಸಿದ ಪತಿತವರ್ಗದ ಜನರ ಹೆಸರಲ್ಲಿಯಾಗಲಿ ಅಂಥಾ ಪತಿತವರ್ಗದ ಜನರು ಒಟ್ಟಿಗೆ ಸೇರಿ ಸ್ಥಾಪಿಸಿದ ಸಹಕಾರಿ ಸಂಘಗಳ ಹೆಸರಲ್ಲಿಯಾಗಲಿ ಕೊಡುತ್ತಾರೆ. ಹೀಗೆ ಸರಕಾರದವರು ಜಾಗಗಳನ್ನು ಪಡಕೊಂಡು ಪತಿತವರ್ಗದ ಜನರಿಗೆ ಕೊಡುವಾಗ ಅವರಿಗೆ ಉಳಕೊಳ್ಳಲಿಕ್ಕೆ ಕೊಟ್ಟ ಜಾಗಗಳ ಮೌಲ್ಯವನ್ನು ಮಾತ್ರ ಅವರಿಂದ ಪಡೆಯುತ್ತಾರೆ; ಅವರ ಜಾಗಗಳ ನಡುವೆ ಮಾರ್ಗಗಳ ಯಾ ಇತರ ಸಾರ್ವಜನಿಕ ಉದ್ದೇಶದ ಬಗ್ಯೆ ಉಪಯೋಗಿಸುವ ಜಾಗಗಳ ಕ್ರಯವನ್ನು ಸರಕಾರದವರೇ ತೆರುತ್ತಾರೆ. ಈ ಕಾರ್ಯಭಾಗವನ್ನು ಆರಂಭಿಸಿದಂದಿನಿಂದ ೧೯೩೫ನೇ ವರ್ಷದ ಮಾರ್ಚಿ ೩೧ನೇ ತಾರೀಕಿನ ತನಕ ಸರಕಾರದವರು ಈ ರೀತಿಯಲ್ಲಿ ಪತಿತವರ್ಗದವರಿಗೆ ೩೫,೫೪೦ ಮನೆ ಅಡಿಗಳನ್ನು ಒದಗಿಸಿರುತ್ತಾರೆ. ಸರಕಾರದವರು ಕೊಟ್ಟ ಜಾಗಗಳನ್ನು ಪತಿತವರ್ಗದವರು ಬೇಗನೇ ರೂಪಿತಕ್ಕೆ ತರಲು ಅವರಲ್ಲಿ ಉತ್ಸಾಹವುಂಟಾಗುವಂತೆ ಸರಕಾರದವರು ಅವರಿಗೆ ಪ್ರತಿವರ್ಷವೂ ಧರ್ಮಾರ್ಥವಾಗಿ ತೆಂಗಿನಕಾಯಿ ಮೊಳಿಕೆ, ಕಶಿಮಾವಿನ ಸಸಿ ವಗೈರೆ ಕೊಡುತ್ತಾರೆ.

ಪತಿತವರ್ಗದವರಿಗೆ ಕೊಡುವ ಬಗ್ಯೆ ಖಾಸಗಿ ಮ್ಹಾಲೀಕರಿಂದ ಸರಕಾರದವರು ಪಡಕೊಳ್ಳುವ ಜಾಗಗಳ ಮೌಲ್ಯವನ್ನು ಅವರಿಂದ ಸರಕಾರದವರು ಅನೇಕ ವಾರ್ಷಿಕ ಕಂತುಗಳಿಂದ ವಸೂಲುಮಾಡಿದರೂ ಕೂಡ ಅವರ ಆರ್ಥಿಕ ಹೀನಸ್ಥಿತಿಯ ದೆಸೆಯಿಂದ ಅವರಿಗೆ ಆ ಕಂತುಗಳನ್ನು ಕೂಡ ಕೊಡುವದು ಅನೇಕ ಸಲ ಕಷ್ಟತರವಾಗಿ ತೋರುತ್ತದೆ. ಹೀಗಾಗಿ ಈ ಕುರಿತು ಬೇರೆ ಉಪಾಯವನ್ನೇನಾದರೂ ಮಾಡಬೇಕೆಂದು ಸರಕಾರದವರು ಅನೇಕ ವರ್ಷಗಳಿಂದ ಆಲೋಚಿಸುತ್ತಿದ್ದಾರೆ. ಎಕ್ರೆಗೆ ರೂಪ್ಯಾ ೧೨೫ಕ್ಕಿಂತ ಹೆಚ್ಚಿನ ಬೆಲೆಯಾಗದ ಬೆಟ್ಟು ಸ್ಥಳಗಳನ್ನಾಗಲಿ, ಎಕ್ರೆಗೆ ರೂಪಾಯಿ ೨೫೦ಕ್ಕಿಂತ ಹೆಚ್ಚಿನ ಬೆಲೆಯಾಗದ ನಂಜ ಸ್ಥಳಗಳನ್ನಾಗಲಿ, ಪತಿತವರ್ಗದವರಿಗೋಸ್ಕರವಾಗಿ ತಾವು ಪಡ

ನ್ಯೂ ಮೊಡಲ್ ಗಡಿಯಾರ.

3 ವರುಷಗಳ ಗ್ಯಾರಂಟಿ.

(ದಿನಸಕ್ಕೆ ಒಂದಾವರ್ತಿ ಬೀಗ ಕೊಡುವುದು.)

ಈ ಗಡಿಯಾರಗಳು ಹೊಸದಾಗಿ ತಯಾರು ಮಾಡಿತರಿಸಿದ್ದೇವೆ. ಸೀಮೆಯ ನಿಕ್ಕಲ್ ಲೋಹದ ಸ್ಟಾಂಡಿನಲ್ಲಿ ತಯಾರಿಸಿದ್ದೇವೆ. ಈ ಗಡಿಯಾರವು ಖರಾರು ಗಂಟೆಯನ್ನು ತೋರಿಸುವುದು. ಖಾತ್ರಿಯಾದ 3 ವರುಷಗಳ ಗ್ಯಾರಂಟಿ ಕೊಡುವೆವು. ಈ ಗಡಿಯಾರಗಳನ್ನು ಗುಡಿ, ಸ್ಕೂಲು, ರೀಡಿಂಗ್‌ರೂಮ್ ಹಾಲುಗಳಲ್ಲಿ ಮುಂತಾದ ಜಾಗದಲ್ಲಿ ಗೋಡೆಗೆ ತಗಲಿಸಿದರೆ ಅಂದವಾಗಿರುವುದು. ಕ್ರಯ ಗಡಿಯಾರ 1ಕ್ಕೆ ರೂ. 3. ಟಪಾಲು ಖರ್ಚು ಪ್ರತ್ಯೇಕ.

ವಿ. ಎಸ್. ವಾಚ್ ಕಂಪೆನಿ,
8, 3-11. ಇರುಳಪ್ಪನ ಬೀದಿ, ಮದ್ರಾಸು

ಬಂಜೆತನ:—'ರಾಹತ್' ಬಂಜೆತನವನ್ನು ಉಂಟುಮಾಡುವಲ್ಲಿ ಖಾತರಿ ಔಷಧವಾಗಿದೆ. ಮೂರು ದಿನಗಳ ಉಪಯೋಗದಿಂದಲೇ, ಶರೀರಕ್ಕೆ ಯಾವ ವಿಧವಾದ ಹಾನಿಯೂ ಉಂಟಾಗದಂತೆ, ಅಥವಾ ಕ್ರಮವಾದ ಮುಟ್ಟುಚಟ್ಟಿಗೇನೂ ಬಾಧಕ ತಟ್ಟದಂತೆ ಮಾಡಿ ಇಡೀ ಜೀವಮಾನದಲ್ಲಿಯೇ ಗರ್ಭಧಾರಣೆಯ ಕ್ಲೇಶದಿಂದ ನಿಶ್ಚಯವಾಗಿಯೂ ಪಾರು ಮಾಡುವ ಶಕ್ತಿಯುಳ್ಳದ್ದು. ಆರ್ಡರ್ ಕೊಡುವುದರೊಡನೆ ಗ್ಯಾರಂಟಿ ಫಾರ್ಮನ್ನೂ ಕಳುಹಿಸಲಾಗುತ್ತದೆ.

ಬೆಲೆ ರೂ. 5—8, ವಿದೇಶ ಶಿಲ್ಲಿಂಗ್ 10.

ವಿಲಾಸವಟಿ:—ಅತ್ಯುತ್ಕೃಷ್ಟವಾದ ಬಿಗಿಯಾದ ಟಾನಿಕ್ ಮಾತ್ರೆಗಳು.

ಬೆಲೆ ರೂ. 1–6, ವಿದೇಶ ಶಿಲ್ಲಿಂಗ್ 2–6.

ರಾಜವಟಿ:—ನಿಂತು ಹೋದ ಮುಟ್ಟನ್ನು ಕ್ರಮಗೊಳಿಸಿ, ಅಕ್ರಮವಾದ ಮುಟ್ಟನ್ನೂ ವ್ಯವಸ್ಥೆಗೆ ತರುವುದು.

ಬೆಲೆ ರೂ. 5—8. ವಿದೇಶ ಶಿಲ್ಲಿಂಗ್ 10.

DR. S. H. KHAN,
6, Tapia Mansion, Erskin Road,
BOMBAY 4.

ಸುಸಂಧಿ! ಕಳೆದುಕೊಳ್ಳಬೇಡಿರಿ!

ಶ್ರೀ ಸರಸ್ವತೀ ಭಂಡಾರ.

ಕೆಳಗೆ ಕಂಡ ಪುಸ್ತಕಗಳ ಪೈಕಿ 3 ಪುಸ್ತಕಗಳನ್ನು ಕೊಂಡುಕೊಳ್ಳತಕ್ಕವರಿಗೆ 'ಸೌಭಾಗ್ಯ ಲಲಿತೆ' ಎಂಬ ರೂ. 0—8—0 ಬೆಲೆಯುಳ್ಳ (ಸ್ವಾರಸ್ಯವಾದ. ಕಥೆ) ಪುಸ್ತಕವನ್ನು (ಪುಕ್ಕಟೆ) ಕಳುಹಿಸುತ್ತೇವೆ.

ಕಾದಂಬರಿಗಳು.

ಧರ್ಮಸಾಮ್ರಾಜ್ಯ ರೂ. 1-4-0; ಯುಗಳಾಂಗುರಿಯ ರೂ. 0-6-0; ವಿಮಲಾದೇವಿ ರೂ. 1-12-0, ವಿವೇಕೋದಯ ರೂ. 0-12-0; ಶಂಸಾರ ಚಿತ್ರ ರೂ. 0-12-0; ಜಗನ್ಮೋಹಿನಿ ರೂ. 1—0—0; ಮಿಂಚು ರೂ. 0-12-0; ಅಂತರಂಗ ರೂ. 1-0-0; ಬ್ಯಾ. ರಾಮಚಂದ್ರನ್ ರೂ. 0-6-0; ತುಲಸೀದಾಸ ರಾಮಾಯಣ ರೂ. 2-8-0. (ನಮ್ಮ ಕ್ಯಾಟಲಾಗು ಉಚಿತ.)

ನಮ್ಮ ವಿಳಾಸ:—ಶ್ರೀ ಸರಸ್ವತೀ ಭಂಡಾರ,
ಪ್ರಸಿದ್ಧ ಪುಸ್ತಕ ವ್ಯಾಪಾರಿಗಳು ಮತ್ತು ಪ್ರಕಾಶಕರು,
ಅವಿನ್ಯೂ ರೋಡ್, ಬೆಂಗಳೂರು ಸಿಟಿ.

WANTED

At once a few canvassers for South Kanara and Malabar to book orders for new year gifts on monthly salary of Rs. 15/— with T. A. Selected candidates will have to deposit Rs. 25/— towards samples.

Apply:—

The Pioneer General Insurance & Mercantile Agencies


ದಿ ವಿವರ್ ರೆಡಿ ಕಂಪೆನಿ
(ಇಂಡಿಯಾ) ಲಿಮಿಟೆಡ್
ಪ್ರಸಿದ್ಧ ಮಾಡುವ
ಹೊಸ
ಮುಖ್ಯವಾಗಿ
ವೃದ್ಧಿಮಾಡಿ ನಿರ್ಮಸಿರುವ
ಹೊಸನಮೂನೆ
"ಬೆರಿಕ್" ಬೇಟರಿ
ಸ್ಥಳ ಬೆಲೆಯಿಲ್ಲದ್ದೂ
ಆಗಿರುವ
ಹೆಚ್ಚು ಪ್ರಕಾಶ ವುಳ್ಳದ್ದೂ
ಹೆಚ್ಚು ಬಾಳು ವಂಥಾದ್ದೂ
1000
BEREC
TRADE MARK
Your Guarantee of Quality
BEREC
TRADE MARK

ಡಿಸ್ಟ್ರಿಬ್ಯೂಟರ್ಸ್
ದಿ ಬೊಂಬೇ ಕಂಪನಿ ಲಿಮಿಟೆಡ್, ಮದ್ರಾಸ್, ಅಲಪ್ಪಿ,
ರೂಬ್ಬೆ, ಲೆಲಿರೂಟ, ಕ್ಲೈಲೋನ್.

B

ANNOUNCING

Bridgestone Tyres

BRIDGE STONE

Sole Importers

Messrs. Mitsui Bussan Kaisha Ltd.
MADRAS

Local Distributor

(೩ನೇ ಪುಟದಿಂದ)

ವನ್ನು ಪತಿತವರ್ಗದವರಲ್ಲಿ ಯಾರು ಆ ಸ್ಥಳಗಳನ್ನು ಅಪೇಕ್ಷಿಸುತ್ತಾರೋ ಅವರಿಂದ ಪಡಕೊಂಡು ಅವರಿಗೆ ಸ್ಥಳಗಳನ್ನು ಕೊಡುವ ಹೊಸ ಧೋರಣೆಯೊಂದನ್ನು ಸರಕಾರದವರು ಈಗ ಕೈಕೊಂಡಿರುವರು. ಈ ಅರ್ಧಾಂಶದ ಪೈಕಿ ಶೇಕಡಾ ೫೦ರಷ್ಟನ್ನು ಆಯಾಯ ಜಾಗಗಳನ್ನು ಅಪೇಕ್ಷಿಸುವ ಜನರು ಸರಕಾರದವರು ಆ ಜಾಗಗಳನ್ನು ಅವರ ಬಗ್ಗೆ ಪಡಕೊಳ್ಳುವ ಮುಂಚಿತವಾಗಿ ತೇವಣಾತಿ ಇಡಬೇಕು. ಬಾಕಿ ಇರುವ ಶೇಕಡಾ ೫೦ನ್ನು ನಂತರ ಹತ್ತಕ್ಕೆ ವಿೂರದ ಕಂತುಗಳಿಂದ ಬಡ್ಡಿ ಸಹಿತ ಅವರು ಕೊಡಬೇಕು. ಬರುವ ವರ್ಷ ಈ ಹೊಸ ಯೋಜನೆಯನ್ನು ಜ್ಯಾರಿಗೆ ತರುವುದೆಂದು ಸರಕಾರದವರು ನಿಶ್ಚೈಸಿರುತ್ತಾರೆ. ಈ ರೀತಿ ಪತಿತವರ್ಗದವರಿಗೆ ಅವರ ಈಗಿನ ಸಂಕಷ್ಟಗಳಲ್ಲಿ ಹೆಚ್ಚಿನ ಅಂಶವ್ಯನಿವಾರಣೆಯಾಗಬಹುದೆಂದು ಸರಕಾರದವರು ಎಣಿಸುತ್ತಾರೆ.

೪. ಸಹಕಾರ ಸಂಘಗಳು.

ಲೇಬರ್ ಶಾಖೆಯವರು ಪತಿತವರ್ಗದವರ ಸಹಾಯಾರ್ಥವಾಗಿ ಅನೇಕ ಸಹಕಾರ ಸಂಘಗಳನ್ನು ಸ್ಥಾಪಿಸಿ ನಡೆಸುತ್ತಾರೆ. ಅವುಗಳ ಉದ್ದಿಶ್ಯಗಳನ್ನು ಈ ಕೆಳಗೆ ಕೊಟ್ಟಿರುತ್ತದೆ:—

(i) ಪತಿತವರ್ಗದವರು ಮನೆ ಅಡಿ ಸ್ಥಳಗಳನ್ನು ಪಡಕೊಳ್ಳುವ ಸಂದರ್ಭದಲ್ಲಿ ಅವರಿಗೆ ಬೇಕಾಗುವ ಮುಬಾದಿಲೆಗಳನ್ನು ಕೊಡುವದು.

(ii) ಜಾನುವಾರ, ನೇಗಿಲು, ಬೀಜ, ವಗ್ಗೈರೆ ಕ್ರಯಕ್ಕೆ ಪಡಕೊಂಡು ಕೃಷಿ ವೃದ್ಧಿ ಮಾಡುವ ಬಗ್ಗೆ ಅವರಿಗೆ ಮುಬಾದಿಲೆಗಳನ್ನು ಕೊಡುವದು.

(iii) ಪತಿತವರ್ಗದವರಿಗೆ ಅಗತ್ಯ ಬೀಳುವ ಸಾಮಾನ್ಯ ಸಾಲಗಳನ್ನು ಅವರಿಗೆ ಕೊಡುವುದು.

(iv) ಅವರಿಗೆ ಸರಕಾರಿ ಜಾಗಗಳನ್ನು ಗೇಣಿಗೆ ಪಡಕೊಳ್ಳುವ ವಿಷಯ ಸಹಾಯ ಮಾಡುವುದು.

(v) ಅವರಲ್ಲಿ ನೆರೆಹಾವಳಿಯಿಂದುಂಟಾಗುವ ಸಂಕಷ್ಟಗಳ ನಿವಾರಣೆಯನ್ನು ಮಾಡುವದು.

ಪತಿತವರ್ಗದವರ ಮತ್ತು ಹಿಂದುಳಿದ ವರ್ಗದವರ ಬಗ್ಗೆಯೆಂತಲೇ ಸ್ಥಾಪಿಸಿದ ಸಹಕಾರ ಸಂಘಗಳು ೧೯೩೫ನೇ ವರ್ಷದ ಜೂನು ಅಂತ್ಯಕ್ಕೆ ೨೬೭೬ ಇದ್ದವು. ಅವುಗಳಲ್ಲಿ ಒಟ್ಟು ಮೆಂಬರರು (ಸದಸ್ಯರು) ಕೊಟ್ಟ ೯೦೫೫ ಲಕ್ಷ ರೂಪಾಯಿ ಪಾಲಿನ ಬಂಡವಾಳವಿದ್ದು ಅಂಥಾ ಮೆಂಬರರು ೧೪೫,೨೬೨ ಜನರಿದ್ದರು. ದಕ್ಷಿಣ ಕನ್ನಡದಲ್ಲಿ ಈಗ ಅಂಥಾ ಸಹಕಾರ ಸಂಘಗಳು ೩೮ ಇವೆ. ಲೇಬರ್ ಶಾಖೆಯ ಕೆಳಗೆ ಇರುವ ಸಂಘಗಳನ್ನು ಆ ಸಂಘಗಳೆಲ್ಲಾ ಸಹಕಾರ ಶಾಖೆಯ ಮೇಲ್ವಿಚಾರಕ್ಕೊಳಗಾಗುವಂತೆ ೧೯೩೭ರಲ್ಲಿ ಸಹಕಾರ ಶಾಖೆಯ ಕೆಳಗೆ ಇಟ್ಟಿರುತ್ತಾರೆ. ಆದರೂ ಲೇಬರ್ ಕಮಿಶನರರು ಅಲ್ಲಲ್ಲಿ ಇಂಥಾ ಹೊಸ ಸಂಘಗಳನ್ನು ಸ್ಥಾಪಿಸುವ ಕುರಿತು ಈಗಲೂ ಮನಸ್ಸು ಕೊಡುತ್ತಾರೆ.

ಮೇಲೆ ಹೇಳಿದ ಉದ್ದಿಶ್ಯಗಳಿಗಾಗಿ ಪತಿತವರ್ಗದ ಜನರಿಗೆ ಪ್ರತ್ಯೇಕವಾಗಿ ಕೂಡಾ ಸರಕಾರದವರು ಮುಬಾದಿಲೆಗಳನ್ನು ಕೊಡುತ್ತಾರೆ. ಇದಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳು ಜ್ಯಾರಿಗೆ ಬಂದಂದಿನಿಂದ ೧೯೩೫ನೇ ವರ್ಷದ ಮಾರ್ಚಿ ೩೧ರ ತನಕ ಸರಕಾರದವರು ಹೀಗೆ ಪತಿತ ವರ್ಗದವರಿಗೆ ವೈಯಕ್ತಿಕವಾಗಿಯೂ, ಸಹಕಾರ ಸಂಘಗಳ ಮೂಲಕವಾಗಿಯೂ ಮತ್ತೂರೆ ೨೩,೭೫,೪೮೦ ರೂಪಾಯಿ ಮೊಬಾದಿಲೆಗಳನ್ನು ಕೊಟ್ಟಿರುತ್ತಾರೆ. ಇದರ ಪೈಕಿ ೨೨,೬೦,೫೮೭ ರೂಪ್ಯಾಯು ಮನೆ ಅಡಿಸ್ಥಳಗಳನ್ನು ಪಡಕೊಳ್ಳುವ ಬಗ್ಗೆಯೂ ಉಳಿದ ಹೊಬಲಗು ಮೇಲೆ ಹೇಳಿದ ಇತರ ಉದ್ದಿಶ್ಯಗಳ ಬಗ್ಗೆಯೂ ಕೊಟ್ಟದ್ದಾಗಿರುತ್ತದೆ.

೫. ಪತಿತವರ್ಗದವರಿಗೋಸ್ಕರ ಶಾಲೆಗಳನ್ನು ಸ್ಥಾಪಿಸುವದು. ಪತಿತವರ್ಗದ ವಿದ್ಯಾರ್ಥಿಗಳಿಗೆ ಸಂಬಳ, ವೇತನಗಳನ್ನು ಕೊಡುವದು.

(ಮುಂದರಿಯುವುದು)

ಈ ಕೆಳಗಣ ಯಾವುದಾದರೂ ನಿಮ್ಮ ಗೊಡವೆಗಿದೆಯೇ?



- ಕಟ್ಟೋಣದ ನಿರ್ಮಾಣ
- ಕೊಂಕ್ರೀಟಿನ ನೆಲಹಾಸೋಣ
- ಕೊಂಕ್ರೀಟು ಸಾಧನಗಳನ್ನುಂಟಾಗಿಸೋಣ
- ನೀರ್ಕೊಳ್ಳದಂತೆ ಮಾಡುವ ಉಪಾಯ
- ಗಾರೆ ಹಚ್ಚುವುದು
- ಕೊಂಕ್ರೀಟಿಗೆ ಬಣ್ಣವಿಡೋಣ, ಅಥವಾ
- ಸಿಮೆಂಟಿನ ಉಪಯೋಗದ ಕುರಿತಾದ ಇತರ ವಿಷಯಗಳು

ಉಚಿತ ಕಾಣಿಕೆ

ಈ ಕೆಳಗಣ ಯಾವುದಾದರೂ ಪುಸ್ತಕಗಳಲ್ಲಿ ನಿಮಗೆ ಅಭಿರುಚಿಯಿದ್ದರೆ, ನಿಮಗೆ ಬೇಕಾದವುಗಳ ಎದುರಿಗೆ ಗುಣಾಕಾರ ಗುರುತನ್ನು ಹಾಕಿ ಈ ವಿಭಾಗವನ್ನು, ನಿಮ್ಮ ಹೆಸರು ಮತ್ತು ವಿಳಾಸವನ್ನು ಬರೆದು ಕಳುಹಿಸಿ ಕೊಡುವರೆ ವಿಳಾಸ:—

P. O. Box No. 312, MADRAS.

ಹೆಸರು .....

ವಿಳಾಸ .....

ಉದ್ಯೋಗ (ವಿದ್ಯಾರ್ಥಿಯಾಗಿದ್ದಲ್ಲಿ ಕಲಿಯುವದೆಲ್ಲೆಂದು ನಮೂದಿಸಿರಿ) .....

.....

K. M. 4.

1. ಇಂಡಿಯದ ಕೊಂಕ್ರೀಟ್ ಅಸೋಸಿಯೇಶನ್, ಅದು ಏನು, ಎಂಬುವುದು ವಗ್ಗೈರೆ.
2. ಕೊಂಕ್ರೀಟ್ ಅಸೋಸಿಯೇಶನ್ ಒಫ್ ಇಂಡಿಯಾ—ರೊನಿಯೊ ಡೈರಿ ಪುಸ್ತಕ ವಹಿ.
3. ಕೊಂಕ್ರೀಟ್ ತಯಾರಿಕೆಯ ಮೂಲಸೂತ್ರಗಳು.
4. ಕೊಂಕ್ರೀಟ್ ತಳಗಳು ಮತ್ತು ಕಾಲುಹಾದಿಗಳು.
5. ಕೊಂಕ್ರೀಟ್ ನೆಲದ ಮೇಲ್ಬಾಗ.
6. ಸಿಮೆಂಟ್ ನೆಲದ ಹಂಚುಗಳು.
7. ಕೊಂಕ್ರೀಟ್ ಬೇಲಿಗಳು ಮತ್ತು ಗೇಟುಕಂಭಗಳು.
8. ಕೊಂಕ್ರೀಟ್ ಕೊರಡುಗಳು, ಹಾಸುಕಲ್ಲುಗಳು ಮತ್ತು ಇಟ್ಟಿಗೆಗಳು.
9. ಸಿಮೆಂಟ್ ಪ್ಲಾಸ್ಟರಿಂಗು. (ಗಿಲಾವು)
10. ಸಿಮೆಂಟ್ ಗಾರೆಯು ಲಾಭಕರವು.
11. ಕೊಂಕ್ರೀಟ್ ಲಿಂಟಲುಗಳು. (ಜಪ್ಪಡಿಗಳು)
12. ಕೊಂಕ್ರೀಟ್ ಉತ್ಪನ್ನಗಳು.
13. ಪೋರ್ಟ್‌ಲ್ಯಾಂಡ್ ಸಿಮೆಂಟಿನ ಸಾಮಾನ್ಯ ವಿವರಣೆ.
14. ಕೊಂಕ್ರೀಟ್ ಮೆಟ್ಟಲುಗಳು.
15. ಚಿಕ್ಕ ಕೊಂಕ್ರೀಟ್ ಟಾಂಕಿಗಳು ಮತ್ತು ಅವನ್ನು ಕಟ್ಟುವುದು ಹೇಗೆ?
16. ಈಜಾಡುವ ಕೆರೆಗಳು.
17. ಸಿಮೆಂಟಿನ ಮುನಿಸಿಪಲ್ ಉಪಯೋಗ.
18. ಪೋರ್ಟ್‌ಲ್ಯಾಂಡ್ ಸಿಮೆಂಟನ್ನು ದಾಸ್ತಾನು ಮಾಡುವ ವಿಧಾನ.
19. ಬೇಗನೆ ಘಟ್ಟಿಯಾಗುವ ಸಿಮೆಂಟುಗಳು.
20. ಇಂಡಿಯದಲ್ಲಿ ಸಿಮೆಂಟ್ ರಸ್ತೆಗಳು.
21. ಪೋರ್ಟ್‌ಲ್ಯಾಂಡ್ ಸಿಮೆಂಟಿನ ಕೊಂಕ್ರೀಟ್ ರಸ್ತೆಗಳು ಮತ್ತೂ ನಗರಬೀದಿಗಳ ಸಾಮಾನ್ಯ ವಿವರಣೆ.
22. ಸಿಮೆಂಟ್ ಮೆಕಡಾಮ್ ರೋಡಿನ ವಿವರಣೆ.
23. ಕೊಂಕ್ರೀಟ್ ರಸ್ತೆಯ ನಿರ್ಮಾಣದ ಕುರಿತಾದ ಓವರಸಿಯರರ ಮ್ಯಾನುವೇಲ್.
24. ಕೊಂಕ್ರೀಟ್ ರಸ್ತೆಯ ದುರುಸ್ತಿ.
25. ಕೊಂಕ್ರೀಟ್ ರಸ್ತೆಗಳನ್ನು ಕಾಪಾಡುವುದು.
26. ಕೊಂಕ್ರೀಟ್ ವ್ಹೀಲ್ ಟ್ರ್ಯಾಕುಗಳ ಕ್ರೀಟ್ ದಾರಿಗಳು.
27. ಜತೆಗೂಡಿಸಿದ ಕೊಂಕ್ರೀಟ್ ರಸ್ತೆಗಳು.
28. ರಸ್ತೆಯ ಮೇಲ್ಬಾಗದ ವೆಚ್ಚದ ಹೋಲಿಕೆ.
29. ಬಂಗಲೆಗಳಿಗೆ ಕೊಂಕ್ರೀಟಿನ ವಾಹನದ ದಾರಿಗಳು.
30. ಕಾರ್ಖಾಗಳಿಗೆ ರೆಕ್ಕೆಗಳಿದ್ದಲ್ಲಿ ರಸ್ತೆಗಳು ಗಮನಿಸುತ್ತಿರಲಿಲ್ಲ.
31. ಭೂಕಂಪಗಳು—ಕಂಪನದ ಶಕ್ತಿಯನ್ನು ತಡೆಯುವ ಒಂದೇ ಕಲ್ಲಿನ ಸ್ತಂಭದ ಚಿಕ್ಕ ಕೊಂಕ್ರೀಟ್ ಕಟ್ಟೋಣಗಳ ಪರಿಚ್ಛೇದನ.
32. ಪುಷ್ಟೀಕರಿಸಲ್ಪಟ್ಟ ಕೊಂಕ್ರೀಟುಗಳು—ಸುಲಭ ಮಾದರಿಗಳ ಕೋಷ್ಟಕ.
33. ಕೊಂಕ್ರೀಟ್ ಟೆನ್ನಿಸ್ ಕೋರ್ಟಿನ ಮಾದರಿ.
34. ಕೊಂಕ್ರೀಟ್ ಕಲ್ಲುಕೆಲಸದ ರಚನೆ.
35. ಕೊಂಕ್ರೀಟಿನ ಸಂಕಗಳು.
36. ಮುಂಚಿತವಾಗಿ ಪ್ಲಾನ್ ಮಾಡುವುದು.

ದಾಸಯ್ಯನ ಜೋಳಿಗೆ.

ಕಂಠೀರವ! ನಿನಗೂ ನಿನ್ನ ವಾಚಕರಿಗೂ ನನ್ನ ಅಜ್ಞಾತವಾಸದಿಂದ ಕೋಪವಿರಬಹುದು. ದಸರೆಯ ಸಮಯದಲ್ಲಿಯಾದರೂ ನಿಮಗೆ ಆಹ್ವಾನ ಕಳುಹಿಸದೇ ಹೋದುದಕ್ಕಾಗಿ ಬಹಳ ಬೇಸರವೂ ಇರಬಹುದು. ದೊಡ್ಡವರು ಹೇಳಿದ್ದಾರೆ:—

ಕೋಪವೆಂಬುದನರ್ಥಸಾಧನ ।
ಕೋಪವೇ ಸಂಸಾರಬಂಧನ ।
ಕೋಪದಿಂದುರುತರದ ಸುಕೃತವು
ಲಯವನೈದುಪಡು ॥

ಹೀಗೆಂದು. ಆದ್ದರಿಂದ ಕೋಪವನ್ನು ಮಾಡಬಾರದು. ದಾಸಯ್ಯನ ಕಷ್ಟ ಜಗದೀಶ್ವರನಿಗೇ ಪ್ರೀತಿ! ಇತ್ತ ಜೋಳಿಗೆ ಹರಕು, ಮನೆ ತುಂಬಾ ಮುರುಕು. ಸಂಪತ್ತಿನ ಮನೆ ಇಲ್ಲ; ಆಪಾದನೆ ಹೆಚ್ಚು. ಮಂತ್ರವಿಲ್ಲ; ಉಗಳು ತುಂಬಾ. ಕಾಳಿಲ್ಲ; ತಿರುಗಾಟ ಹೆಚ್ಚು. ಈ ಬಡಿದಾಟಗಳಲ್ಲಿ ಕಂಠೀರವನ ಕಡೆ ತಿರುಗಿ ನೋಡಲೂ ಸಹ ಪುರಸತ್ತಿಲ್ಲ. ಏನು ಮಾಡುವುದು? ಬಂದದ್ದೆಲ್ಲಾ ಬರಲಿ; ಗೋವಿಂದನ ದಯವೊಂದಿದ್ದರೆ ಸಾಕು. ಯಾರು ಕೋಪ ಮಾಡಿದರೂ ಯಾರು ಏನೆಂದರೂ ದಾಸಯ್ಯನೇನೋ 'ತದ್ಭೃತ್ಯ ಭೃತ್ಯ ಪರಿಚಾರಕ ಭೃತ್ಯಸ್ಯ ಭೃತ್ಯ ನಾಂ ಸ್ಮರ ಲೋಕನಾಥಃ' ಗಾನವನ್ನು ಹಾಡುತ್ತಾ ಹೋಗುವನಷ್ಟೆ!

ಕಂಠೀರವನ ಹಾಡು ಹಾಗಿರಲಿ. ವಾಚಕರು 'ಆನೆಗೆ ಅಂಕುಶದ ಸನ್ನೆ'ಯಂತೆ ದಾಸಯ್ಯನನ್ನು ನಿಂದಿಸಿದ್ದೆ ನಿಂದಿಸಿದ್ದು. ಪಾಪ! ಅವರಭಿಮಾನ ದಾಸಯ್ಯನ ಮೇಲೆ ತುಂಬಾ. ನಮ್ಮ ಹಳೆಯ ಸ್ನೇಹಿತರು ಲಕ್ಷ್ಮಣ ಮೂರ್ತಿಗಳೂ ಸಹಾ ದಾಸಯ್ಯನ ಲೇಖನದ ಸುದ್ದಿಯನ್ನು ಪ್ರಸ್ತಾಪಿಸಿದರು. ಅದ್ಯಾರೋ ನಾಗರಾಜರು ದಾಸಯ್ಯ ಮಡಿದನೇನೆಂದು ಪ್ರಶ್ನೆ ಹಾಕಿದರು. ಠೈಲ ಮಿತ್ರರಂತೂ ದಾಸಯ್ಯನ ಗಲಿಬಿಲಿಯ ಮಾತೆತ್ತಿ ಅದೆಲ್ಲಿ ಅಡಗಿದನೋ, ಏನಾದನೋ ಎಂದು ಮೂದಲಿಸಿದರ್ದು. ಏನು ಮಾಡುವುದು? 'ಉದರನಿಮಿತ್ತಂ ಬಹುಕೃತ ವೇಷಂ' ಎಂದು ಆಚಾರ್ಯವರ್ಯರು ಹೇಳಿದಂತೆ ಭಜ ಗೋವಿಂದಂ ಗೀತೆಯನ್ನು ಹಾಡುತ್ತಾ ತಮ್ಮ ಸೇವೆಗೆ ಬಂದಿರುತ್ತೇನೆ. ಎಷ್ಟಿದ್ದರೂ ಕ್ಷಮಿಸಿ. ಜುಲ್ಮಾನೆಗಿಲ್ಮಾನೆ ಹಾಕೀರಾ!

* * * *

'ಹಳೆ ಗಂಡನ ಪಾದವೇ ಗತಿ' ಎಂದಳಂತೆ ಪುಣ್ಯಾತ್ಮಗಿತ್ತಿಯೊಬ್ಬಳು. ಏನೂ ಅಂದರ್ಮೇಲೆ ಒಬ್ಬಾಕೆ ನೆಮ್ಮದಿಯಾಗಿ ಸಂಸಾರ ಮಾಡಿಕೊಂಡಿದ್ದಳು. ಒಬ್ಬನೇ ಗಂಡ. ಮಕ್ಕಳಿಲ್ಲ. ನೆರಮನೆಯ ಗಯ್ಯಾಳಿ ಗಂಗಮ್ಮನು ಇವಳಿಗೆ ಗಂಟುಬಿದ್ದು ಪರಸಹವಾಸ, ಪರಗೃಹವಾಸ, ಪರಸ್ಥಳನಿವಾಸಗಳ ರುಚಿ ಹಚ್ಚಿಕೊಟ್ಟಳು. ಸಮಯ ಬಂತು ಆಕೆಗೆ. ಹೊರಟೇ ಹೋದಳು ಹಳೆ ಗಂಡನನ್ನು ಬಿಟ್ಟು. ಪಾಪ! ಹೊಸ ಗಂಡ. ಎಷ್ಟು ದಿನ ಹಾಕಾನು ಅನ್ನ? ಅಷ್ಟೇ ಅಲ್ಲದೆ ಈ ಪುಣ್ಯಾತ್ಮಗಿತ್ತಿಗೆ ಹೊಸ ಹೊಸ ದಾರಿ ಹುಡುಕುವ ಅಭ್ಯಾಸದಲ್ಲಿ ಒಂದೇ ಕಡೆ ಉಳಿಯುವ ಕಷ್ಟವು ಹೇಗೆ ಸರಿಬಂದೀತು? ಸರಿ ಅವನಿಗೆ ಬತ್ತೀ ಕೊಟ್ಟು 'ಹಳೆ ಗಂಡನ ಪಾದವೇ ಗತಿ' ಎಂದು ಬಂದುಬಿಟ್ಟಳಂತೆ. ಅವನೂ ಪಾಪ! ಶುದ್ಧಿ ಪ್ರಕರಣವನ್ನು ಬ್ರಾಹ್ಮಣರಿಂದ ಮಾಡಿಸಿ ಅವಳನ್ನು ಮತ್ತೆ ಪವಿತ್ರಳನ್ನಾಗಿ ಮಾಡಿಕೊಂಡನಂತೆ!

ಹಾಗಾಯಿತು ನಮ್ಮ ಹೀರಾಲಾಲ್ ಸಾಬರ ಗತಿ. ಹಿಂದೂಮತ ಅಸಹ್ಯವಾಗಿ, ತಂದೆತಾಯಿಗಳ ಮಾತು ಅಪಥ್ಯವಾಗಿ, ಅಭಕ್ಷ ಭೋಜನ-ಅಪೇಯ ಪಾನಗಳ ರುಚಿಗಾಗಿ ಯಾರು ಏನೆಂದರೂ ನಿರ್ಭಯವಾಗಿ ಸಾಬರಾಗಿಬಿಟ್ಟರು! ಸಾಬರುಗಳೂ ಸಹ ಹೊಸ ಸಾಬಿಯನ್ನೂ ಮೆರವಣಿಗೆ ಮಾಡಿ ಹೊಸ ಹಕ್ಕಿಗಳನ್ನು ಹಿಡಿಯಲು ಹಳೆ ಹಕ್ಕಿಯನ್ನು ಉಪಯೋಗಿಸುವಂತೆ, ಆನೆಗಳನ್ನು ಹಿಡಿಯಲು ಆನೆಯನ್ನು ಉಪಯೋಗಿಸುವಂತೆ ಈ ಸಾಬಿಯನ್ನೂ ಮುಂದೆ

(೬ನೇ ಪುಟ ನೋಡಿ)

ಉತ್ತರಗಳನ್ನು ಸ್ವೀಕರಿಸುವ ಕಡೆಯ ದಿನ 15—12—'36.
ಫಲಿತಾಂಶವನ್ನು ಪ್ರಕಟಿಸುವ ದಿನ 25—12—'36.

1000 ರೂಪಾಯಿಗಳ ಬಹುಮಾನ

ನಾಲ್ಕು ಕೂಪನ್‌ಗಳೂ ಸರಿಯಾಗಿ ಕಳಿಸಿದವರಿಗೆ	ರೂ. 500—0—0
ಒಂದು ಕೂಪನ್ ತಪ್ಪುಳ್ಳವರಿಗೆ	ರೂ. 200—0—0
ಎರಡು ಕೂಪನ್‌ಗಳು ತಪ್ಪುಳ್ಳವರಿಗೆ	ರೂ. 100—0—0

ಇತರ ಬಹುಮಾನಗಳು

4 ಕೂಪನ್‌ಗಳೂ ಸರಿಯಾಗಿ ಕಳಿಸಿದ ಪ್ರಥಮ ಸ್ತ್ರೀಗೆ	ರೂ. 50—0—0
4 ಕೂಪನ್‌ಗಳೂ ಸರಿಯಾಗಿ 1-12-'36ರೊಳಗೆ ಕಳಿಸಿದವರಿಗೆ	ರೂ. 50—0—0
ಹೆಚ್ಚಾಗಿ ಕೂಪನ್‌ಗಳು ಯಾರು ಕಳಿಸುವರೊ ಅವರಿಗೆ	ರೂ. 50—0—0
ಮೇನೇಜರರು ಇಷ್ಟಾನುಸಾರ ಐದ್ದರು ಬಹುಮಾನ	ರೂ. 50—0—0

ನಾಲ್ಕು ಕೂಪನ್‌ಗಳ ಉತ್ತರಗಳನ್ನು ಇಂಡಿಯನ್ ಬ್ಯಾಂಕ್ ಲಿಮಿಟೆಡ್ ಮದ್ರಾಸಿನ ಹೆಡ್ಡಾಫೀಸಿನಲ್ಲಿ ಡಿಪಾಸಿಟ್ ಮಾಡಲಾಗಿದೆ.

1	2	3	4
5	5	5	5

ಉತ್ತರಗಳನ್ನು ಕಂಡುಹಿಡಿಯುವ ಬಗೆ:—ಮೇಲಿನ ನಾಲ್ಕು ಚದುರಗಳಲ್ಲೂ 0ಯಿಂದ 10ರ ವರೆಗೆ ಸಂಖ್ಯೆಯನ್ನು ಉಪಯೋಗಿಸಿ, ಎಲ್ಲಾ ಕಡೆಗಳಿಂದಲೂ (ಮೇಲಿಂದ ಅಡ್ಡವಾಗಿ, ಪಕ್ಕಗಳಿಂದ, ಮೂಲೆಗಳಿಂದ) 15 ಬರುವಂತೆ ಬಿಳಿ ಕಾಗದದಲ್ಲಿ ಬರೆದುಕಳುಹಿಸಬೇಕು. ಒಂದು ಸಲ ಉಪಯೋಗಿಸಿದ ಸಂಖ್ಯೆಯನ್ನು ಅದೇ ಚದುರದಲ್ಲಿ ತಿರುಗಿ ಉಪಯೋಗಿಸಕೂಡದು.

ನಿಬಂಧನೆಗಳು.

1. ಒಂದೊಂದು ಕೂಪನ್‌ಗೂ 0—4—0 ಪ್ರವೇಶಧನ. ಪ್ರವೇಶಧನವನ್ನು M. O. ಮೂಲ್ಯವಾಗಲಿ ಇಂಡಿಯನ್ ಪೋಸ್ಟಲ್ ಆರ್ಡರ್ ಮೂಲ್ಯವಾಗಲಿ ಕಳುಹಿಸಬೇಕು. 2. ಸ್ನೇಹಿತರೂ ಬಂಧುಗಳೂ ಒಂದೇ ಕವರಿನಲ್ಲಿ ಎಷ್ಟು ಕೂಪನ್‌ಗಳನ್ನಾದರೂ ಕಳುಹಿಸಬಹುದು. 3. ಉತ್ತರಗಳು 15—12—'36ರೊಳಗೆ ನಮ್ಮ ಕೈ ಸೇರಬೇಕು. 4. ಮೇನೇಜರ ಉತ್ತರಗಳ ಸೀಲು ಮಾಡಿದ ಕವರನ್ನು ಮದ್ರಾಸಿನ ಇಂಡಿಯನ್ ಬ್ಯಾಂಕ್ ಲಿಮಿಟೆಡ್ ಹೆಡ್ಡಾಫೀಸಿನಲ್ಲಿ ಈ ಸ್ಪರ್ಧೆ ಪ್ರಕಟಿಸುವ ಮೊದಲೆ 3—11—'36 ಡಿಪಾಸಿಟ್ಟು ಮಾಡಲಾಗಿದೆ. 16—12—'36 ನಂತರ ಬ್ಯಾಂಕಿನ ಡಿಪಾಸಿಟ್ಟು ಉತ್ತರಗಳನ್ನು ತರಿಸಿ ಕೂಪನ್‌ಗಳನ್ನು ಪರಿಶೋಧಿಸಲಾಗುವುದು. 4. ಈ ಸ್ಪರ್ಧೆ ಸಂಬಂಧವಾಗಿ ಕಳಿಸಿದ ಹಣವನ್ನು ಯಾವ ಕಾರಣದಿಂದಲೂ ವಾಪಸ್ಸು ಮಾಡಲಾಗುವುದಿಲ್ಲ. 5. ಉತ್ತರಗಳ ಸಂಖ್ಯಾನುಸಾರ ಬಹುಮಾನದ ಮೊತ್ತವನ್ನು ಹೆಚ್ಚು ಕಡಿಮೆ ಮಾಡಲಾಗುವುದು. 6. ಒಂದಕ್ಕಿಂತಲೂ ಜಾಸ್ತಿಯಾಗಿ ಉತ್ತರಗಳು (ಎಲ್ಲಾ) ಬಂದಲ್ಲಿ ಬಹುಮಾನಗಳನ್ನು ಸಮವಾಗಿ ಹಂಚಲಾಗುವುದು. 7. ಮೇನೇಜರ ತೀರ್ಮಾನವೇ ಕಡೆಯ ತೀರ್ಮಾನ. 8. ತನ್ನ ವಿಶ್ವಾಸದೊಡನೆ 0—1—0 ಸ್ಟ್ಯಾಂಪು ಕಳಿಸಿದವರಿಗೆ ಫಲಿತಾಂಶವನ್ನು ಕಳಿಸಲಾಗುತ್ತೆ.

ಪ್ರವೇಶಧನವನ್ನೂ ಕೂಪನ್‌ಗಳನ್ನೂ ಕೆಳಗೆ ಕಂಡ ವಿಳಾಸಕ್ಕೆ ಕಳುಹಿಸಿರಿ:—

ಮೇನೇಜರು,
ಭಾರತ ಕಾಂಪಿಟೇಷನ್ಸ್,
ಕೊಳ್ಳೇಗಾಲ.

(Established on Sound Foundation)



CHILDREN'S OPTION POLICY
FEMALE INSURANCE
(Without Extra)
DAILY PREMIUM PLAN
(Clock Scheme)

Wanted Agents & Canvassers for
South & North Kanara, Malabar, Mysore State & Coorg, on lucrative terms.

For Particulars Please Apply to the Chief Agents:—

The Pioneer General Insurance & Mercantile Agencies of West Coast,
CAR STREET, MANGALORE, S. K.
OR
The Managers,
The World-Wide Assurance Ltd., Fort, Bombay.

(೫ನೇ ಪುಟದಿಂದ)

ಬಿಟ್ಟುಕೊಂಡು ಓಡಾಡಿದರು. ಆದರೇನು? ಈ ಹೊಸ ಸಾಬರಿಗೆ ಜಾತಿ ಕುಲ-ಗೋತ್ರವೇ ಇಲ್ಲ. ಬಾಯಿರುಚಿ ಮಾತ್ರ ಬೇಕು. ಆ ರುಚಿ ಎಷ್ಟು ದಿನ ನಡೆದೀತು?

ಗಾಂಧಿಮಹಾತ್ಮರೂ, ಅವರ ಪತ್ನಿ ಕಸ್ತೂರಿ ಬಾಯಿ ಪುಣ್ಯಾತ್ಮಗಿತ್ತಿಯವರೂ ಮಗನಿಗೆ–ಮಗನನ್ನು ಯಜ್ಞಪಶುವನ್ನಾಗಿ ಮಾಡಿಕೊಂಡು ತಿರುಗುವ ಪುಣ್ಯಾತ್ಮರಿಗೆ ಹಿತೋಪದೇಶಗಳನ್ನು ಮಾಡಿದರು. ದೈವಿಕ ಸಂಬಂಧವಾದ ಜ್ಞಾನೋದಯಕ್ಕೆ ಹೀರಾಲಾಲ್ ಸಾಬಿಯು ಇಸ್ಲಾಂ ಮತವನ್ನು ಸೇರಿಲ್ಲವೆಂದೂ ತನ್ನ ಅಲ್ಪಬುದ್ಧಿಯ ಫಲವಾಗಿ ಹಿಂದೂಮತವನ್ನು ಬಿಟ್ಟಿರುವನೆಂದೂ, ದೇವರು ಇಲ್ಲಿಲ್ಲದವನು ಇಸ್ಲಾಂ ಮತದಲ್ಲಿರುವನೆಂಬುದು ನ್ಯಾಯವಲ್ಲವೆಂದೂ ಸಾರಿದರು. ಆದರೇನು? ಶಾಂತಿಗಾಗಿ ಹೀರಾಲಾಲ್ ಸಾಬಿಯು ಆ ಮತವನ್ನು ಹೊಕ್ಕು ಕೊನೆಗೆ ಅಶಾಂತಿಸಾಗರದಲ್ಲಿ ಮುಳುಗಿ ಮತ್ತೆ ಹಿಂದೂ ಸಾಗರದಲ್ಲಿ ಪವಿತ್ರಸ್ನಾನ ಮಾಡಬೇಕಾಯಿತು. ಮುಖ್ಯ ಹಳೆ ಗಂಡನ ಪಾಪವೇ ಗತಿ ಎಂಬುದು ಸುಳ್ಳಲ್ಲ.

* * * *

ಮೈಸೂರಲ್ಲಿ ಅಧ್ಯಕ್ಷ–ಉಪಾಧ್ಯಕ್ಷರ ಮಾತುಕತೆಗಳೇ ಇಂದಿನ ಮಾತುಕತೆಗಳಾಗಿವೆ. ನಮ್ಮ ಬ್ರಾಹ್ಮಣ–ಬ್ರಾಹ್ಮಣೇತರ ಪತ್ರಿಕೆಗಳೂ ಸಹ ಈ ಮಾತುಗಳಿಗೆ ನಡು ಕಟ್ಟಿ ನಿಂತುಬಿಟ್ಟಿವೆ! ಎಲ್ಲಿ ನೋಡಿದರೂ ಭಲಾ ಜಟ್ಟಿ! ಅಧ್ಯಕ್ಷರು ಗಟ್ಟಿ! ನೋಡಿದಿರಾ ಅವರ ದೃಷ್ಟಿ ಎಂದು ಕೆಲವರೂ, ಏನನ್ಯಾಯವಯ್ಯ! ಖಾಸಗಿ ಜನಗಳ ಸ್ವತಂತ್ರ ಮಂತ್ರವನ್ನು ಹಾರಿಸಿ ಅದರಲ್ಲೂ ನಮ್ಮ ಮುಸಲ್ಮಾನ್ ದಿವಾನರ ಕಾಲದಲ್ಲಿ ಇಂಥ ಅನ್ಯಾಯ ಮುಸಲ್ಮಾನರಿಗೇ ಬರಬಹುದೇ? ಎಂದು ಹಲವರೂ ಮಾತನಾಡುತ್ತಿರುವರು. ಹೇಗೆ ಇದ್ದರೂ ಇರಲಿ. ಉಪಾಧ್ಯಕ್ಷರ ವಿಚಾರವಾಗಿ ನನಗೂ ಸಹಾನುಭೂತಿ ಇದ್ದರೂ ಅಧ್ಯಕ್ಷರ ಪರವಾಗಿ ಬೆನ್ನು ತಟ್ಟುವ ಕಾರ್ಯವನ್ನೂ ಪಹಿಸುತ್ತೇನೆ. ಸರ್ಕಾರದಲ್ಲಿ ಅದೊಂದು ನ್ಯಾಯರೀತಿಯ ದರ್ಪವೇ ಇರಬೇಕೆಂದೂ, ದಯಾದಾಕ್ಷಿಣ್ಯಗಳ ಅವಕಾಶ ಕಡಿಮೆಯಾಗಬೇಕೆಂದೂ ದಾಸಯ್ಯನ ಕೋರಿಕೆ.

ದಾಸಯ್ಯನನ್ನು 'ಇತ್ತಲೆ' ಎಂದು ಯಾರೂ ನಗಬೇಡಿ. ಮೈಸೂರಿನ ಅಧ್ಯಕ್ಷರು ಮೈಸೂರಿಗೆ ಬರುವಾಗಲೇ ಅವರು ಬರಕೂಡದೆಂಬ ಮಾತು ಹುಟ್ಟಿತ್ತು. ಅವರ ಹಿಂದಿನ ಪ್ರೆಸಿಡೆಂಟರು ಬಹಳ ಮೆತ್ತನೆ ಸ್ವಭಾವದವರು. ಅಷ್ಟೇಕೆ? ಉಪಾಧ್ಯಕ್ಷರೆಂದರೆ ಅವರಿಗೆ ಎದೆಯೊಡೆಯುವಂತಾಗಿ ಮನಸ್ಸಿಗೆ ಕಳವಳವಿಲ್ಲದೆ ಕಾರ್ಯಭಾಗ ನಡೆದರೆ ಸಾಕೆಂದೇ ದಿನಗಳನ್ನು ನೂಕಿಬಿಟ್ಟರು. ಅವರು ತಮ್ಮ ಕಾರ್ಯವನ್ನು ಇಂದಿನವರಿಗೆ ವಹಿಸಿಕೊಟ್ಟಾಗ ಡಿ॥ ಬೋ॥ ಪ್ರೆಸಿಡೆಂಟರಿಗೆ ಮಹಾರಾಯ! ನಿಮ್ಮ ಖಾಸಗಿ ಜನಗಳ ಸಹವಾಸ ಸಾಕಪ್ಪ! ಎಂದು ಅಂದುಬಿಟ್ಟರಂತೆ. ಅವರ ಕಾಲದಲ್ಲಿ ಸರಾಗದಿಂದ ಉಪಾಧ್ಯಕ್ಷರು ಮುಂದುವರಿದು ಓಡಾಡಿದರೆ, ಇವರಿಗೆ ಸ್ವಲ್ಪ ದೃಷ್ಟಿ ಬಿತ್ತು. ಅಷ್ಟರಲ್ಲೆ ಝೂಡ ಮಾಲಿಗಳ ಗೊಂದಲವೂ ನಡೆಯಿತು. ಮಾರ್ಕಿಟ್ ಪುಕಾರೂ ಬಹಳವಾಯಿತು. ಕೌನ್ಸಿಲಿನಲ್ಲಿ ಅಧ್ಯಕ್ಷರ ಮಾತು ಬಂದಾಗ ಕೊಡೆ ಹಿಡಿಯುವನರು ಕೆಲವರು; ಉಪಾಧ್ಯಕ್ಷರ ಮಾತು ಬಂದಾಗ ಸೈ ಅನ್ನುವವರು ಕೆಲವರು, ಹೀಗೆ ಕಾವೇರಿ ನದಿಯ ಕವಲಾಯಿತು.

ಉಪಾಧ್ಯಕ್ಷರು ಸಾಮಾನ್ಯವೇ? ಆಗಲಿ ಒಂದು ಕೈ ನೋಡಿಯೇ ಬಿಡೋಣ! ಎಂದು ನಿಂತರು. ಬೆತ್ತು ಖಾಡಾಖಾಡಿ ಯುದ್ಧ! ಅವರದು ರಾಮಬಾಣ; ಇವರದು ಭೀಮಬಾಣ. ಹೋರಾಟದಲ್ಲಿ ರಾಮಬಾಣಕ್ಕೆ ವಿಜಯ. ಮಾಡತಕ್ಕದ್ದೇನು? ಶ್ರೀ ಸೇಟರು ಕಳೆಯಲ್ಪಡತಕ್ಕವರಲ್ಲ. ಬಹಳ ಗಟ್ಟಿಗರು. ಮಾತನಾಡಿದರೆ ಎದುರಾಳಿಗಳೇ ಇಲ್ಲ. ಬ್ರಾಹ್ಮಣೇತರರನ್ನು ಬೆಂಬಲಕ್ಕೆ ಹೊಂದಿದವರು. 'ದೈವೇಬಲೇ ದುರ್ಬಲೇ' ಎಂದಂತೆ ಒಂದೊಂದು ಸಮಯದಲ್ಲಿ ಒಂದೊಂದು ನಡೆದು ಹೋಗುವುದು. ಆದರೇನು? ಸರ್ಕಾರದ ಬೆಂಬಲ ಪಡೆದಿದ್ದರೆ, ತಮ್ಮ ಯಾವತ್ತೂ ಸಾಧನೆಯನ್ನು ಸರ್ಕಾರದಲ್ಲಿಯೇ ಸಾಧಿಸಿದ್ದರೆ ಅವರಿಗೆ ಜಯವಾಗುತ್ತಿದ್ದದ್ದು ಖಂಡಿತ. ಸ್ವತಂತ್ರ ಸಾಧನೆಯ ಉದ್ಯಮದಲ್ಲಿ ಕಮ್ಮನ್ನು ಆಗಿಸಿದ ಮೆಂಬರುಗಳ ಓಟುದಾರರ ಬಲವನ್ನು ಪಡೆದರೆ ಆಗುವುದು ತಾನೇ ಏನು? ಅದಕ್ಕೂ ಮಿತಿಯುಂಟಲ್ಲವೆ? ಅಂತೂ ಈ ಜಗಳದಲ್ಲಿ ಮೈಸೂರು ಚಕ್ರವ್ಯೂಹದಲ್ಲಿ ಸಿಕ್ಕಿ ನೆಮ್ಮದಿಯಿಲ್ಲದೆ ಇದೆ. ದೇವರೇ ಕಾಪಾಡಬೇಕು.

* * * *

ಕಾಂಗ್ರೆಸ್ ಪ್ರೆಸಿಡೆಂಟರಿಗೆ ಬೊಬ್ಬಿಲಿಯಲ್ಲಿ ಆನೆಗಳ ತಮ್ಮಟಿಗಳ ಮರ್ಯಾದೆಯಾಯಿತಂತೆ! ಪಾಪ! ಬೊಬ್ಬಿಲಿ ರಾಜರು ಜಸ್ಟಿಸ್ ಪಾರ್ಟಿಯವರು. ಪಂಡಿತರು ಕಾಂಗ್ರೆಸ್ ಪಾರ್ಟಿಯವರು. ಮರದ ಕಾಲು ಬೆಂಕಿಗೆ ಆದೀತೆ? ಬೊಬ್ಬಿಲಿಯಲ್ಲಿ ಕಾಂಗ್ರೆಸ್ ನೀತಿಯನ್ನು ಹರಡಿದರೆ ಅವರು ಸುಮ್ಮನೆ ಇದ್ದಾರೆ? ರಾಜರುಗಳ ಕೆಳಗಿರುವ ಜನರಿಗೆ ಪ್ರಪಂಚಜ್ಞಾನವು ಬಾರದೇ ಇದ್ದಷ್ಟು ದಿನವೂ ರಾಜರುಗಳಿಗೆ ಸಂತೋಷವೇ. ಜನರು ತಲೆ ಎತ್ತಿದರೆ ಅವರಿಗೆ ಕೊಂಚ ಅಸಹ್ಯ ತಾನೇ!

ಪಂಡಿತರಿಗೆ ಪುದುಕೋಟೆಯಲ್ಲಿಯೂ ಊರೊಳಗೆ ಬಾರದಂತೆ ಮಿಲಿಟರಿ ದರುಶನವಾದದ್ದು ಅದೊಂದು ವಿಶೇಷೋತ್ಸವವೇ! ಪಂಡಿತರು ಇವೆರಡನ್ನೂ ಅದೊಂದು ಆಟದಂತೆ ಭಾವಿಸಿ, ತಮಗೆ ಉಂಟಾಗಿದ್ದ ಬೇಸರಿಕೆಯನ್ನು ಪರಿಹಾರ ಮಾಡಲು ಏರ್ಪಡಿಸಿದ್ದ ಸಾಧನೆ ಎಂದು ಸಂತೋಷಪಟ್ಟರು! ಅದೀಗ ದೊಡ್ಡ ತನ. ನಮ್ಮ ಮೈಸೂರಿಗೆ ಬರಲಿ ನೋಡಿ. ರಾಮರಾಜ್ಯದಲ್ಲಿ ಅವರಿಗೆ ಎಷ್ಟು ಸುಖಸಂತೋಷಗಳು ಒದಗುತ್ತವೆ? ಎಷ್ಟು ಮರ್ಯಾದೆಗಳು ಸಲ್ಲುವವು? ಎಷ್ಟು ಭಾಷಣಗಳು ನಡೆಯುವವು? ಅದಲ್ಲವೆ ಗಂಡುಗಲಿತನ?

ನಮ್ಮಲ್ಲಿರುವಷ್ಟು ರಾಜಭಕ್ತಿ ಮತ್ತೆಲ್ಲಿಯೂ ಇಲ್ಲ. ಯಾರು ಬಂದು ಏನು ಹೇಳಲಿ, ನಮ್ಮವರು ರಾಜಮನೆತನಕ್ಕೆ ಎಂದೂ ಎದುರು ನಿಲ್ಲುವವರಲ್ಲ. ಅಷ್ಟೇ ಅಲ್ಲ. ಹೊರಗಿನವರು ಬಂದು ಮೈಸೂರನ್ನು ಹೊಗಳಿ, ಮೈಸೂರ ರಸರನ್ನು ಹೊಗಳಿ, ಮೈಸೂರ ಅಧಿಕಾರಿಗಳನ್ನು ಹೊಗಳಿ ಹೊಗಳಿ ಹೋಗುವರು. ಇದರಿಂದ ಪ್ರಜೆಗಳಲ್ಲಿ ಅತೃಪ್ತಿ ಎಂಬುದೇ ಇಲ್ಲ. ಏಕೆ ಬಲ್ಲಿರಾ? ಇಲ್ಲಿನ ದೊರೆಗಳು ಬೊಬ್ಬಿಲಿಯಂತೆ ಯಾವ ಪಾರ್ಟಿಯವರೂ ಅಲ್ಲ. ಅವರ ಪಾರ್ಟಿ ಎಂದರೆ ಪ್ರಜೆಗಳ ಪಾರ್ಟಿ. ಪ್ರಜೆಗಳ ಕ್ಷೇಮಸಾಧನೆಯೇ ಅವರ ಗುರಿ. ಇದೇ ಅವರನ್ನು ದೇವರೆಂಬ ಭಾವನೆಗೆ ಅವಕಾಶ ಕೊಟ್ಟಿದೆ. ಅಷ್ಟೆ.

* * * *

ಇಂದಿಗೆ ಇಷ್ಟೇ ಇರಲಿ. ಹೋಗಿ ಬರುತ್ತೇನೆ. ಏನೋ ಗೈರುಹಾಜರಾಗಿದ್ದನೆಂದು ಭಾವಿಸಿ ರಜಾ ಮಂಜೂರು ಮಾಡಿ ಕಾಪಾಡಬೇಕು. ಮುಂದೆ ಸರಿಯಾಗಿ ಬಂದು ಸೇವೆ ಮಾಡುತ್ತೇನೆ. ಹೋಗಿ ಬರಲೆ? ನಮಸ್ಕಾರ.

ಮಿ॥ ದಾಸಯ್ಯ.

NOTICE OF SALE.

A double-storeyed house and garden 1 acre 5 cents in extent situated at Bolóor opposite the Urva Church belonging to the late Father A. J. D'Souza is for sale, whole or in lots. Intending purchasers may communicate for particulars to—

Mangalore, 5—11—36.

P. U. D'Souza, Upper Bendur, MANGALORE.

6, 6—11.

ಕೈಗಾರಿಕೆಯ ಮರ್ಮ ಶಾಸ್ತ್ರ

ಪಪ್ಪರಮೆಂಟು, ಪನ್ನೀರು, ಕೂದಲು ಬೆಳೆಯುವ ಕೈಲಗಳು, ಸುವಾಸನೆ ಪವ್ಡರ್‌ಗಳು, ಸುವಾಸನೆ ಸಾಬೂನುಗಳು, ಪರಬತ್‌ಗಳು, ಬೆಂಕಿಕಡ್ಡಿ, ಊದಬತ್ತಿ, ಕರ್ಪೂರ, ಸಾಂಬ್ರಾಣಿ, ಇಂಕು, ಬಿಸ್ಕಟ್, ಔಷಧಗಳು, ಫೋಟೋ ತೆಗೆಯುವ ವಿಧ, ಮುಂತಾದ ೨೫೦ ವಿಧವಾದ ಕೈಕಸಬುಗಳನ್ನು ಸ್ಪಷ್ಟವಾಗಿ ಕನ್ನಡದಲ್ಲಿ ವಿವರಿಸಿ ಬರೆದಿದೆ. ೨೪೦ ಪುಟಗಳುಳ್ಳ ದೊಡ್ಡ ಪುಸ್ತಕ ಒಂದಕ್ಕೆ ಬೆಲೆ ೧-೦-೦ ಮಾತ್ರ. ವಿ. ಪಿ. ೦-೭-೦ ಬೇರೆ. ಮುಂಗಡ ಹಣವಾಗಲೀ ಸ್ಟ್ಯಾಂಪಾಗಲೀ ಕಳಿಸಿದರೆ ಟಪಾಲು ಚಾರ್ಜು ಇಲ್ಲಾ ಂ.

ಪ್ರಕಾಶಂ ಬುಕ್ ಡಿಪೊ,
೨೭ನೇ ಬೀಟ್, ಸಾವಕಾರಿ ಪೇಟೆ, ಮದರಾಸು.

4, 20—11.

ಪ್ರತಿ ತಿಂಗಳು ಕೊಟ್ಟ ರೂ. ೧ ಐದು ನೂರು ರೂಪ್ಯಾಗಳೆನ್ನು ತಂದಿತು.

ದಿ ಸ್ವರಾಜ್ಯ ಬ್ಯಾಂಕಿಂಗ್ ಮತ್ತು ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,

ಧಾರವಾಡ ನಿವಾಸಿಗಳಿಗೆ.

ಸ್ವಾಮಿ,

ಪ್ರೇಮಪೂರ್ವಕ ವಂದನೆಗಳು. ಅಚ್ಚು ಕನ್ನಡಿಗರ ಸಂಸ್ಥೆಯಾದ ನಿಮ್ಮ ಕಂಪೆನಿಯಲ್ಲಿ ನನ್ನ ಸಹೋದರನ ಲಗ್ನದ ಸಲುವಾಗಿ ಪಾಲಿಸಿಯನ್ನು ಮಾಡಿಸಿದ್ದೆನು. ಎರಡು ವರ್ಷಗಳ ವರೆಗೆ ಸರಿಯಾಗಿ ಕಂತುಗಳನ್ನು ತುಂಬುತ್ತ ಬಂದು, ಆ ಮೇಲೆ ಅವನ ಲಗ ಮಾಡಿ ನಿಮಗೆ ನಿಯಮದಂತೆ ಎಲ್ಲ ಕಾಗದಪತ್ರಗಳನ್ನು ಸರಿಪಡಿಸಿ ಕೊಟ್ಟೆನು. ಮೊನ್ನಿನ ದಿವಸ ನಮ್ಮ ಏಜಂಟರಾದ ಶ್ರೀಯುತ ಕೆ. ಎನ್. ಶಿವಣ್ಣ ಇವರ ಮೂರ್ಪಡ ನೀವು ಕಳಿಸಿದ **ಐದು ನೂರು ರೂಪಾಯಿ ಕ್ಲೇಮಿನ ಹಣವು** ನನ್ನ ಪಾಲಿಸಿಯ ಪ್ರತಿಫಲವಾಗಿ ಬಂದು ಮುಟ್ಟಿತು. ಇದರಲ್ಲಿ ನಾನು ನಿಮ್ಮ ಡಾಯರೆಕ್ಟರ ಸಮಿತಿಯ ದಕ್ಷತೆಯನ್ನೂ, ವ್ಯವಸ್ಥಾಪಕ ಜನರ ಜಾಗರೂಕತೆಯನ್ನೂ ಮತ್ತು ಈ ಸ್ಕೀಮಿನ ವಿಶಿಷ್ಟತೆಯನ್ನೊ ಎಷ್ಟು ಹೊಗಳಿದರೂ ಸಾಲದು. ನೀವು ಮಾಡಿದ ಈ ಸಹಾಯದಿಂದ ಮದುವೆ ಮಾಡಿದ ಯಜಮಾನನಿಗೆ ಘಟಿಸತಕ್ಕ ಎಲ್ಲ ಸಂಕಟಗಳಿಂದ ನಾನು ಪಾರಾದ್ದರಿಂದ ನಿಮಗೆ ನಾನು ಯಾವಾಗಲೂ ಕೃತಜ್ಞನಾಗಿದ್ದೇನೆ. ಮತ್ತು ನನ್ನ ಆಪ್ತೇಷ್ಟರಿಗೆ ಇಂದೇ ನಿಮ್ಮ ಪಾಲಿಸಿಯ ಪಡಕ್ಕೊಳ್ಳಲು ಪ್ರೋತ್ಸಾಹಿಸಿ ಅವರಿಗೂ ಸಹ ಮುಂದಿನ ಖರ್ಚಿಗಾಗಿ ಇಂದಿನಿಂದ ಸುರುವಾಗುವಂಥ ಚಿಂತೆಯಿಂದ ಪಾರಾಗಲು ಮಾರ್ಗ ಕೋರಿಸುವೆನು ಮತ್ತು ಅವರನ್ನು ನನ್ನಂತೆ ಸುಖಿಗಳನ್ನಾಗಿ ಮಾಡುವೆನು ನಿಮ್ಮ ಈ ಸ್ತುತ್ಯವಾದ ಜನಸೇವಾಕೆಲಸಕ್ಕೆ ದೇವರು ಸದಾ ಯಶಸ್ಸನ್ನು ಕೊಡಲೆಂದು ಬಯಸುವ,

ತುಮ್ಮೂರು, ೧—೯—೧೯೩೬. ತಮ್ಮ
(Sd.) ಜಿ. ಎಚ್. ಗಂಗಪ್ಪ

ಡಬ್ಲ್ಯೂರ್ಹ ರ್.

"ಡೆಪಿಲೆಟರಿ ರೋಮನಾಶಿನಿ ಪೌಡರ್"

ಆಧುನಿಕ ಮಹಿಳೆಯರಿಗೆ ಅತ್ಯಾವಶ್ಯವಾದುದು. ಉರಿ, ಇಲ್ಲವೆ ಕಲೆ ಇಲ್ಲದೆ ನಿಮಿಷಮಾತ್ರದಲ್ಲಿ, ಗೋಚರವಾಗದ ರೀತಿಯಿಂದ ರೋಮಗಳನ್ನು ಸಂಪೂರ್ಣವಾಗಿ ತೊಲಗಿಸಿ, ಚರ್ಮದ ಮೃದುತ್ವವನ್ನು ಕಾಪಾಡುವುದು.

ಮಹಿಳೆಯರ ಅತಿ ಕೋಮಲ ಸೌಂದರ್ಯ ಸೊಂಪನ್ನು ಹೆಚ್ಚಿಸುವದು.

ನಿಮ್ಮ ಕೆಮಿಸ್ಟರಿಂದ ಇಂದಿನ ರಾತ್ರೆಯೇ ಪಡೆಯಿರಿ.

ಕ್ರಯ: ಬಾಟ್ಲಿಯೊಂದಕ್ಕೆ ರೂ. 1—0—0, ಅಂಚೆ ಹಾಸಲು ಪ್ರತ್ಯೇಕ.

ಸೋಲ್ ಏಜಂಟರು:—ಲಕ್ಷ್ಮೀದಾಸ್ ದಯಾಭಾಯಿ ಮತ್ತು ಕಂಪೆನಿ, ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್,
6, ಪ್ರಿನ್ಸೆಸ್ ಸ್ಟ್ರೀಟ್, ಮುಂಬಾಯಿ.

ಪಂಡಿತ ಜವಹರಲಾಲರ ಆತ್ಮಕಥೆ

೧೦೦೦ ಪುಟಗಳು! ಎರಡು ಸಂಪುಟಗಳು!!

ಡೆಮ್ಮಿ. ಅಷ್ಟಪತ್ರಾಕಾರ. 1ನೇ ಸಂಪುಟ ತಾ. 1—12—'36. 2ನೇ ಸಂಪುಟ 25—12—'36. ಹೊರಬೀಳುವುವು. ಟಪಾಲು ಖರ್ಚು ಪ್ರತ್ಯೇಕ.

30—11—'36 ತಾ. ಒಳಗೆ ಹಣ ಕಳುಹಿಸುವವರಿಗೆ.

ಅತ್ಯುತ್ತಮ ಪ್ರತಿ	ರೂ. ೧೦—೦—೦	ಅತ್ಯುತ್ತಮ ಪ್ರತಿ	ರೂ. ೧೦—೦—೦
ವಾಚನಾಲಯ ಪ್ರತಿ	,, ೭—೦—೦	ವಾಚನಾಲಯ ಪ್ರತಿ	,, ೬—೦—೦
ಸಾಮಾನ್ಯ ಪ್ರತಿ	,, ೫—೦—೦	ಸಾಮಾನ್ಯ ಪ್ರತಿ	,, ೪—೪—೦

ಟಪಾಲು ಖರ್ಚು ಮುಹತ್ತು.

ಹಣವನ್ನು ಮೇರ ಕಳುಹಿಸಬೇಕು. ಏಜಂಟರನ್ನು ನೇಮಿಸಿಲ್ಲ.

ಮುಂಗಡವಾಗಿ ಆರ್ಡರುಗಳನ್ನು ಕೊಟ್ಟು ವ್ಯಾಪಾರ ನಡೆಸುವ ಪುಸ್ತಕ ವ್ಯಾಪಾರಿಗಳಿಗೆ ಧಾರಾಳವಾದ ಕಮಿಷನ್ ಕೊಡಲ್ಪಡುವುದು.

ಪ್ರಕಾಶಕರು:—ಸಿ. ಅಶ್ವತ್ಥನಾರಾಯಣರಾವ್, ಬಿ. ಎ.,
ಸಂಪಾದಕರು: "ನವಜೀವನ" ಮತ್ತು "ಮುಕ್ಕಳ ಪುಸ್ತಕ",
ಬಳೇಪೇಟೆ, ಬೆಂಗಳೂರು ಸಿಟಿ.

ಉಡುಪಿಯ್ಯು ಕೊಲೆಜು

(ಬರೆದು ಬಂದುದು)

ಇಲ್ಲಿ ಈ ಪ್ರಶ್ನೆ ತಿರಿಗಿ ತಲೆ ಎತ್ತಿದೆ. ಕೆಥೊಲಿಕರು ಕೊಲೆಜು ಮಾಡುವುದಾದರೆ ಕಲ್ಯಾಣವುರವು ಉಡುಪಿಗಿಂತಲೂ ಕೆಥೊಲಿಕರಿಗೆ ಅನುಕೂಲವಾಗಿದ್ದರೂ ಅದನ್ನು ಬಿಟ್ಟು ಒಬ್ಬ ಜಾಂಬವರು ಒಂದು ಅರ್ಜಿಯನ್ನು ಹಿಡಿದು ಕೊಂಡು ಉಡುಪಿಯಲ್ಲಿ ದೊಡ್ಡ ದೊಡ್ಡವರ ಬಳಿಗೆ ಹೋಗಿ, ಕೊಲೆಜು ಆಗಬೇಕೆಂಬ ಅರ್ಜಿಯೆಂದು ದಸ್ಕತುಗಳನ್ನು ಪಡಕೊಳ್ಳುತಿದ್ದಾರೆ. ಈ ಅರ್ಜಿಯಲ್ಲಿ ಬೋರ್ಡು ಹೈ ಸ್ಕೂಲನ್ನು ಕೆಥೊಲಿಕರಿಗೆ ಒಪ್ಪಿಸಿಕೊಡಬೇಕೆಂಬ ವಾಚಕವಿದೆ ಎಂದು ಹೇಳದೆ ದಸ್ಕತು ಪಡೆದು ನಿಜತ್ವವು ಗೊತ್ತಾದ ಮೇಲೆ ಹಲವರು ತಾವು ದಸ್ಕತು ಕೊಟ್ಟದ್ದು ತಪ್ಪು ಗ್ರಹಿಕೆಯಿಂದ ಎಂದು ಈ ಜಾಂಬವರಿಗೆ ಬರಹ ಮೂಲಕ ತಿಳಿಸಿದ್ದಾರಂತೆ. ಉಡುಪಿಯು ಕೆಥೊಲಿಕ ರಾಜಧಾನಿಯಾಗಲಿಕ್ಕೆ ದಿನಗಳು ಬಹಳ ದೂರವಿಲ್ಲ. ಈ ವರ್ಗದವರು 'ಊರಿಗೊಂದಾದರೆ ಪೋರಗೆ ಒಂದು' ಎಂಬ ವಿಚಾರವನ್ನು ತಮ್ಮ ಪ್ರತಿಯೊಂದು ಕಾರ್ಯದಲ್ಲಿ ತೋರಿಸದಿದ್ದರೆ ಉಡುಪಿಯು ಅವರ ಕೈಸೇರಿದರೆ ಬಾಧಕವಿದ್ದಿಲ್ಲ. ಆದರೆ ಅವರ ದೃಷ್ಟಿಯಲ್ಲಿ ಕೆಥೊಲಿಕರಿಗೆ ಪ್ರಾಶಸ್ತ್ಯವಿಲ್ಲದ ಯಾವ ಕೂಟವೂ ಅವರಿಗೆ ಒಗ್ಗುವಂತಿಲ್ಲ. ಈಗ ಇಲ್ಲಿಯ ಮುನ್ಸಿಫರು, ಡಾಕ್ಟರರು, ಸಬ್ ರಿಜಿಸ್ಟ್ರಾರರು, ತಹಶಿಲ್ದಾರರು, ಸಬ್ ಕಲ್ಲೆಕ್ಟರರು, ಬೋರ್ಡು ಹೈ ಸ್ಕೂಲಿನ ಮುಖ್ಯೋಪಾಧ್ಯಾಯರು, ಶಾಲಾ ಡೆಪ್ಯುಟಿ ಇನ್ಸ್‌ಪೆಕ್ಟರರು ಇವರೆಲ್ಲ ಕೆಥೊಲಿಕರು. ಕೆಥೊಲಿಕ್ ಪ್ರೆಸ್, ಕೆಥೊಲಿಕ್ ಬೇಂಕ್, ಕೆಥೊಲಿಕ್ ಕನ್ಸೆಂಟು ಈಗಲೆ ಇಲ್ಲಿ ಇವೆ. ಕೆಥೊಲಿಕ ಡಿ. ಇ. ಒ. ಇದ್ದಾರೆ. ಇವರು ಎಷ್ಟರ ಮಟ್ಟಿಗೆ ಕೆಥೊಲಿಕ ಶಾಲೆಗಳ ಉದ್ಧಾರಕ್ಕಾಗಿ ಹೆಣಗಾಡುತಿದ್ದಾರೆ ಎಂಬದು ತಿಳಿದೇ ಇದೆ. ಇನ್ನು ಹೊಸ ಇಸವಾಗಿ ಬರುವ ಜನವರಿಯಲ್ಲಿ ನೇಮಕವಾಗುವ ಎಡ್ಯುಕೇಶನಲ್ ಇನ್ಸಪೆಕ್ಟರರು ಕೆಥೊಲಿಕರಂತೆ. ಹಾಗಿದ್ದರೆ ಈ ಜಾಂಬವರ ಪ್ರಯತ್ನವು ಸಫಲವಾಗಿ ಕೆಥೊಲಿಕರ ಪಕ್ಷವು ಎಷ್ಟರ ಮಟ್ಟಿಗೆ ಇಲ್ಲಿ ಯಶಸ್ವಿಯಾದೀತು ಎಂಬದು ನೋಡಲಿಕ್ಕಿದೆ. ಇದಕ್ಕೆ ಸಾಮಾನ್ಯವಾಗಿ ತಟಸ್ಥವಾಗಿರುವ ಹಿಂದೂ ಸಮಾಜವು ಯಾವ ರೀತಿಯಲ್ಲಿ ಎಚ್ಚರಿಕೆಗೆ ಬಂದು ತನ್ನ ಜವಾಬ್ದಾರಿಯನ್ನು ನಿರ್ವಹಿಸುವುದು ಎಂಬದು ವಿಚಾರಾಸ್ಪದ.



ಶ್ರೀ ಶ್ರವಣ ಬೆಳ್ಗುಳವೂ, ಹರಿಜನರ ಪ್ರವೇಶವೂ.

ಈ ತಿಂಗಳ ಕಂಠೀರವದ ೧೩ನೇ ತಾರೀಕಿನ ೯ನೇಯ ಪುಟದಲ್ಲಿ ಶ್ರೀ ಶ್ರವಣಬೆಳ್ಗುಳದ ಶ್ರೀ ಗೋಮಟೇಶ್ವರ ಸ್ವಾಮಿಯವರ ಸನ್ನಿಧಿಗೆ ಹರಿಜನರು ಹೋಗಬಹುದಾಗಿ ಇತ್ಯಾದಿ ನೀವು ಬರೆದಿರುತ್ತೀರಷ್ಟೆ. ಈ ಶ್ರೀ ಶ್ರವಣಬೆಳ್ಗುಳ ಕ್ಷೇತ್ರವು ಮತ್ತು ಶ್ರೀ ಗೋಮಟೇಶ್ವರ ಸ್ವಾಮಿ ಸಾನಿಧ್ಯವು ಬಹಳ ಪ್ರಾಚೀನ ಮತ್ತು ಪವಿತ್ರವಾದದ್ದು. ಇಲ್ಲಿ ಪೂರ್ವಪದ್ಧತಿಗೆ ವಿರುದ್ಧವಾಗಿ ಯಾವ ತರಹದ ಬದಲಾವಣೆಗಳಿಗೂ ಶ್ರೀಗಳವರು, ಅವಕಾಶಕೊಟ್ಟಿರುತ್ತಾರೆಂಬುದು ಶುದ್ಧ ಸುಳ್ಳು.

ನೀವು ಯಾವ ಅಧಾರದಿಂದ ಹರಿಜನರು ಇಲ್ಲಿಯ ಸ್ವಾಮಿ ಸಾನಿಧ್ಯಕ್ಕೆ ಪ್ರವೇಶ ಮಾಡಲು ಇಲ್ಲಿಯ ಶ್ರೀಗಳವರು ಅಪ್ಪಣೆ ಕೊಟ್ಟಿರುತ್ತಾರೆಂಬುದನ್ನು ನಿಮ್ಮ ಪತ್ರಿಕೆಯಲ್ಲಿ ಬರೆದಿರುತ್ತೀರೆಂದು ದಯವಿಟ್ಟು ಮರುಟಪ್ಪಾಲಿಗೇನೇ ಪ್ರತ್ಯುತ್ತರ ಬೆಳೆಸಬೇಕು.

ಅಲ್ಲದೆ ಈ ಲೇಖವನ್ನು ನಿಮ್ಮ ಮುಂದಿನ ಪತ್ರಿಕೆಯಲ್ಲಿ ಸಂಪೂರ್ಣವಾಗಿ ಮುದ್ರಿಸಿ ಪ್ರಸಿದ್ಧ ಪಡಿಸಬೇಕು. ಇತಿ ಪ್ರಾರ್ಥನೆ. ಜಿ. ಎಸ್. ನೇಮಿಚಂದ್ರಯ್ಯ, ಸರ್ವಮಾನ್ಯ ಪಾರುಪತ್ತೆಗಾರ್, ಶ್ರೀ ಜೈನಮಠ— ಶ್ರವಣಬೆಳ್ಗುಳ (೧೭—೧೧—'೩೬).

The Pangal Nayak Bank, Ltd.
MANGALORE.

ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ಚಿನ್ನಾಭರಣಗಳ ಅಡವಿನ ಮೇಲೆ ಈ ಬೇಂಕಿನಿಂದ ಪಡೆದ ಸಾಲದ ಬಡ್ಡಿ ವಗೈರೆಯನ್ನು ಕೊಡದೆ ಇದ್ದುದರಿಂದಲೂ, ಆ ಕುರಿತು ರಿಜಿಸ್ತ್ರಿ ನೋಟೀಸು ಕೊಟ್ಟಲ್ಲಿ ನೋಟೀಸು ತಲ್ಪಿದರೂ ಬಡ್ಡಿ ಇತ್ಯಾದಿಗಳನ್ನು ಕೊಡದೆ ಇದ್ದುದರಿಂದಲೂ, ಕೆಲವರು ನೋಟೀಸು ಜಾರಿಗೆ ತಪ್ಪಿಸಿಕೊಳ್ಳುವರಾಗಿ ನಮಗೆ ತಿಳಿದುಬಂದಿರುವುದರಿಂದಲೂ, ಮತ್ತೆ ಕೆಲವರಿಗೆ ನೋಟೀಸು ಜಾರಿ ಆಗದೆ ಪುನಃ ಬಂದುದರಿಂದಲೂ, ಕೆಲವರು ಮೃತಪಟ್ಟಿದ್ದಾರೆಂದು ತಿಳಿದುಬಂದಿರುವುದರಿಂದಲೂ, ಸದರಿ ಸಾಲಗಳಲ್ಲಿ ಜವಾಬ್ದಾರಿ ಇರುವ ಚಿನ್ನಾಭರಣಗಳನ್ನು ಇದೇ ಬರುವ ದಶಂಬರ ತಿಂಗಳ ತಾರೀಕು 12ನೇ ಶನಿವಾರ ಗಂಟೆ 1-30ಕ್ಕೆ ಅಥವಾ ಬೇಂಕಿಗೆ ಯುಕ್ತ ತೋರುವ ಬೇರೆ ದಿವಸಗಳಲ್ಲಿ, ಪುನಃ ನೋಟೀಸು ಕೊಡದೇನೇ ಬಹಿರಂಗವಾಗಿ ಏಲಂ ಮಾಡಲ್ಪಡುವುದು. ಏಲಂನಿಂದ ಹುಟ್ಟಿ ಬಂದ ಐವೇಜಿನಿಂದ ಸಾಲದ ಅಸಲು, ಬಡ್ಡಿ, ನೋಟೀಸು ಖರ್ಚು ವಗೈರೆ, ವಜಾ ಮಾಡಿ, ಉಳಿಯುವ ಹಣವನ್ನು ಆಯಾ ಆಸಾಮಿಗಳ ಅಮಾನತು ಖಾತೆಗೆ ನಿಬಡ್ಡಿಯಿಂದ ಜಮಾ ಇಡಲ್ಪಡುವದು. ಏಲಂನಿಂದ ಹುಟ್ಟಿ ಬಂದ ಐವೇಜು ಸಾಲವನ್ನು ಫಾರೀಗತು ಮಾಡುವರೆ ಕಡಿಮೆ ಬಿದ್ದ ಪಕ್ಷದಲ್ಲಿ ಸದರಿ ಕಡಿಮೆ ಬಿದ್ದ ಹಣಕ್ಕೆ ಆಯಾ ಆಸಾಮಿಗಳ ಮೇಲೆ ವ್ಯಾಜ್ಯ ದಾಖಲು ಮಾಡಲ್ಪಡುವುದೆಂತ ಈ ಮೂಲಕ ತಿಳಿಸಲ್ಪಡೋಣಾಗುವುದು.

ಲೋನು ನಂಬ್ರ	ಲೋನು ಇಟ್ಟವರ ಹೆಸರು ಮತ್ತು ಎಡ್ರೆಸ್	ಅಸ್ಲು ರೂ.
1426/34	ವಲ್ಲಿ ಅಬ್ದುಲ್ಲಾ ಬ್ಯಾರಿ, ವಲ್ಲಿ ಮಾಮು ಬ್ಯಾರಿಗಳಮಗ, ಕಮಿಶನ್ ಏಜಂಟ್, ಗೋಳಿಕಟ್ಟೆ ಬಜಾರ್, ಮಂಗಳೂರು	30/-
1748/34	,, ,,	215/-
1883/34	,, ,,	40/-
2112/34	,, ,,	35/-
402/35	ಎಮ್. ಮಂಜುನಾಥ ನಾರಾಯಣ ಶೇಟ್, ಜ್ಯುವೆಲ್ಲರ್, ಮಾರ್ಕೆಟ್ ರಸ್ತೆ, ಮಂಗಳೂರು	210/-
1510/36	,, ,,	210/-
1727/35	ಎ. ಎಫ್. ಎಕ್ಸ್. ಆಲ್ವರಿಸ್, ಸೈಮನ್ ಆಲ್ವಾರಿಸರ ಮಗ, ಬೋಳಾರ, ಮಂಗಳೂರು	90/-
1791/35	ಅಬ್ದುಲ್ ರಜಕ್ ಮುಕ್ರಿ ಬ್ಯಾರಿ, ಕುಂಞಮ್ಮದ ಮೊಲಾರ ಬ್ಯಾರಿಗಳ ಮಗ, ಇಡ್ಯ, ಸುರತ್ಕಲ್ ಪೋಸ್ಟ್	30/-
1844/35	ಪುಮ್ಮದೆ ಬ್ಯಾರಿ, ಮೈದಿನ ಬ್ಯಾರಿಗಳ ಮಗ, ಕಂಡಕ, ಮಂಗಳೂರು	25/-
17/36	ಎ. ಗುರುವಪ್ಪ, ರಾಮುಪ್ಪರ ಮಗ, C/o ಅಪ್ಪಣ್ಣ ಬ್ರದರ್ಸ್, ಹಂಪನಕಟ್ಟೆ, ಮಂಗಳೂರು	45/-

Office of the Bank, Mangalore, 25—11—1936

P. Narasimha Nayak, *Agent.*

SWASTIK TOILETRIES

ಸ್ವಸ್ತಿಕಾ ಅಲಂಕಾರಸಾಮುಗ್ರಿಗಳು ಪ್ರಾಣಿಗಳ ಕೊಬ್ಬಿನಿಂದಲೂ ಯಾವತ್ತು ಬಗೆಯ ಬಿರಿಕೆಗಳಿಂದಲೂ ವಿರಹಿತವೆಂದು ಗ್ಯಾರೆಂಟಿ ಉಳ್ಳವುಗಳಾಗಿವೆ. ಪ್ರತಿಯೊಂದು ಸಾಮುಗ್ರಿಯೂ,— ಟ್ಯಾಲೆಟ್ ಸಾಬೂನೇ ಆಗಲಿ, ಕೇಶತೈಲವೇ ಆಗಲಿ, ಟೂತ್ ಪೇಸ್ಟೇ ಆಗಲಿ,— ಅದೇ ಪ್ರಾತರಿಯಾದ, ಉಚ್ಚ ತರಗತಿಯದೇ ಆಗಿದೆ.

ಪ್ರತಿಯೊಂದು ಟ್ಯಾಲೆಟ್ ಸಾಬೂನೂ, ಅತ್ಯಂತಶುದ್ಧವಾದ ವನಸ್ಪತಿ ಎಣ್ಣೆಗಳಿಂದ ತಯಾರಿಸಲ್ಪಟ್ಟಿದ್ದು, ಬೇಗನೇ, ಸುಲಭವಾಗಿ ಧಾರಾಳವಾದ ನೊಪ್ಪೆಯನ್ನು, ಆನಂದಕರವಾದ ಸ್ನಾನಕಾಲದಲ್ಲಿ, ಕೊಡುತ್ತದೆ.

ಎಲ್ಲ ಬಗೆಯ ಸ್ವಸ್ತಿಕಾ ಹೆಯರ್ ಆಯಿಲುಗಳೂ,— ತೆಂಗಿನೆಣ್ಣೆ, ಎಳ್ಳೆಣ್ಣೆ ಅಥವಾ ಹರಳೆಣ್ಣೆಗಳಿಂದಲೇ— ಪುಟಕ್ಕೆ ಹಾಕಿದ, ಪರಿಶುದ್ಧ ಗೊಳಿಸಲ್ಪಟ್ಟ ವನಸ್ಪತಿ ಎಣ್ಣೆಗಳಿಂದೆ" ಮಾತ್ರವೇ ತಯಾರಿಸಲ್ಪಟ್ಟು, ಮಧುರವಾದ ಹೂಗಳಂತಿರುವ ಸುಗಂಧದಿಂದ ಪರಿಮಳಿಸುವಂತೆ ಮಾಡಲಾಗಿವೆ.

ಸ್ವಸ್ತಿಕಾ ಟೂತ್ ಪೇಸ್ಟ್ ಹಲ್ಲುಗಳನ್ನು ಬೆಳ್ಳಗೆಮಾಡುತ್ತವೆ; ಒಸಡುಗಳನ್ನು ಗಟ್ಟಿಮಾಡುತ್ತವೆ; ಮತ್ತೂ ದಂತಗಳು ಕೆಡುವುದನ್ನು ತಡೆಯುತ್ತವೆ.

ಸ್ವಸ್ತಿಕಾ ಆಯಿಲ್ ಮಿಲ್ಸ್ ಲಿಮಿ.,
ವಡಾಲ, ಬೊಂಬಯಿ 15.

AUM TAT-SAT——
TAT-TVAM-ASI.

(By Mr. M. Narasing Rao, B. A., M. L., District and Sessions Judge, Retd.)

In every clime,
At every time,
The sages meditating sat,
And reached the One
Great Noumenon:—

AUM! THAT EXISTS. *and* THOU ART THAT!

While Karma's coils
And Maya's toils
Securely hold thy habitat,
Remember then,
Again, again,

But THAT EXISTS. *and* THOU ART THAT!

If power and pelf
Advance thy self
And heap on thee all comforts fat,
In transient bliss
Forget not this,—

That THAT EXISTS. *and* THOU ART THAT!

Though penury
Abaseth thee,
And shame and woe sit on thee pat,
Thy self is bound
To get them round,

If THAT EXISTS. *and* THOU ART THAT!

Believe me, mate,
Or soon or late,
Thy barge the haven shall get at,
'Gainst any odds;
Thy soul is God's!

For THAT EXISTS. *and* THOU ART THAT!

ESTD: 1906.

CANARA BANK
LIMITED.

HEAD OFFICE: MANGALORE.

Subscribed Capital	....	....	6,00,000.
Paid up Capital	....	....	3,33,000.
Reserves	....	....	4,50,000.
Deposits	....	....	61,92,000.
Working Capital	....	....	73,40,000.

OFFICES

Bombay-Fort, Bombay-Mandvi, Hubli, Calicut Cochin, Ernakulam, Alleppey, Bangalore, Chikmagalur, Mangalore-Bunder, Mangalore-City, Kasaragod, Puttur, Udipi, Karkala, Coondapoor, Ganguli, Bantval, Davangere & Moolky.

ALL KINDS OF BANKING BUSINESS UNDERTAKEN.

ಕಂಠೀರವ

(ವಸಂತತಿಲಕವೃತ್ತಮ್)

ಇಂದಂತು ನೀತಿನಿಪುಣಾ ಯದಿ ವಾ ಸ್ತುವಂತು ।
ಲಕ್ಷ್ಮೀಸ್ಸಮಾವಿಶತು ಗಚ್ಛತು ವಾ ಯಥೇಷ್ಟಮ್ ॥
ಅದ್ಯೈವ ವಾ ಮರಣಮಸ್ತು ಯುಗಾಂತರೇ ವಾ ।
ನ್ಯಾಯ್ಯಾತ್ಪಥಃ ಪ್ರವಿಚಲಂತಿ ಪದಂ ನ ಧೀರಾಃ ॥

[ಭರ್ತೃಹರಿ.

(ಚೌಪದಿ)

ನಿಂದಿಸಲಿ ವಂದಿಸಲಿ, ನಿಂದ ಧೀರರು ತಾ- ।
ವೆಂದಿರೆಯು ಹೊಂದಿರಲಿ ನಂದಿರಲಿ, ಮತ್ತಾ ॥
ಇಂದಿಗೊ ಯುಗಾಂತರಕೊ ಬಂದಿರಲಿ ಮರಣಂ, ।
ಹಿಂದಿಡರು ನ್ಯಾಯಪಥದಿಂದೊಂದು ಚರಣಂ! ॥

[M. N.

XVIII] ಮಂಗಳೂರು, ತಾರೀಕು ೨೭—೧೧—೧೯೩೬ [೬೮
೧೮೫೮ ಧಾತು ಸಂವತ್ಸರದ ಕಾರ್ತಿಕ ಶು। ೧೪ ಶುಕ್ರವಾರ

ರೈಲ್ವೇ ಶಾಖೆಯವರ ಮಹಾಸಭೆ.

ರೈಲ್ವೇ ಶಾಖೆಯವರ ಮಹಾಸಭೆಯೊಂದು, ಈಚಿಗೆ ತಾನೇ, ಡೆಲ್ಲಿಯಲ್ಲಿ ಜರುಗಿ ಮುಗಿಯಿತು. ಅಲ್ಲಿ ಚರ್ಚೆಗೆ ಬಂದ ಅನೇಕ ಪ್ರಾಮುಖ್ಯ ವಿಷಯಗಳಲ್ಲಿ, ರೈಲ್ವೆಯವರ ಆದಾಯವು ಕಡಿಮೆಯಾಗಿರುವುದೂ ಒಂದೆನ್ನಬಹುದಾಗಿದೆ. ಆದಾಯವು ಕಡಿಮೆಯಾಗಿರುವುದೆಂದರೆ—ಅಲ್ಪ ಸ್ವಲ್ಪವಲ್ಲ, ವಿಪರೀತವೆಂದೇ ವಿದ್ಯಮಾನಗಳನ್ನು ಬಲ್ಲವರಿಗೆಲ್ಲ ತಿಳಿದುದಾಗಿದೆ. ಈ ಕೊರತೆಯ ದೆಸೆಯಿಂದ, ರೈಲ್ವೇ ಶಾಖೆಯು, ತಾನು ಕೇಂದ್ರ ಸರಕಾರಕ್ಕೆ ಸಲ್ಲಿಸಬೇಕಾದ ಕನ್ನ ವಂತಿಗೆಯ ದ್ರವ್ಯವನ್ನು, ಕೆಲವು ವರ್ಷಗಳಿಂದ, ತೆರಲು ಅಸಮರ್ಥವಾಗಿದೆ ಎಂದಷ್ಟೇ ಅಲ್ಲ; ಈಗ ಕೆಲಕಾಲದಿಂದ ರೈಲ್ವೆಗಳ ಆದಾಯವು ಹೆಚ್ಚುತ್ತ ಬಂದಿದ್ದರೂ, ಅದು, ಬೀಳಬಹುದಾದ ನಷ್ಟದ ಅರ್ಧಭಾಗವನ್ನು ತುಂಬಬಹುದೇ ಹೊರತು, ಹೆಚ್ಚೇನೂ ಆಗಲಾರದೆಂದು ಕಾಮರ್ಸ್ ಮೆಂಬರರ ಹೇಳಿಕೆಯೂ ಆಗಿದೆ. ವಸ್ತುತಃ ರೈಲ್ವೆಗಳು ತಮ್ಮ ವಂತಿಗೆಯ ಪಾಲನ್ನು, ಕೇಂದ್ರ ಸರಕಾರಕ್ಕೆ ಸರಾಗವಾಗಿ ಸಲ್ಲಿಸಬೇಕಾದರೆ, ಈಗಿನಿಂದಲೂ ಆದಾಯವು ಎಷ್ಟೋ ಪಾಲು ಹೆಚ್ಚಬೇಕಾಗಿದೆ ಎಂಬುದನ್ನು ನಾವಿಲ್ಲಿ ಮರೆಯುವುದಲ್ಲ.

ಲಾರ್ಡ್ ಲಿನ್‌ಲಿತ್‌ಗೋರವರು, ಈ ಸಂದರ್ಭದಲ್ಲಿ, ಆ ಮಹಾಸಭೆಗೆ ಮಾಡಿದ ಹಿತೋಪದೇಶವು ಮನನೀಯವಾಗಿದೆ. ಅವರು, ಮಿತವ್ಯಯಕ್ಕಾಗಿ, ರೈಲ್ವೆಗಳು ನಡೆಸುತ್ತಿರುವ ಪ್ರಯತ್ನಗಳ ಕುರಿತು ಶ್ಲಾಘಿಸಿದರು; ಅಲ್ಲದೆ, ಈ ಮಿತವ್ಯಯದ ಕೊನೆಯ ಗುರಿ ಎಂತದಾಗಿರಬೇಕೆಂದೂ, ರೈಲ್ವೇ ಏಜೆಂಟರುಗಳನ್ನೂ ಎಚ್ಚರಿಸಿದರು. ಮಿತವ್ಯಯದ ಸದುದ್ದೇಶವು, ಹೊಸ ಸಾಹಸಕಾರ್ಯಗಳಿಗೊಂದು ಮಾರ್ಗವನ್ನು ತೋರುವುದೂ, ಜನತೆಯನ್ನು ಇನ್ನಷ್ಟು ಉತ್ತಮ ರೀತಿಯಿಂದ ಸೇವಿಸುವುದೂ ಆಗಿರಬೇಕು ಎಂದು ಅವರು ಅಪ್ಪಣೆ ಕೊಡಿಸಿದರು. ಇದಕ್ಕಾಗಿ ಅವರು ಲಂಡನಿನ ಮುತ್ತೂ ಪೂರ್ವದ ರೈಲ್ವೇಗಳ ದೃಷ್ಟಾಂತವನ್ನೆತ್ತಿಕೊಂಡು, ಆದಾಯ ಕಡಿಮೆಯಾದ ಈ ಸಮಯದಲ್ಲಿಯೇ ರೈಲ್ವೆಗಳ ಸಮಸ್ಯೆಗಳ ವಿಮರ್ಶೆಯಾಗಬೇಕೆಂದೂ, ವರ್ತಕರ ಮತ್ತೂ ಪ್ರಯಾಣಿಕರ ಅವಶ್ಯಕತೆಗಳಿಗೆ ತಕ್ಕಂತೆ ಯೋಗ್ಯ ವ್ಯವಸ್ಥೆಗಳನ್ನು ನಡೆಯಿಸಲು ಇದೇ ಸಕಾಲವೆಂದೂ ಅವರು ನುಡಿದರು. 'ಮುಖ್ಯವಾಗಿ ಮೇಲಾಟದ ಸ್ಫೂರ್ತಿಯು ಇಲ್ಲಿಯೂ ತಲೆದೋರಿರುವಲ್ಲಿ, ಜನತೆಗೆ ಬೇಕಾದುದೇನೆಂದು ಕೇಳಿ ತಿಳಿಯಿರಿ; ಮತ್ತೂ ನಿಮ್ಮಿಂದ ಸಾಧ್ಯವಿರುವಷ್ಟು ಮಟ್ಟಿಗೂ ಆ ಸಲಕರಣೆಗಳನ್ನೊದಗಿಸಲು, ಅಗತ್ಯವಾಗಿಯೂ ಪ್ರಯತ್ನ ಮಾಡಿರಿ' ಎಂದು ಅವರು ಉಪದೇಶಿಸಿರುವಾಗ, ರೈಲ್ವೇಯವರ ಆದ್ಯಕರ್ತವ್ಯವೇನೆಂದು ಇನ್ನೂ ಹೇಳಬೇಕೇ?

ಸರ್ ಮಹಮ್ಮದ್ ಜಫ್ರುಲ್ಲಾರವರಾದರೂ, ನಮ್ಮ ವೈಸರಾಯರ ಕೊನೆಯ ಮಾತನ್ನು ಒಂದು ರೀತಿಯಲ್ಲಿ ಸಮರ್ಥಿಸದೆ ಇರಲಿಲ್ಲ. ಪ್ರಯಾಣಿಕರಿಗೆ ತಕ್ಕ ಸೌಕರ್ಯಗಳನ್ನು ಒದಗಿಸಲು ರೈಲ್ವೇ ಕಂಪೆನಿಗಳಿಗೆ ಧಾರಾಳವಾದ ಅವಕಾಶವಿದೆ ಎಂದೂ, ಪ್ರತ್ಯೇಕವಾಗಿ ಕೊನೆಯ ತರಗತಿಯವರಿಗೆ ಅವುಗಳನ್ನು ಅವಶ್ಯವಾಗಿ ಒದಗಿಸಬಹುದೆಂದೂ ಅವರು ಸೂಚಿಸಿದರು. ಈ ಕುರಿತಾಗಿ ಪ್ರಾರಂಭವನ್ನೇನೋ ಮಾಡಲಾಗಿದೆ; ಸಾಧ್ಯವಿರುವಷ್ಟು ಮಟ್ಟಿಗೆ, ಕೆಳ ತರಗತಿಯವರಿಗೆ ಅನುಕೂಲ ಪಡಿಸಿಕೊಡಲಾಗುವುದು ಎಂದು ಅದೇ ಕಾಮರ್ಸ್ ಮೆಂಬರರೇ ನುಡಿದರು.

ಪ್ರಕೃತ, ರೈಲ್ವೆಯವರಿಗೂ, ಬಸ್ಸುಗಳವರಿಗೂ ನಡೆಯುತ್ತಿರುವ ಮೇಲಾಟದ ಹೋರಾಟದಿಂದ ರೈಲ್ವೆ ಕಂಪೆನಿಗಳಿಗೆ ತುಂಬ ನಷ್ಟವುಂಟಾಗುತ್ತಿದೆ ಎಂಬುದನ್ನು ಎಲ್ಲರೂ ಒಪ್ಪಲೇಬೇಕಾಗಿದೆ. ಆದರೆ ರೈಲ್ ಮತ್ತು ರಸ್ತೆಗಳ ಈ ಸ್ಪರ್ಧೆಯನ್ನು ತಪ್ಪಿಸುವುದಕ್ಕೇನು ಉಪಾಯ? ಎಂಬ ಕುರಿತು ಅಭಿಪ್ರಾಯವು ಏಕರೀತಿಯಾಗಿಲ್ಲ. ಹಾಗೆಂದು ರೈಲ್ವೆ ಪ್ರಯಾಣಿಕರನ್ನು ರಸ್ತೆಗಳಲ್ಲಿ ತರುತ್ತಿರುವ ಬಸ್ ವಹಿವಾಟುಗಳ ಕುರಿತು ಸಮಾಲೋಚಿಸಿ, ಈ ಸ್ಪರ್ಧೆಯನ್ನು ಕೊನೆಗೊಳಿಸದೆ ನಿರ್ವಾಹವೂ ಇಲ್ಲ. ಇದೇ ಈಗ ಅತ್ಯಂತ ಕಷ್ಟತರವಾದ ಸಮಸ್ಯೆ ಎಂದು ಮಿ. ಕೋಲಮ್ ಸಾಹೇಬರೂ ಹೇಳುತ್ತಿದ್ದಾರೆ.

ಇದಕ್ಕೆಲ್ಲಾ ಅವರಿವರು ಬರೇ ಬಾಯಲ್ಲಿ ಒಪ್ಪಿಕೊಂಡು ಉಪಚಾರೋಕ್ತಿಗಳನ್ನಾಡುತ್ತಿರುವಾಗಲೇ, ರೈಲ್ ಶಾಖೆಯವರೂ 'ಮೂರನೆಯ ತರಗತಿಯ ಪ್ರಯಾಣಿಕರ ಸೌಕರ್ಯದ ಸಲುವಾಗಿ ಅಷ್ಟಿಷ್ಟನ್ನು ಮಾಡಿದ್ದೇವೆ, ಇನ್ನು ನಮ್ಮ ತಪ್ಪೇನೂ ಇಲ್ಲ'ವೆಂದು ತಮಗೆ ತಾವೇ ಸಮಾಧಾನ ಹೇಳಿಕೊಂಡರೇ ಸಾಲದು. ಮೂರನೆಯ ತರಗತಿಯ ಪ್ರಯಾಣಿಕರೇ, ರೈಲ್ವೇ ಆದಾಯದ ಜೀವಾಳವೆಂಬುದನ್ನು ಚೆನ್ನಾಗಿ ತಿಳಿದುಕೊಂಡು, ಪ್ರಯಾಣಿಕರಿಗೆ ಇಸ್ತೆ ಪ್ರಯಾಣದಲ್ಲಿ ಈಗ ದೊರಕುತ್ತಿರುವ ಸೌಕರ್ಯಗಳಿಗಿಂತಲೂ ಹೆಚ್ಚಾದ್ ಅನುಕೂಲ್ಯಗಳನ್ನು ಆ ಶಾಖೆಯವರು ಕಲ್ಪಿಸಿಕೊಡುವೆದರೊಂದಿಗೆ, ಪ್ರಯಾಣದ ದರವನ್ನೂ, ಸರಕುಗಳ ಮೇಲಿನ ದರವನ್ನೂ ತಗ್ಗಿಸುವ ಮೂಲಕ ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳಬಹುದೆಂದು ನಾವಿಲ್ಲಿ ಸೂಚಿಸುತ್ತೇವೆ. ಈ ರೈಲ್ವೆ ಸುಧಾರಣೆಗಳ ವಿಷಯದಲ್ಲಿ ಪ್ರಕೃತ ಆಲೋಚಿಸುತ್ತಿರುವ ಆ ವೆಜ್‌ವುಡ್ ಕಮಿಟಿಯವರು, ರೈಲ್ವೆ ತಾಪತ್ರಯಗಳಲ್ಲಿ ಯಾವುದನ್ನೆಷ್ಟು ಮಟ್ಟಿಗೆ ಆಲೋಚಿಸಿ, ಯಾವುದಕ್ಕೆ ಯಾವ ಬಗೆಯ ನಿವೃತ್ತಿಗಳನ್ನು ಕಲ್ಪಿಸುವರೋ ತಿಳಿಯದಾದರೂ, ಈ ವಿಚಾರಣಾ ಸಮಿತಿಯಲ್ಲಿ ಹಿಂದೀಯನೊಬ್ಬನೂ ಇಲ್ಲವೆಂಬೀ ಪ್ರಾಮುಖ್ಯ ಸಂಗತಿಯು, ಪ್ರಜಾಕೋಟಿಯಲ್ಲಿ ಈಗಲೇ ಒಂದು ಬಗೆಯ ಸಂದೇಹವನ್ನೂ, ಕಳವಳವನ್ನೂ ಉಂಟುಮಾಡಿದೆ ಎಂಬುದು ನಿಜ. ಆದುದರಿಂದ, ಆ ವೆಜ್‌ವುಡ್ ಕಮಿಟಿ, ರೈಲ್ವೆ ಸುಧಾರಣೆಗಳ ಎಲ್ಲ ಪ್ರಶ್ನೆಗಳನ್ನೂ ಸೂಕ್ಷ್ಮದೃಷ್ಟಿಯಿಂದ ವಿಮರ್ಶಿಸಿ, ರೈಲ್ವೆ ಕಂಪೆನಿಗಳ ಮತ್ತೂ ಹಿಂದೀ ಜನತೆಯ ಪರಸ್ಪರ ಹಿತದೃಷ್ಟಿಯಿಂದ ಅವನ್ನು ತೀರ್ಮಾನಿಸುವುದು ಕಾಲೋಚಿತವೆಂದು ಇಲ್ಲಿ ಒತ್ತಿ ಹೇಳಬೇಕಾಗಿದೆ. ಈ ಸಂದರ್ಭದಲ್ಲಿ, ಪೋಸ್ಟ್ ಮತ್ತೂ ಟೆಲಿಗ್ರಾಫ್ ಶಾಖೆಗಳು ಕಡಿಮೆ ಮಾಡಿದ ದರದ ಉದಾಹರಣೆಯನ್ನು ರೈಲ್ವೇ ಶಾಖೆಯವರೂ ಜ್ಞಾಪಕಕ್ಕೆ ತಂದುಕೊಂಡು, ಅದರಂತೆಯೇ ಅವರೂ ವರ್ತಿಸುವುದೂ ಯೋಗ್ಯವಾಗಿದೆ.

ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಈ ಸಂಸ್ಥೆಯ ಗತವರ್ಷದ,—ಅಂದರೆ ೧೯೩೬ನೇ ಇಸವಿ ಸೆಪ್ಟೆಂಬರ್ ತಾ. ೩೦ಕ್ಕೆ ಅಂತ್ಯವಾಗುವ ಪ್ರಥಮ ವರ್ಷದ-ವರದಿಯು, ನಮಗೆ ಪ್ರೀತಿಪೂರ್ವಕವಾಗಿ ಕಳುಹಿರುವುದನ್ನು, ನಾವೂ ಅತ್ಯಾದರದಿಂದ ಸ್ವೀಕರಿಸಿರುತ್ತೇವೆ. ಇದು ನಮ್ಮ ಜಿಲ್ಲೆಯ ಎರಡನೆಯ ನಗರವಾದ ಉಡುಪಿಯಲ್ಲಿ, ಕಳೆದ ವರ್ಷದಲ್ಲಿ ಜನ್ಮವೆತ್ತಿದುದು; ನಮ್ಮ ಜಿಲ್ಲೆಗೆ, ಏಕೆ, ಕರ್ಣಾಟಕ ಪ್ರಾಂತಕ್ಕೇ ಸುವರಿಚಿತರಾದ ಡಾ. ಮಾಧವ ಪೈಗಳವರೇ ಇದರ ಜನಕರು.

ಗತವರ್ಷದಲ್ಲಿ ಈ ಸಂಸ್ಥೆಯು ಸುಮಾರು ರೂ. ೧೪,೫೮,೪೦೦ಗಳ ಮೌಲ್ಯದ ಪ್ರಪೋಜಲುಗಳನ್ನು ಪಡೆದಿದ್ದು, ಅವುಗಳಲ್ಲಿ ರೂ. ೧೧,೫೮,೪೦೦ಗಳ ಮೌಲ್ಯದ ಪಾಲಿಸಿಗಳನ್ನು ಈ ಸಂಸ್ಥೆಯು ಕೊಡಲು ಸಮರ್ಥವಾಯಿತೆಂಬುದು ತುಂಬ ಸಂತೋಷಕರ. ಇದರ ವಾರ್ಷಿಕ ಉತ್ಪನ್ನವು ರೂ. ೫೫,೧೯೨—೭—೦ ಎಂದೂ, ಜೀವವಿಮಾ ಫಂಡು ರೂ. ೧೦,೧೫೧—೧೪—೨ ಎಂದೂ ಪ್ರಕಟವಾಗಿರುವುದು ಈ ಸಂಸ್ಥೆಯ ವೃದ್ಧಿಗತಿಯ ಒಂದು ಮುಖ್ಯ ಕುರುಹು ಎಂದು ಪ್ರತ್ಯೇಕ ಹೇಳಬೇಕಾಗಿಲ್ಲ.

ಮಿತವ್ಯಯ, ದಕ್ಷತೆಯ ಕಾರ್ಯಭಾರ, ಪಾಲುಗಾರರ ಹಿತರಕ್ಷಣೆ, ಸುಲಭ ಕಂತಿನ, ಸುಲಭ ದರದ ಪ್ರೀಮಿಯಮ್, ಅತ್ಯಾಧುನಿಕ ಜೀವ ಪ್ರದಾಯಗಳ ಹಲವು ಬಗೆಯ ವಿಮಾಪದ್ಧತಿ—ಇವೆಲ್ಲಾ, ಚಿಕ್ಕದಾದರೂ, ಮೊನ್ನೆ ತಾನೇ ಜನಿಸಿದ ಮಗುವಾದರೂ, ಇದರಲ್ಲಿ, ಆ ನಮ್ಮೂರಿನ ಈ ಸಂಸ್ಥೆಯಲ್ಲಿದೆ ಎಂಬುದನ್ನು ಕನ್ನಡಿಗರೆಂದಿಗೂ ಮರೆಯಬಾರದು!

ಈ ಸಂಸ್ಥೆಗೆ ಆರಂಭದಲ್ಲಿ ತಗುಲಿದ ಎಲ್ಲ ಖರ್ಚುಗಳನ್ನೂ ಒಂದೇ ಒಂದು ವರ್ಷದಲ್ಲಿ ತುಂಬಿಕೊಂಡೂ, ಇಷ್ಟು ಮಟ್ಟಿನ ಜೀವವಿಮಾ ಫಂಡನ್ನು, ಈ ಸಂಸ್ಥೆ, ಇಷ್ಟರಲ್ಲಿಯೇ ಸ್ಥಾಪಿಸ

ಮಂಗಳೂರು

'ಇವೇ ತಿಂಗಳ ತಾರೀಕು ೨೯ನೇ ಆದಿತ್ಯವಾರ ಪ್ರಾತಃಕಾಲ ಗಂಟೆ ೮-೩೦ಕ್ಕೆ ಸರಿಯಾಗಿ ಇಲ್ಲಿಯ ಶ್ರೀ. ಗೋಕರ್ಣನಾಥ ಕ್ಷೇತ್ರದಲ್ಲಿ ಗವರ್ನ್‌ಮೆಂಟ್ ಕೋಲೇಜಿನ ಕೆಮಿಸ್ಟ್ರಿ ಲೆಕ್ಚರರಾದ ಶ್ರೀಮಾನ್ ಪಡುಕೋಣೆ ರಮಾನಂದ ರಾವ್, ಎಂ., ಎ., ಎಲ್. ಟಿ.ಯವರಿಂದ ಭಾಷಣವಿರುವುದು. ಎಲ್ಲರಿಗೂ ಸ್ವಾಗತವಿದೆ.'

ಜಿಲ್ಲೆಯ ಹಲವು ಅಷ್ಟ ಮತದಾರರ ಅಪೇಕ್ಷೆಯ ಮೇರೆಗೆ, ಶ್ರೀ ಧರ್ಮಸ್ಥಳದ ಶ್ರೀ. ಮಂಜಯ್ಯ ಹೆಗ್ಗಡೆಯವರು, ಹಿಂದೆ ತಿಳಿಸಿದಂತೆ, ನ್ಯಾಯ ವಿಧಾಯಕ ಸಭೆಗಳ ಸ್ಥಾನಗಳಲ್ಲಿ ಒಂದಕ್ಕೆ—ಎಂದರೆ, ನಮ್ಮ ಪ್ರಾಂತಿಕ ಕೌನ್ಸಿಲಿನ (ಅಪ್ಪರ್ ಹೌಸಿನಲ್ಲಿ)ಲ್ಲಿ ಈ ಜಿಲ್ಲೆಗಿರುವ ಒಂದೇ ಒಂದು ಸ್ಥಾನಕ್ಕೆ ತಾವು ಈಗ ಉಮೇದುವಾರರಾಗಿ ನಿಲ್ಲಲು ನಿರ್ಧರಿಸಿರುವೆವೆಂದು ಶ್ರೇಯುತರು ನಮಗೆ ಸ್ವತಃ ತಿಳಿಸಿರುತ್ತಾರೆ. ಇವರು ಸ್ವತಂತ್ರ ಪಕ್ಷದವರು.

ಡಾ॥ ಹಡೀಕರರು ನಮ್ಮ ಜಿಲ್ಲೆಯ ಪ್ರವಾಸವನ್ನು ಈ ಬಾರಿಗೆ ಮುಗಿಸಿ, ಜಿಲ್ಲೆಯ ಕೆಲವೆಡೆಗಳಲ್ಲಿ ಕೊಂಗ್ರೆಸ್ ಚುನಾವಣೆಯ ಸಂಬಂಧದ ಪ್ರಚಾರಕಾರ್ಯವನ್ನು ಸಾರೋದ್ಧಾರವಾಗಿ ನಡೆಯಿಸಿ, ಮಂಗಳೂರಿನ ಕಾಂಗ್ರೆಸ್ ಕೆಲಸಗಾರರಲ್ಲಿದ್ದ ಮನಸ್ತಾಪವನ್ನು ಕೊನೆಗೊಳಿಸಿ ಇಂದು ಇಲ್ಲಿಂದ ಹೊರಟು ಹೋಗಿರುವರು.

(೯ನೇ ಪುಟಕ್ಕೆ ಮುಂದುವರಿಸಿಯದೆ)

ಲು ಸಮರ್ಥವಾಗಿರುವುದಕ್ಕಾಗಿ, ನಾವು ಕಂಪೆನಿಯ ಡೈರೆಕ್ಟರರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ. ಇದಕ್ಕೆ ಪ್ರತ್ಯೇಕ ಕಾರಣವೇನೆಂದರೆ,—ಈ ರೀತಿ ಆರಂಭದ ಖರ್ಚನ್ನು ಮೊದಲಿನ ವರ್ಷದಲ್ಲಿಯೇ ತುಂಬಿ ಬಂದ ವಿಮಾ ಸಂಸ್ಥೆಗಳು ನಮ್ಮಲ್ಲಿ ಬಹು ವಿರಳ!

ನಮ್ಮ ಜಿಲ್ಲೆಯಲ್ಲಿ, ಏಕೆ, ನಮ್ಮ ಸಮಗ್ರ ಕರ್ಣಾಟಕದಲ್ಲೆಲ್ಲಾ ಅತ್ಯಂತ ಸುಪ್ರಸಿದ್ಧವಾದ ಬೇಂಕುಗಳಲ್ಲಿ ಒಂದಾದ ನಮ್ಮ ಉಡುಪಿ 'ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಕಿಂಗ್ ಸಿಂಡಿಕೇಟ್, ಲಿಮಿಟೆಡ್' ಎಂಬೀ ಸಂಸ್ಥೆಯ ಸತ್ಸಹಾಯವು, ಈವಿಮಾ ಸಂಸ್ಥೆಗೂ ಧಾರಾಳವಾಗಿ ದೊರಕಿರುವುದು ಪಾಲುಗಾರರ, ಪಾಲಿಸಿದಾರರ ಮತ್ತೂ ಆ ಸಂಸ್ಥೆಯ ಭಾಗ್ಯವೆನ್ನಬೇಕು. ಅರ್ಥಾತ್, ಈ ವಿಮಾ ಸಂಸ್ಥೆಯ ಸಂಯೋಜಕರ, ಈ ಚಾತುರ್ಯಪೂರ್ಣವಾದ ಈ ಬಗೆಯ ಸಂಯೋಜನೆಯೇ, ಈ ವಿಮಾ ಸಂಸ್ಥೆಯ ಇಂದಿನ ಅಪೂರ್ವ ಅಭಿವೃದ್ಧಿಗೂ, ಮುಂದಿನ ಅತ್ಯಂತ ಆಶಾಜನಕವಾದ, ಶುಭಪ್ರದವಾದ ಏಳಿಗೆಗೂ ಕಾರಣವೆಂದರೆ, ಅತ್ಯುಕ್ತಿ ಎನಿಸದು.

ಈ ಕಂಪೆನಿಯ ಎಕ್ಸ್‌ಚೆರಿಗಳಾದ ಪ್ರೊಫೆಸರ್ ಕೆ. ಬಿ. ಮಾಧವ, ಎಂ. ಎ., ಎಫ್. ಆರ್. ಎಸ್., ಏ. ಐ. ಏ. (ಲಂಡನ್) ಇವರು, ಈ ಸಂಸ್ಥೆಯ ಸುಭದ್ರವಾದ ವ್ಯವಹಾರಗಳ ಕುರಿತೂ, ಆದಿಯಲ್ಲಿಯೇ ತಿಂಗಳೊಂದಕ್ಕೆ ಸರಾಸರಿ ಸುಮಾರು ೧ ಲಕ್ಷ ರೂಪ್ಯಾಗಳ ವಿಮಾಕಾರ್ಯಗಳನ್ನು ಈ ಸಂಸ್ಥೆ ನಡೆಸಿದ ಕುರಿತೂ, ಇದರ ಅತ್ಯಂತ ಕಡಿಮೆಯಾದ ಮಿತವ್ಯಯದ ಕುರಿತೂ, ಒಂದೇ ಒಂದು ವರ್ಷದ ಅಲ್ಪಾವಧಿಯೊಳಗೇ, ಈ ಸಂಸ್ಥೆ ಆರಂಭದ ವೆಚ್ಚನನ್ನು ತುಂಬಿಕೊಂಡಿರುವ ಕುರಿತೂ ತಮ್ಮ ಸ್ಫುಟವಾಣಿಯ ಪ್ರಶಂಸೆಯನ್ನು ಸುವ್ಯಕ್ತವಾಗಿ ಪ್ರಕಟಿಸಿದ್ದಾರೆ. ಈ ಸಂಸ್ಥೆಯ ಜೀವಾಳವಾದ ಡಾ. ಮಾಧವ ಪೈಗಳವರೂ, ಅವರ ಸಹೋದ್ಯೋಗಿಗಳೂ, ಈ 'ಕ್ರೆಡಿಟಿಗೆ' ಸರ್ವಪ್ರಕಾರದಿಂದಲೂ ಯೋಗ್ಯರೆಂದು ನಾವು ಕೂಡ ಅಭಿಪ್ರಾಯಪಡುತ್ತೇವೆ.

ಕನ್ನಡಿಗರೆ! ಈ ಸಂಸ್ಥೆಯು ನಿಮ್ಮದು. ಇದರ ಬೆಳವಣಿಗೆಯ ಕೀರ್ತಿಯಲ್ಲಿ ಒಂದು ಪಾಲು ನಿಮಗೂ ಇದೆ; ನಿಮ್ಮ ನಾಡಿಗೂ ಇದೆ. ಕರ್ಣಾಟಕದ ಏಕೀಕರಣಕಾರ್ಯವು ಇಂತಹ ಸಂಸ್ಥೆಗಳ ಸತ್ಸಹಾಯದಿಂದಲೂ ಸಹವಾಸದಿಂದಲೂ ಆಗಬೇಕಾಗಿದೆ. ಆದುದರಿಂದ, ವಿಳಂಬಿಸಬೇಡಿ—ಬನ್ನಿ! ಈ ಸಂಸ್ಥೆಯಲ್ಲಿ ಒಂದೆರಡು ಪಾಲಿಸಿಗಳನ್ನು ನೀವೂ ಅವಶ್ಯವಾಗಿಯೂ ಪಡೆದು, ಇತರರೂ ಪಡೆಯುವಂತೆ ಪ್ರೋತ್ಸಾಹಿಸಿ, ಆ ಮೂಲಕ ನಮ್ಮ ಕರ್ಣಾಟಕದ ಹೆಸರು, ಕರ್ಣಾಟಕದ ಈ ಸಂಸ್ಥೆಯ ಕೀರ್ತಿಯು ಭಾರತಭೂಮಿಯ ಎಲ್ಲ ದಿಕ್ಕುಗಳಲ್ಲಿಯೂ ಬೇಗನೇ ಪಸರಿಸುವಲ್ಲಿ ನೆರವಾಗಿರಿ!

ಹಿಂದೂ ದೇಶ

ಸಮಗ್ರ ಭಾರತದ ಹಿಂದೀ ಸಮ್ಮೇಳನದ ಅಧಿಕಾರಿಗಳ ಸೂಚನೆಯ ಮೇರೆಗೆ, ಇಂಡಿಯದಲ್ಲೆಲ್ಲಾ, ಡಿಸೆಂಬರ ತಾ. ೨೦ರಲ್ಲಿ ಪ್ರೇಮಚಂದರ ದಿನಾಚರಣೆಯು ನಡೆಯಬೇಕಾಗಿದೆ. ಅದರಂತೆ ಪ್ರಾಂತಿಕ ಮತ್ತೂ ಜಿಲ್ಲಾ ಹಿಂದೀ ಪ್ರಚಾರಕ ಸಂಸ್ಥೆಗಳು, ಅಂದಿನ ಈ ಸಂಬಂಧದ ವ್ಯವಸ್ಥೆಗಳನ್ನು ಅಲ್ಲಲ್ಲಿ ಮಾಡಬೇಕೆಂದು ಆ ಸಮ್ಮೇಳನದವರ ಅಪ್ಪಣೆ.

ಪಂಜಾಬಿನ ಬಾರಿನ ಮೆಂಬರರು, ಲಾಹೋರು ಹ್ಯಾಕೋರ್ಟಿನ ಜಡ್ಜಿಗಳಿಗೆ, ಕ್ರಿಸ್‌ಮಸ್ ಅಥವಾ ಹೊಸ ವರ್ಷದ ಸಂಬಂಧದ ಕಾರ್ಡುಗಳು, ಅಭಿನಂದನದ ತಂತಿ, ಪತ್ರ ಇತ್ಯಾದಿಗಳನ್ನು ಕಳುಹುವ ಅಗತ್ಯವಿಲ್ಲವೆಂದು ಅಪ್ಪಣೆಯಾಗಿದೆ. ಇದೇ ಅಪ್ಪಣೆಯನ್ನೇ ಆ ಪ್ರಾಂತದ ಎಲ್ಲ ಬಾರ್ ಸಂಘಗಳಿಗೂ ತಿಳಿಸಲಾಗಿದೆ. ಇದೇ ರೀತಿ ಎಲ್ಲ ಪ್ರಾಂತಗಳೂ ಇದೇ ಅಪ್ಪಣೆಯನ್ನೇ ಅನುಕರಿಸಿದಲ್ಲಿ ಪೋಸ್ಟಲ್ ಶಾಖೆಗೆ ಎಷ್ಟೋ ಸಪ್ಪವಾಗಬಹುದು. ಈ ಸಪ್ಪಕ್ಕೆ ಕಾರಣರು ಪಂಜಾಬಿನ ಹ್ಯಾ ಕೋರ್ಟಿನವರೇ ಎನ್ನುವಾಗ, ನಮ್ಮ ಪೋಸ್ಟಲ್ ಶಾಖೆಯವರೂ ಅವರ ಮೇಲೇನಾದರೂ ಆಕ್ಷೇಪ ಹೇಳುವರೇನೋ ನೋಡಬೇಕಾಗಿದೆ.

ಬೊಂಬಯಿಯಲ್ಲಿ ಈಚಿಗೆ ೨-೩ ಉರುಡಾಟಗಳಾಯ್ತು. ಒಬ್ಬಸದರಲ್ಲಿ ಸತ್ತ.

ಪ್ರೋದತ್ತೂರು ಪ್ರಾಂತದ ಸೋಮಾಪುರಂ ಎಂಬ ಗ್ರಾಮದಲ್ಲಿ ಭಾರಿ ದೊಂಬಿ ನಡೆದು, ಕೊನೆಗೆ ಪೋಲೀಸರು ಬಂದು ಗುಂಡು ಹಾರಿಸಬೇಕಾಯಿತು. ಪ್ರಾಣಸಪ್ಪವೇನೂ ಇದರಿಂದ ಆಗಿಲ್ಲವಂತೆ.

ಕುಂಭಕೋಣದ ಸುಪ್ರಸಿದ್ಧ ಸಂಸ್ಕೃತ ವಿದ್ವಾಂಸರಾದ ಶ್ರೀ. ಟಿ. ಆರ್. ಕೃಷ್ಣಮಾಚಾರ್ಯರವರ ಸೊಸೆ, ಮಿಸೆಸ್ ಗೋಜೀ ಬಾಯಿ ಎಂಬಾಕೆ, ನದಿಗೆ ಸ್ನಾನಕ್ಕೆ ತೆರಳಿದ್ದಾಗ, ಸುಳಿಗೆ ಸಿಕ್ಕಿ, ಮೃತಳಾದಳು.

ಪಂಜಾಬಿನಲ್ಲಿ, ಕುಂಟರು ಪುನಃ ಮತ್ತೆರಡು ಮೋಟರ್ ಕಾರುಗಳಿಗೆ ಬೆಂಕಿ ಕೊಟ್ಟಿದ್ದಾರೆ. ಅವರು ಮೊದ್ದ ಪ್ರಕಟಣಾಪತ್ರಗಳನ್ನೂ ಅಲ್ಲಲ್ಲಿ ಅಂಟಿಸಿರುವುದು ಕಂಡುಬಂದಿದೆ.

ನಮ್ಮ ವೈಸರಾಯರಾದ ಲಾರ್ಡ್ ಲಿನ್‌ಲಿತ್‌ಗೋರವರು, ಬತ್ತಿ ಹೋಗಿ ಕಟುಕರ ವಶವಾಗಲಿದ್ದ ೬ ಉತ್ತಮ ಗೋವುಗಳನ್ನು, ತಾವೇ ತಮ್ಮ ವೆಚ್ಚದಿಂದ ಬೆಲೆಗೆ ಕೊಂಡು, ಅವನ್ನು ದಿಲ್ಲಿಯ ಒಂದು ಗೋಶಾಲೆಗೆ ಒಪ್ಪಿಸುತ್ತ, ಇಂತಹ ಉತ್ತಮ ದನ ಕರುಗಳನ್ನೂ ಕಟುಕರಿಗೆ ಮಾರುವ ಕ್ರೂರಪದ್ಧತಿಯನ್ನು ಖಂಡಿಸಿ, ತಮಗೆ ಪ್ರಾಣಿಗಳಲ್ಲಿರುವ ಕನಿಕರದ ಕುರಿತು ಈ ಪ್ರತ್ಯಕ್ಷ ಪ್ರಮಾಣದಿಂದ ಪ್ರಮಾಣೀಕರಿಸಿದರು.

ತೇಜಪುರದಲ್ಲಿ ದುರ್ಗಾಚರಣ ದಾಸ್ ಎಂಬ ತಾಂತ್ರಿಕ ಸಾಧುವು, ಒಂದು ದಿನ ಅರ್ಧ ಸುಟ್ಟ ಒಂದು ಶವದ ಅಂಗಗಳನ್ನು ತಿನ್ನುತ್ತಿದ್ದನೆಂದೂ, ಇನ್ನೊಂದು ದಿನ ಹೂಳಿಟ್ಟ ಒಂದು ಹುಡುಗಿಯ ಶವವನ್ನು ತಿಂದನೆಂದೂ ಪೋಲೀಸರಿಂದ ಕೈದು ಮಾಡಲ್ಪಟ್ಟು ಈಗ ಬಿಡುಗಡೆ ಹೊಂದಿದ್ದಾನೆ.

ಕಲ್ಕತ್ತೆಯ ರಾಣೀ ಚಾರುಶೀಲೆ ಎಂಬ ಧರ್ಮಾತ್ಮ ಮಹಿಳೆಯು ದೇವಘಡದ ಬಾಲಾನಂದ ಬ್ರಹ್ಮಚಾರಿ ಆಶ್ರಮದಲ್ಲೊಂದು ದೇವಸ್ಥಾನದ ನಿರ್ಮಾಣಕ್ಕಾಗಿ ೩ ಲಕ್ಷ ರೂಪಾಯಿಗಳ ದಾನ ಮಾಡಿದ್ದಾಳೆ. ಅಲ್ಲಿಯೇ ಒಂದು ಸಂಸ್ಕೃತ ಕಾಲೇಜಿನ ನಿರ್ಮಾಣವಾಗುವ ಪ್ರಯತ್ನವೂ ನಡೆಯುತ್ತಿದೆ.

ನಮ್ಮ ಸಿನೆಮಾ ಕೈಗಾರಿಕೆಗಳಲ್ಲಿ ವಿನಿಯೋಗವಾಗ ಮೂಲಧನ ಹನ್ನೊಂದು ಕಾಲು ಕೋಟಿ ರುಪಾಯಿಗಳು—ನಮ್ಮ ದೇಶದ ಮುಖ್ಯ ಕೈಗಾರಿಕೆಗಳ ಮೂಲಧನದಲ್ಲಿ ಏಳರಲ್ಲೊಂದು ಪಾಲು; ಈ ಕೈಗಾರಿಕೆಯ ಆಸ್ತಿತ್ವದಿಂದ ೨೫ ಸಾವಿರ ಮಂದಿಯ ಜೀವನನಿರ್ವಾಹವಾಗುತ್ತದೆ ಎಂದು ಮದ್ರಾಸಿನಲ್ಲಿ ಸರ್ ಫಿರೋಜ್ ಸೇತ್ನಾರವರು ಅಪ್ಪಣೆ ಕೊಡಿಸಿದರು.

ಮಿಸೆಸ್ ಮಜೇಬಿನ್ ಮೌಲ್ಜೀ, ಸಮಗ್ರ ಭಾರತದ ವ್ಯಾಪಾರ ಯೂನಿಯನ್ ಸಂಘದ ಜನರಲ್ ಸೆಕ್ರಟರಿ, ಇವರು, ಸೋಶಿಯಲಿಸ್ಟ್ ಪಂಗಡದ ವರ್ತನವು ಸ್ವೇಚ್ಛಾಚಾರವನ್ನು ಅನುಸರಿಸಿದೆ ಎಂಬ ಕಾರಣದಿಂದ ಆ ತಮ್ಮ ಪದವಿಗೆ ರಾಜೀನಾಮೆ ಕೊಟ್ಟಿದ್ದಾರೆ.

ರಾವ್ ಬಹದೂರ್ ಎಸ್. ಎನ್. ವಿ. ರಾಜಾಚಾರ್ ಇವರು ಮದ್ರಾಸಿನಲ್ಲಿ ದಿವಂಗತರಾದರು. ಇವರು ಕೆಲ ಕಾಲದ ಹಿಂದೆ ನಮ್ಮ ಜಿಲ್ಲಾ ಕಲೆಕ್ಟರರಾಗಿದ್ದರು. ಎರಡು ವರ್ಷ ಬೊಬ್ಬಿಲಿಯ ದಿವಾನರೂ ಆಗಿದ್ದರು. ಅಲ್ಲದೆ ಇವರು ಕೆಲವು ಧಾರ್ಮಿಕ ಸಂಸ್ಥೆಗಳ ಕಾರ್ಯಭಾರಗಳಲ್ಲಿಯೂ ಭಾಗಿಗಳಾದವರಾಗಿದ್ದರು.

ಹಿಂದೀ ಇನ್ಸ್‌ಟಿಟ್ಯೂಟಿನ ಜನಾಂಗಾಂತರ್ಗತವಾದ ವಿದ್ಯಮಾನಗಳ ಸಂಬಂಧದ ವ್ಯವಸ್ಥಾಪಕ ಕಾರ್ಯದರ್ಶಿಗಳಾಗಿ ಶ್ರೀ. ಬಿ. ಶಿವರಾಯರು ನೇಮಿಸಲ್ಪಟ್ಟಿದ್ದಾರೆ.

ವಿದೇಶ

ಸ್ಪೈನಿನಲ್ಲಿ ಅತ್ಯಂತ ಕ್ರೂರಾಚಾರದ ರಾಕ್ಷಸ ಕೃತ್ಯಗಳು ನಡೆಯುತ್ತಿವೆ. ಅಜ್ಜೀ ಕತೆಗಳಲ್ಲಿ ಕಂಡುಬರುವ ಆ ಪುರಾತನ ಹಿಂದೂಸ್ಥಾನದ ಆ ಅನಾಗರಿಕ ಕಾಲದ ಹಳೆಯ ಹಂಡನೆಗಿಂತಲೂ, ಈ ನಾಗರಿಕ ಪ್ರಪಂಚದವರ ಇಂದಿನ ದಂಡನೆಯ ಪದ್ಧತಿಯೇ ಅತ್ಯಂತ ಹೇಯವಾಗಿದೆ! 'ಇಪ್ಪು ಮಟ್ಟಿಗೂ ಮರಣದಂಡನೆಗಳೇ?' ಎಂದು ಕೆಥೊಲಿಕ್ ಪಾದರಿಯೊಬ್ಬನು, ಯುದ್ಧದ ಭೀಕರ ವ್ಯಾಪಾರಗಳ ಕುರಿತು, ಮನಸೊಂದು ಮರುಗಿ, 'ಹಾಗೆ ಮಾಡಬಾರದೆ'ಂದು ಸಾರಿದುದಕ್ಕಾಗಿ ಮರುದಿನವೇ ಅವನನ್ನು ವಧಿಸಿಬಿಟ್ಟಿದ್ದಾರೆ ದಂಗೆಗಾರರು! ಅದರಂತೆಯೇ 'ಗುಂಡು ಹೊಡೆದು ಅರ್ಧ ಜೀವ ಮಾಡಿ, ಆ ಅರ್ಧಜೀವಿಗಳನ್ನು ಆ ಸ್ಥಿತಿಯಲ್ಲಿಯೇ ಸಮಾಧಿಯಲ್ಲಿ ಹೂಳಿಕೊಳ್ಳಲಾಗದೆ'ಂದು, ಅಂತಹ ಅರ್ಧ ಜೀವದ ಶವಗಳನ್ನು ಸಮಾಧಿಗಳಲ್ಲಿ ಹೂಳಿಡಲು ನಿಯಮಿಸಲ್ಪಟ್ಟು ಇಬ್ಬರು ಆರಿಕೆ ಮಾಡಿಕೊಳ್ಳಲು, ಅವರಿಗೂ ಗತಿ ಅದೇ—ತಕ್ಷಣ ವಧೆ.

ಜರ್ಮನ್ ಇಂಜಿನಿಯರ್ ಸ್ವಿಕ್‌ಲಿಂಗ್ ಎಂಬಾತನೂ, ಅವನೊಡನಿರುವ ಇತರ ೮ ಮಂದಿಯೂ ರಷ್ಯದ ಪ್ರಭುತ್ವದವರ ಮೇಲೆ ಬೆಳಸಂಚು ನಡೆಸಿದರೆಂದು ಅವರಿಗೆ ಮರಣದಂಡನೆ ವಿಧಿಸಲಾಗಿದೆ. ಇವರನ್ನು ಉಳಿಸುವಂತೆ ಮಾಸ್ಕೋವಿನ ಜರ್ಮನ್ ರಾಯಭಾರಿಗಳು ಭಗೀರಥಪ್ರಯತ್ನವನ್ನೇ ನಡೆಸುತ್ತಿದ್ದಾರೆ.

ಚೀಫ್ ಸ್ಕಾಟರಾದ ಲಾರ್ಡ್ ಬೇಡನ್ ಪವೆಲ್ ರವರು, ೧೯೩೭ನೇ ಇಸ್ವಿ ಫೆಬ್ರವರಿಯಲ್ಲಿ ದಿಲ್ಲಿಯಲ್ಲಿ ಜರಗುವ ಸಮಗ್ರ ಭಾರತದ ಸ್ಕೌಟ್ ಜಂಬೂರಿನ ಅಧಿವೇಶನಕ್ಕೆ ಪತ್ನೀಸಹಿತರಾಗಿ ದಯೆಮಾಡಲಿರುವರು.

ಜಗತ್ಪ್ರಸಿದ್ಧ ದಾನಶೂರರಾದ ಲಾರ್ಡ್ ನ್ಯೂಫೀಲ್ಡ್‌ರವರು, ಆಕ್ಸ್‌ಫರ್ಡ್ ವಿದ್ಯಾಲಯದ ವೈದ್ಯಕೀಯ ಪರಿಶೋಧನಾಲಯಕ್ಕೆ, ತಾವು ಈ ಮೊದಲು ಕೊಟ್ಟ ೧,೫೫೦,೦೦೦ ಪೌಂಡುಗಳೂ ಅಲ್ಲದೆ ಪುನಃ ೭೫,೦೦೦ ಪೌಂಡುಗಳ ದಾನವನ್ನೂ ಮಾಡಿರುವರು. ಒಟ್ಟಿಗೆ ಇವರು ಇದುವರೆಗೆ ಹಲವು ಆಸ್ಪತ್ರೆಗಳಿಗೂ, ಇತರ ಧರ್ಮಕಾರ್ಯಗಳಿಗೂ ಮಾಡಿರುವ ದಾನದ ಮೊತ್ತ ಸುಮಾರು ೩೧೫,೦೦೦ ಪೌಂಡುಗಳೆಂದು ತಿಳಿದುಬರುತ್ತಿದೆ.

ಖಾಸಗೀ ವ್ಯಕ್ತಿಗಳು ಯಾರೂ ಪರದೇಶಗಳಿಗೆ ಬಂಗಾರ ಕಳುಹಿಸಕೂಡದೆಂದು ಅಮೇರಿಕದಲ್ಲಿ ಕಾನೂನಾಗಿದೆ.

ಕರ್ನಾಟಕ

ಮಂಜರಾಬಾದು ತಾಲೂಕು ಬೈಕೆರಿ ಗ್ರಾಮದ ಪ್ಲೈಮರಿ ಸ್ಕೂಲಿನ ಪ್ರಥಮ ವಾರ್ಷಿಕೋತ್ಸವವು ಇದೇ ಮೂಹೆ ೧೮ನೇ ತಾರೀಕು ಬುಧವಾರ, ಜನ್ನಾಪುರದ ಮಠಾಧ್ಯಕ್ಷರು, ಶ್ರೀ ಬಸವಲಿಂಗ ಸ್ವಾಮಿಗಳ ಅಧ್ಯಕ್ಷತೆಯಲ್ಲಿ ನಡೆಸಲ್ಪಟ್ಟಿತು. ಮಾಸ್ತರು ಎಚ್. ಪರಮೇಶ್ವರಯ್ಯನವರಿಂದ ಸ್ಕೂಲ್ ವರದಿ ವಾಚನವೂ, ಮೈಸೂರು ರಂಗಯ್ಯನವರ ಸಂಗೀತವೂ ನಡೆಯಿತು. ಮಾ॥ ರಾ॥ ಗಳಾದ ಬಿ. ಪಿ. ಪುಟ್ಟಮಲ್ಲಪ್ಪನವರೂ, ಲಿಂಗಯ್ಯನವರೂ, ಹುಚ್ಚೇ ಗೌಡರೂ, ವೀರಪ್ಪನವರೂ ಸ್ವಾರಸ್ಯವಾಗಿ ಭಾಷಣ ಮಾಡಿದರು. ಮಾ॥ ರಾ॥ ಪಟೇಲರು ಪುಟ್ಟ ಶಿದ್ದಪ್ಪನವರೂ ಸರಕಾರದವರು ಈ ಗ್ರಾಮಕ್ಕೆ ಸ್ಕೂಲನ್ನು ದಯಪಾಲಿಸಿದ್ದಕ್ಕಾಗಿ ವಂದಿಸಿದರು. ಮಾ॥ ರಾ॥ ಹುಚ್ಚೇ ಗೌಡರು ಅಲ್ಲಿ ನೆರೆದಿದ್ದ ಬಾಲಕರಿಗೆಲ್ಲಾ ತಮ್ಮ ಸ್ವಂತ ಖರ್ಚಿನಿಂದ ಬಹುಮಾನ ಹಂಚಿದರು. ಅಧ್ಯಕ್ಷರ ಭಾಷಣ, ಮತ್ತು ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆ ಬೆಳೆದು ಸಭೆಯು ಬರಖಾಸ್ತಾಯಿತು.

ಬುದ್ಧಿ ತಿಳಿಯದ ಅಪ್ರಾಯಸ್ಥ ಹೆಣ್ಣು ಮಕ್ಕಳನ್ನು ಬಸವಿಯರನ್ನಾಗಿ ಮಾಡುವ ಈ ಪದ್ಧತಿ ಶಾಸನವಿರುದ್ಧವೆಂದು ಜನತೆಗೆ ತಿಳಿಸುವಂತೆ ಮೈಸೂರು ಸರಕಾರವು ತನ್ನು ಯಾವತ್ತು ಡಿ॥ ಕವಿಶಸನರರಿಗೆ ಅಪ್ಪಣೆ ಮಾಡಿದೆ.

ಮೈಸೂರಿನ ಸೀನಿಯರ್ ಸರ್ಜನರೂ, ಅರಮನೆಯ ವೈದ್ಯರೂ ಆಗಿದ್ದ ಕರ್ನಲ್ ಮೆಕ್ಕೆಗಾನನ್ ರವರು ತಮ್ಮ ೯೩ನೇ ವರ್ಷ ಪ್ರಾಯದಲ್ಲಿ ಮೈಸೂರಲ್ಲಿ ಧಿವಂಗತರಾದರು. ಇವರ ಸನ್ಮಾನಕ್ಕಾಗಿ, ಅರಮನೆಯ ಕಾರ್ಯಾಲಯಕ್ಕೆ ಒಂದು ದಿನ ರಜೆ ಇದ್ದಿತು.

ಕೋಲಾರದಲ್ಲಿ ನೆರೆದುಬಂದ ಮೈಸೂರು ಸಂಸ್ಥಾನದ ೧೧ನೆಯ ಮಹಿಳೆಯರ ಮಹಾಸಭೆಯಲ್ಲಿ ಅಧ್ಯಕ್ಷಸ್ಥಾನವನ್ನು ನಿರ್ವಹಿಸಿದ್ದ ಲೇಡೀ ವಿಜಿಯಾ ಇಸ್ಮಾಯೇಲ್‌ರವರು, ಮಹಿಳೆಯರ ಸಂಘಗಳು ಹಳ್ಳಿಗಳಲ್ಲಿಯೂ ತಮ್ಮ ಚಟುವಟಿಕೆಗಳನ್ನು ಹಬ್ಬಿಸಬೇಕೆಂದರು.

ಮೈಸೂರಿನ ಶ್ರೀಮನ್ಮಹಾರಾಜರು, ಮೈಸೂರು ಅರಮನೆಯ ದರ್ಬಾರ್ ಭಕ್ಷಿಗಳಾಗಿ, ಅಲ್ಲಿನ ಶ್ರೀಮಾನ್ ಎಚ್. ಎಲ್. ದೇವರಾಜೇ ಅರಸು ಗಳನ್ನು ನೇಮಕ ಮಾಡಿರುತ್ತಾರೆ.

ಶ್ರೀಮನ್ಮಹಾರಾಜರವರು ಬೆಂಗಳೂರಲ್ಲಿ ಅರೋಗ್ಯಭಾಗ್ಯವನ್ನು ಪಡೆಯುತ್ತಲಿದ್ದಾರೆ.

(ಎನೇ ಪುಟದಿಂದ)

ನಮ್ಮ ಜಿಲ್ಲಾ ಆರ್ಥಿಕ ವಿಚಾರದ ಸಂಘಜ ಮಿಟಿಂಗು ಬರುವ ದಶಂಬರ ತಾ. ೧೨ಕ್ಕೆ ಕಲೆಕ್ಟರರ ಆಫೀಸಿನಲ್ಲಿ ಜರುಗಿ, ಆದರಲ್ಲಿ ನಮ್ಮ ಜಿಲ್ಲೆಯ ಉನ್ನತಿಗೆ ಸಂಬಂಧಿಸಿದ ಹಲವು ಪ್ರಾಮುಖ್ಯ ಪ್ರಶ್ನೆಗಳು ಚರ್ಚಿಸಲ್ಪಡುವುವೆಂದು ತಿಳಿದುಬರುತ್ತಿದೆ.

ಮದ್ರಾಸಿನಲ್ಲಿ, ಜೈನ್ನಾ ಬಜಾರ್, ಸಾಹುಕಾರ ಪೇಟೆ, ಇಲ್ಲಿ ನಮ್ಮ ಊರಿನವರಾದ ಶ್ರೀ. ಕೆ. ಗೋಪಾಲಾಚಾರ್ಯರೇ ಮಾಲಕರಾಗಿ, 'ಮೈಸೂರು ಕೇಫ್' ಎಂಬ ನೂತನ ಭವ್ಯ ಉಪಹಾರಗೃಹವನ್ನು ತೆರೆಯುವರು. ಇದರ ಆರಂಭೋತ್ಸವವು ಇದೇ ನವಂಬರ ತಾ. ೨೯ನೇ ಆದಿತ್ಯವಾರ ಸಂಜೆ ಗಂಜಿ ೭ಕ್ಕೆ ಸರಿಯಾಗಿ, ಮದ್ರಾಸ್ ಹ್ಯಾ ಕೋರ್ಟಿನ ನಿವೃತ್ತ ಜಸ್ಟೀಸ್‌ರಾದ ಶ್ರೀ. ರಮೇಶಂ ಇವರಿಂದ ಜರುಗಿಸಲ್ಪಡುವುದು. ಶ್ರೀ. ಗೋಪಾಲಾಚಾರ್ಯರವರು, ಮೈಸೂರಲ್ಲಿನ ತಮ್ಮ ಭೋಜನ ಉಪಹಾರ ಮಂದಿರಗಳ ಸುವ್ಯವಸ್ಥೆಯಿಂದ, ಮೊದಲೇ ಪ್ರಸಿದ್ಧರಾದವರು. ಅವರ ಇಂದಿನ ಮದ್ರಾಸಿನ ಈ ನೂತನ ಭವನವೂ ಹೀಗೇ ಜನಾದರಕ್ಕೆ ಪಾತ್ರವಾಗಿ, ಆಚಾರ್ಯರ ಈ ಶ್ರಮ-ಸಾಹಸವು ಸರ್ವ ಪ್ರಕಾರದಿಂದಲೂ ಯಶಸ್ವಿಯಾಗಲೆಂದು 'ಕಂಠೀರವ'ನ ಹಾರೈಕೆ.

ಇಲ್ಲಿಗೆ ಈಗ ತಾನೇ ಬಂದಿರುವ ಮೈಸೂರು ಪ್ರಾಂತದ 'ಶ್ರೀ ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಲಿ'ಯವರು, ನಿನ್ನೆ ರಾತ್ರಿ ಇಲ್ಲಿನ ಲ್ಯಾನ್ಸ್ ಮೈದಾನಿನಲ್ಲಿ ನೂತನವಾಗಿ ಕಟ್ಟಿಸಿರುವ ಭವ್ಯ ನಾಟಕ ಮಂದಿರದಲ್ಲಿ 'ಭೂಕೈಲಾಸ'ವೆಂಬ ಅಮೋಘ ನಾಟಕವನ್ನಾಡಿದರು. ಜನಸ್ತೋಮವು ಥಿಯೇಟರಿನಲ್ಲಿ ಕಿಕ್ಕಿರಿದು ತುಂಬಿದ್ದು, ಮಂಗಳೂರವರು ಇದುವರೆಗೂ ಕಾಣದಿದ್ದ, ವಿದ್ಯುದ್ದೀಪಗಳ ಜೋಡಣೆಯ ಅತ್ಯದ್ಭುತ ಸೀನರಿಗಳನ್ನು ಕಣ್ಣಾರೆ ಕಂಡು ಬೆರಗಾಗಿ ತುಂಬ ಸಂತೋಷಪರಿತರಾದರು. ಕನ್ನಡ ನಾಡಿನವರೆದರೂ, ಆ ನಾಡಿನ ಹೊರಗೂ ತಮ್ಮ ಕಲಾಪ್ರಭಾವದಿಂದಲೂ, ಸಿನೆರಿಗಳ ವೈಖರಿಯಿಂದಲೂ ಕೀರ್ತಿಯನ್ನು ಪಡೆದಿರುವ ಈ ಮಂಡಲಿಯವರನ್ನು ಮಹಾಜನರು ಸರ್ವ ಪ್ರಕಾರದಿಂದಲೂ ಪ್ರೋತ್ಸಾಹಿಸಿ ಮನ್ನಿಸದಿರಲಾರರೆಂದು ನಂಬಲಾಗಿದೆ.

ಸಭಾಸದನಗಳಿಗೆ ಕಾಂಗ್ರೆಸಿನ ಕಡೆಯಿಂದ ಆರಿಸಲ್ಪಟ್ಟಿರ್ಪುದಾಗಿ ಪ್ರಕಟವಾಗಿರುವ ಆ ಉಮೇದ್ವಾರರ ಪಟ್ಟಿಯನ್ನು ಕೊನೆಯದಾಗಿ ಭಾವಿಸಬಾರದೆಂದೂ, ಆ ಪಟ್ಟಿ ಬೇಗನೆ ಪ್ರಕಟವಾಗುವುದೆಂದೂ, ಅದರಲ್ಲಿ ಕೆಲವು ಬದಲಾವಣೆಗಳಿರುವುವೆಂದೂ ಧಾರವಾಡದ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಪಾರ್ಲಿಮೆಂಟ್ ಬೋರ್ಡಿನ ಸೆಕ್ರಟರಿಗಳು ನಮಗೆ ತಿಳಿಸಿರುತ್ತಾರೆ.

MYSORE & COORG PRODUCE AGENCY,
MANGALORE. TELE: MYCO.

ಮೈಸೂರ್ ಎಂಡ್ ಕೂರ್ಗ್ ಪ್ರೊಡ್ಯೂಸ್ ಏಜನ್ಸಿ,
ಮಂಗಳೂರು
ಮಾಡುವ ನಮಸ್ಕಾರ.

ಹಾಲಿ ಮಂಗಳೂರು ಬಜಾರು ಧಾರಣೆ.

ಹಳೇ	ಕಾಫಿ	ರೂ. 130—0—0ರಿಂದ	ರೂ. 136—8—0
,,	ಕಪ್ಪು ,,	60—0—0ರಿಂದ	ರೂ. 70—0—0
,,	ಗ್ರೀನ್ ಪೀಬರಿ ,,	155—0—0ರಿಂದ	ರೂ. 162—8—0
,,	aa ,,	155—0—0ರಿಂದ	ರೂ. 165—0—0.

} ಕಳೆದ ವಾರದಿಂದ ಈ ವಾರದಲ್ಲು ಮಾರ್ಕೇಟು ಮುಂದಿಯಾಗಿದೆ.

ಯಾಲಕ್ಕಿ:	ಕೊಡಗು	ರೂ. 50ರಿಂದ	ರೂ. 54—0—0 ಗ್ರೀನ್
,,	,,	ರೂ. 46ರಿಂದ	ರೂ. 52—0—0 ಬಿಳಿ
,,	ಸಕ್ಲೇಶಪುರ	ರೂ. 48ರಿಂದ	ರೂ. 56—4—0

} ಕಳೆದ ವಾರದಂತೆ ಸ್ಪೆಡಿಯಿದೆ.

ಕಾಫಿಯ ಮಾರ್ಕೇಟು:—ಫೋರ್ವರ್ಡ್ ಸಾಟಿಯ ದರ ರೂ. 155ರ ತನಕ ಚೆರಿ ಕ್ಲೀನ್ ಕಾಫಿಗೂ ರೂ. 150ರ ತನಕ 5% ಹೋಲ್ ಕ್ರಾಪ್ ಕಾಫಿಗೂ ಧಾರಣೆ ನಡಿಯುತ್ತಲಿದೆ. ಕಳೆದ ವಾರದ ಫೋರ್ವರ್ಡುಗಳು ಪರ ಬಂದ್ರದ ಕೆಲವೇ ಡಿವಾಂಡ್ ಬಂದೂ, ಮತ್ತು ಇಲ್ಲಿಯವರ ಕುತೂಹಲದಿಂದಲೂ, ತೇಜಿಯಾಗಿ ನಡದಿರುವುದಾಗಿಯೂ, ಈ ರೀತಿ ಯೆಲ್ಲರೂ ಮುಂದೆ ಕೂಡಾ ಕುತೂಹಲದಿಂದ ವ್ಯಾಪಾರಗೈಯ್ಯುವುದಾದರೆ ಮುಂದೆ.....ತೇಜಿ ಬರುವುದಾಗಿ ಹಲವರ ಅಭಿಪ್ರಾಯವಿದೆ. ಈ ವಾರದಲ್ಲಿ ಪರ ಬಂದ್ರದ ಡಿವಾಂಡ್ ಮುಂದಿಯಾಗದೆ ಸ್ಪೆಡಿಯಾಗಿ ಬರುತ್ತಲಿದೆಯಾಗಿ ಹೇಳಬಹ್ಮುದು. ಅಂತೂ ಮುಂದಿನ ಸ್ಥಭಾವ ತೇಜಿ ಕಾಣುತ್ತೆ. ಪ್ಲೆಂಟೇಶನ್ ಕಾಫಿಗೆ ದರ ರೂ. 33/8/-ರಲ್ಲಿ ಧಾರಣೆ ನಡಿಯುತ್ತೆ. ಮುಂದಿನ ತೇಜಿ ಮುಂದಿ ಹಿಂದಿನಿಂದ.

ಎಲ್ಲಾ ಪ್ಲೆಂಟರುಗಳು ಮತ್ತು ಸಾಹುಕಾರರಲ್ಲಿ ವಿಜ್ಞಾಪನೆ:—ಪೂರ್ಣ ಅಭಿವಾನವಿಟ್ಟು ಮಹಲು ರವಾನಿಸಿಕೊಡಬೇಕಾಗಿಯೂ, ಬಂದ ಮಹಲಿಗೆ ಅಪೇಕ್ಷೆ ಪ್ರಕಾರ ಇತ್ತಟ್ಟಿನವರ ಸ್ನೇಹಾಚಾರದ ಯಾವತ್ತು ಅನುಕೂಲತೆಯನ್ನೂ ಒದಗಿಸಿಕೊಟ್ಟು ಬಜಾರುಧಾರಣೆಯಲ್ಲಿ ಅದಷ್ಟು ಚಾಕಚಕ್ಯತೆಯಿಂದ ವಿಕ್ರಿತಪಡಿಸಿ ಕೊಡುತ್ತೇನೆ.

ಇಂತಿ ನಮಸ್ಕಾರ.

BANKER
SHA DHANJI BHAGAWAN DAS.

N. SUBBA RAO,
Mysore & Coorg Produce Agency,
MANGALORE.

ಪಂಚಮ ಜಾರ್ಜರ ಸ್ಮಾರಕನಿಧಿಗೆ ಧನಸಹಾಯವಿತ್ತವರ ಪಟ್ಟಿ.

(ಮುಂದುವರಿದುದು)

ರೂಪಾಯಿ ೧ರಂತೆ ಕೊಟ್ಟವರು.

ಮ. ರಾ. ರಾ.ಗಳಾದ ಪರಂಕಿ ಪಠೇಲ ಸುಬ್ರಾಯ ಅಧಿಕಾರಿ, ಕೊರಗ ಬೆಲ್ಚಾಡ, ಐ ವ ಕೊ ಕ್ಲು; ಸಂಕರ ಗೌಡ, ಲಿಂಗಪ್ಪ ಗೌಡ, ಮೊಂತಿ ಹೆಂಗ್ಸು, ತಿಮ್ಮಪ್ಪ ಗೌಡ, ವೀರಪ್ಪ ಗೌಡ, ಮೈಲ ಗೌಡ, ಚನ್ನ ಗೌಡ, ಚೋಮ ಗೌಡ, ಚನ್ನಣ್ಣ ಗೌಡ, ಮುಂಜಣ್ಣ ಗೌಡ, ರಂಬುಲ ಬೆಟ್ಟು ಮೂಲೆ ಜೋರ, ಕಡ್ತಿ ಕುಮೇರು ಜೋಗಿ ಗೌಡ, ಕೆ. ವ್ಯಾಸ ರಾವ್, ಸುಬ್ರಮಣ್ಯ; ಕೆ. ಲಕ್ಷ್ಮಿನಾರಾಯಣಾಚಾರ್, ಸುಬ್ರಮಣ್ಯ; ಸುಬ್ಬಣ್ಣ ಗೌಡ, ನಾಲ್ಮೂರು; ಧಾರ್ಣಪ್ಪ ಸೆಟ್ಟಿ, ಬಂಗಾಡಿ; ದೇವರಾಜ ಬಲ್ಲಾಳ, ಬಂಗಾಡಿ; ಜೋರ ಗೌಡ, ಬಂಗಾಡಿ; ಅಹ್ಮದ್ ಕೋಯ ಬ್ಯಾರಿ, ಕುಂಞಣ್ಣ ಗೌಡ, ಎಣ್ಮೂರು; ಕುಕ್ಕಪ್ಪ ಪೂಜಾರಿ, ಎಡಮಂಗಲ; ಸಂಕಪ್ಪ ಪೂಜಾರಿ, ಎಡಮಂಗಲ; ಚೆನ್ನಪ್ಪ ಪೂಜಾರಿ, ಎಡಮಂಗಲ; ಕೋಚ ಪೂಜಾರಿ, ಎಡಮಂಗಲ; ಐತ ಬೆಲ್ಚಡ, ಜೋನ್ ಸಿಕೇರ, ಲೈಲ; ಅನಾಜೆ ಅಮ್ಮು ರೈ, ನಿಡ್ಪಳ್ಳಿ; ಕೃಷ್ಣ ಸೆಟ್ಟಿ, ನಿಡ್ಪಳ್ಳಿ; ವಾಸಪ್ಪ ರೈ, ಶೇಷಮ್ಮ ಯಾನೆ ಪದ್ಮಕ್ಕೆ, ಗೋಪಾಲಕೃಷ್ಣರಾವ್, ನಿಡ್ಪಳ್ಳಿ; ಎ. ಪೂವಪ್ಪ ಗೌಡ, ಶಿಬಾಜೆ; ದೇರೆ ಪೂಜಾರಿ, ನಿಡ್ಪಳ್ಳಿ, ಜೆ. ಡಿ. ಸಿಲ್ವ, ನೆಲ್ಲಿಕಾರ್; ಸರ್ವೋತ್ತಮ ಭಟ್ಟ, ದುರ್ಗ; ಅನಂತ ಭಟ್, ದುರ್ಗ; ಕುಸುಮಾಜಿ, ದುರ್ಗ; ಕಿನ್ನಿ ಯಾನೆ ಕೋಟಿ ಪಡಿವಾಳ, ನಾಲ್ಮೂರು; ಬೊಗ್ರ ಯಾನೆ ವೇನ ಪೂಜಾರಿ, ನಾಲ್ಮೂರು; ರಾಜು ಅಜ್ರಿ, ಕೊಕ್ಕಾಡಿ; ಬೆಂಗಾಯಿಲ್ ಅಂಬು ನಾಯರ್, ಕೂಕಲ ಅಂಬು ನಾಯರ್, ಶಂಕರ, ಕನಕಪಿಲ; ಸಿ. ಕಣ್ಣನ್ ನಾಯರ್, ಸಿ. ಅಂಬು ನಾಯರ್, ಗೋವಿಂದ ಸೆಟ್ಟಿ, ಕುಂತಮಾರು ಕೃಷ್ಣ, ಕಟ್ಟೆ ಗೋವಿಂದಯ್ಯ, ಕೊಲ್ಲಮೊಗರು; ಸೋಮಯ್ಯ ಆಚಾರಿ, ಇಂದಬೆಟ್ಟು, ವೀರಣ್ಣ ಗೌಡ, ಬಲ್ಪು, ಈಕ್ಯಯ್ಯ ಗೌಡ, ಸುಬ್ರಾಯ ಗೌಡ, ಕೃಷ್ಣ ಅಂಬು ನಾಯರ್, ಕೊರಗಪ್ಪ ಗೌಡ, ವಿ. ಸೋಮಪ್ಪ ಗೌಡ, ಪಿ. ದೇವಯ್ಯ ಗೌಡ.

(ಮುಂದರಿಯುವುದು)

'ಅಪ್ಪನ ಅಗಲಿಕೆ.'

॥ ಭಾಮಿನಿ ಷಟ್ಪದಿ ॥

ಎಳವೆಯೊಳೆ ಪೆತ್ತಬ್ಬೆ ಕಾಯವ-
ನುಳಿದು ಸಗ್ಗವನಡೆದಾ ಕಳಿ-
ವಳವು ತೀರದ ಮುನ್ನಮೇ ನೀನುಳಿದು
ಮಕ್ಕಳನು ॥

ಇಳೆಯೊಳಿರಿ ತಬ್ಬಲಿಗಳಾಗೆಂ-
ದುಳಿಸಿ ಪೋದೆಯ ಜನಕ? ಬನ್ನಿರಿ
ಬಳಿಗೆ ಯೆಂದಾರೆಮ್ಮ ಕರೆದಪರಾರು
ನಮಗಿಹರು? ॥ ೧ ॥

ಬಡತನದ ಕಡುಬನ್ನದೊಳೆ ನೀ-
ನೊಡಲವಿಡಿದೊಡದೇನು? ಒಡತನ
ದೆಡರಿಗಂಜದೆ ಮಾನದಿಂ ದಿನ್ನಹರಣೆಯಂ
ಗೈದು ॥

ಸಡಗರದೆ ನೀನೆನ್ನನೋದಿಸಿ
ಕಡೆಗೆ ಯೆನಗಾಣತಿಯನೀಯದೆ
ಜಡಶರೀರಮನುಳಿದು ಸಗ್ಗಕೆ ತೆರಳಿದೆಯ?
ಜನಕ! ॥ ೨ ॥

ತೆರಳೆ ನಿಜಸತಿ ಸಗ್ಗಕೀ ಜಗ
ಬರಿಯದಾಯಿತೆ ನಿನಗೆ? ತನುಜಾ-
ತರನು ಮುದಿಪ ಮಮತೆಯಳಿಯಿತೆ ಮೇಣು
ತರೆಯೊಳಗೆ? ॥

ಅರೆಗಳಿಗೆಯಗಲಿರದ ನಿಜ ಸತಿ
ವಿರಹದಿಂ ಪರಿತಪಿಸುವಳು ತಾ-
ನೀಲು ಜಗದೊಳಗೆಂದು ನೀನವಸರಿಸಿದೆಯ?
ಜನಕ! ॥ ೩ ॥

ಕಂಗಳಲಿ ಕಂಬನಿಯ ಸುರಿಸುವ
ತಂಗಿ ಲಲಿತೆಗೆ ಮುದುವೆ ಮುಂಟಪ-
ದಂಗಳದಿ ನಾನಿನಿಯನೊಡವೆರಸುತ್ತ
ಧಾರೆಯನು ॥

ಕಂಗೊಳಿಸುವಂತೆರೆಯುತಿಹ ಸ-
ನ್ಮಂಗಳವ ನೀನೆನ್ನ ಜನನಿಯ
ಸಂಗಡದೊಳವಲೋಕಿಸಿದ ಕನಸೀಗ
ನೆನಸಾಯ್ತೇ! ॥ ೪ ॥

ಎಲ್ಲವನು ನೀನಿತ್ತೆ ಶ್ರೀವರ
ಫುಲ್ಲಲೋಚನನಮಲದಯದಿಂ,
ಸಲ್ಲಲಿತ ಭವನಾದಿ ಹಿತ್ತಲು ತೆಂಗು
ಕಾಂಗುಗಳ. ॥

ಎಲ್ಲವಿದ್ದೇನಪ್ಪ! ಸಕಲವು
ಸೊಲ್ಲಳಿದು ಬರಿದಾಯ್ತಕಟ! ನೀ-
ನಿಲ್ಲದಿರೆ ನಿನ್ನಾತ್ಮಕೊದಗಲಿ ಶಾಂತಿಯನ
ವರತ! ॥ ೫ ॥

ಚಿತ್ತಾರಿ ಪದ್ಮನಾಭಯ್ಯ.

ಸ್ವೀಕಾರ.

Indian Art Calendar 1937—A Production of the B. M. Press, Mangalore; The South India Co-operative Insurance Society, Ltd.; The World-Wide Assurance Ltd., Bombay ಈ ಸಂಸ್ಥೆಗಳು ಕಳುಹಿಸಿಕೊಟ್ಟಿರುವ ಕ್ಯಾಲೆಂಡರುಗಳನ್ನು ಆತ್ಯಾದರದಿಂದ ಸ್ವೀಕರಿಸಿರುತ್ತೇವೆ. ಇವುಗಳಲ್ಲಿ ಮುಂಗಳೂರು ಬಿ.. ಎಂ. ಪ್ರೆಸ್ಸಿನವರ ಇಂಡಿಯನ್ ಆರ್ಟ್ ಕ್ಯಾಲೆಂಡರ್ರು ವಿ॥ ಈ. ಎ. ಕ್ರೌಸ್ ದೊರೆಗಳವರಿಂದ ತೆಗೆಯಲ್ಪಟ್ಟಿರುವ ಅನೇಕ ದೃಶ್ಯಗಳನ್ನೊಳಗೊಂಡಿದ್ದು ಅದರ ಕ್ರಯಕ್ಕದು ಬಹಳ ಅಗ್ಗವಾಗಿರುತ್ತದೆ. ಆದುದರಿಂದ ಈ ಕ್ಯಾಲೆಂಡರು ಸರ್ವರಿಂದಲೂ ಕೊಂಡುಕೊಳ್ಳಲ್ಪಡುವದೆಂದು ಭಾವಿಸುತ್ತೇವೆ.

ಕೆನರಾ ಬ್ಯಾಂಕ್, ಲಿಮಿಟೆಡ್.

ಈ ಸಂಸ್ಥೆಯವರು ನಿರಖು ಠೇವಣಾತಿಗಳ ಮೇಲಣ ಬಡ್ಡಿಯನ್ನು ಒಂದು ವರ್ಷದ ವಾಯಿದೆಯವುಗಳಿಗೆ ಶೇಕಡಾ ೩॥ಗೂ, ಎರಡು ವರ್ಷಗಳ ವಾಯಿದೆಯವುಗಳಿಗೆ ಶೇಕಡಾ ೪ಕ್ಕೂ ಇಳಿಸಿರುವರು. ಇದಕ್ಕೆ ಸರಿಯಾಗಿ ಮುಂಗಡಗಳ ಮೇಲಣ ಬಡ್ಡಿಯನ್ನೂ ಇಳಿಸಬಹುದಾಗಿ ನಿರೀಕ್ಷೆಯಿದೆ. ವ್ಯಾಪಾರಿಗಳಿಗೆ ಇದು ತುಂಬಾ ಪ್ರಯೋಜನಕಾರಿಯಾಗಿದ್ದು ವ್ಯಾಪಾರಿದೃಷ್ಟಿಯಿಂದ ಇದು ತುಂಬಾ ಸೌಕರ್ಯದಾಯಕವಾಗಿದೆ.

For all kinds of
NEAT & ACCURATE PRINTING
please consult
The
Saraswathi Printing Works, Ltd.,
MANGALORE, S. K.



ಈ ಎಲ್ಲಾ ನೋವುಗಳಿಂದ ನರಳುವವರಿಗೆ ಈ ಔಷಧವು ಪೂರ್ವದ ಅನುಭವದಿಂದ ದಿಟವಾಗಿಯೂ ಖಂಡಿತ ಗುಣಕಾರಿಯೆಂದು ಪ್ರತ್ಯೇಕವಾಗಿ ಶಿಫಾರಸು ಮಾಡಲ್ಪಟ್ಟಿದೆ.

ಇತರ ಎಲ್ಲಾ ಒಳಗಣ ಮತ್ತು ಬಾಹ್ಯ ಔಷಧಗಳು ನಿಷ್ಪ್ರಯೋಜಕವಾದಲ್ಲಿ, ಈ ಮಾತ್ರೆಗಳು ಬಾರಿಬಾರಿಗೂ ಶಮನವನ್ನುಂಟುಮಾಡಿರುತ್ತವೆ. ಯಾವ ರೀತಿಯಲ್ಲಿಯೂ ಅವುಗಳ ಗುಣವು ಬಾಧಕಕರವಾಗಿರದೆ, ಸಾಮಾನ್ಯ ಆರೋಗ್ಯಕ್ಕೆ ಯಾವಾಗಲೂ ಕಳೆಗೊಳಿಸುವ ಔಷಧವಾಗಿರುತ್ತದೆ.

Madras Stockists:—Messrs. DADHA & CO.,
52, Nainiappa Naick Street, Madars.

ದಿ

ಗಾರ್ಡಿಯನ್ ಒಫ್ ಇಂಡಿಯಾ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,

ಮುಖ್ಯ ಆಫೀಸು:—ಪೋಸ್ಟ ಬೊಕ್ಸ್ ೮೯, ಮದ್ರಾಸು.

ತೀರಾ ದೇಶೀಯ ಬಂಡವಾಳ

ತೀರಾ ದೇಶೀಯ ಆಡಳಿತೆ

ತೀರ್ಥಾ ಭದ್ರಪಾದ ಕಾರ್ಯಕ್ರಮ

ತೀರಾ ಕಡಿಮೆ ವಿಮೆಯ ದರಗಳು. — ಉದಾರವಾದ ಶರ್ತಗಳು. — ನ್ಯಾಯನೀತಿಸಮ್ಮತವಾದ ವ್ಯವಹಾರ.

ತೀರಾ ಹೊಸ ಹೊಸ ನಮೂನೆಯ ಏರ್ಪಾಡುಗಳು.—ಎಲ್ಲಾ ಬಗೆಯ ವಿವಿಧ ಸ್ಥಿತಿಯ ಜನರಿಗೆ ಸರ್ವಾನುಕೂಲ.—ಅತ್ಯಾಕರ್ಷಕವಾದ ಶರ್ತಗಳು.

ಖಂಡಿತವಾದ ಭದ್ರತೆ.

ಸಾವು ಅನಿಶ್ಚಿತ; ಸಂಪಾದನೆ ಅನಿಶ್ಚಿತ.

ಇವುಗಳ ಬಾಧಕಕ್ಕೆ ಜೀವವಿಮೆಯೇ ಉತ್ತಮ ಪರಿಹಾರ.

ಒಮ್ಮೆ ನಮ್ಮಲ್ಲಿ ವಿಮೆ ಕೊಂಡವರು ನಿರಾಶರಾಗಲಾರರು.

ಸೂಚನೆ:—ನಮ್ಮ ಎಲ್ಲಾ ಪಾಲಿಸಿಹೋಲ್ಡರರೂ, ಏಜಂಟರೂ ಇನ್ನು ಮುಂದೆ ತಮ್ಮ ವ್ಯವಹಾರವನ್ನು ದಿ ಬ್ರಾಂಚ್ ಸೆಕ್ರೆಟರಿ, ದಿ ಗಾರ್ಡಿಯನ್ ಒಫ್ ಇಂಡಿಯಾ ಇನ್ಶೂರೆನ್ಸ್ ಕೋ., ಲಿಮಿಟೆಡ್, ಮಂಗಳೂರು ಶಾಖೆ, ಇವರೊಡನೆ ಬೆಳಿಸಬೇಕಾಗಿ ವಿನಂತಿ.

ವಿಶೇಷ ಮಾಹಿತಿಗಳಿಗೆ ಇವರಿಗೆ ಬರೆಯಿರಿ:—

E. A. Pais, B. Sc.,
BRANCH SECRETARY,
THE GUARDIAN OF INDIA INSURANCE CO., LIMITED,
MANGALORE BRANCH.

(Continued from page 13)

wers and a convoy of 550 elephants laden with treasure in gold, diamonds and precious stones valued at more than 100 millions sterling and also the state insignia and the celebrated jewelled throne.

Deserted by their king and the commandant of their troops the people of the capital made no effort to defend themselves and the very next day the city was looted by hordes of wandering gipsies-Lambadis and the like. On the third day the Victorious Muhammadans arrived and for five months "with fire and sword, with crowbars and axes", to quote Mr. Sewell "they carried on day after day their work of destruction. Never perhaps in the history of the world has such a havoc been wrought so suddenly, on so splendid a city; teeming with a wealthy and industrious population in the full plenitude of prosperity one day, and on the next seized, pillaged, and reduced to ruins, amid scenes of savage massacre and horrors beggaring description".

Two years later, Caesaro Federici an Italian traveller, visited the place and wrote of it that "the houses stand still but empty, and there is dwelling in them nothing, as is reported but Tygres and other wild beasts'. Thus Vijayanagar as a city was blotted out, and has never since been inhabited by any but the few cultivators who till the fields which wind about among its deserted streets and temples.

On the fall of the capital, anarchy followed throughout the dominions of the Empire. Sadasiva and Tirumala kept up a certain state at Penukonda, but the nobles for the most part threw off their allegiance to them and proclaimed themselves independent.

In 1568, Tirumala murdered Sadasiva and seized the throne for himself. A few years later he was forced to fly to Chandragiri in the Chittoor District, and it was there that one of his descendents in 1639 granted to Francis Day the land on which Fort St. George in Madras now stands.

The Sexcentenany Celebrations of the Vijayanagar Empire will be held at HUMPI from the 25th to 27th December 1936, and during the Xmas and New Year Holidays, the M. & S. M. Railway special travel facilities will be available for unrestricted travel throughout its system of over 3000 miles by all trains and this should prove an unusual opportunity for the intending visitors to see the ruins of one of the most famous cities of history.

WANTED

Canvassers on Rs. 30/- for South and North Canara and Malabar for World-Wide Assurance Ltd., to push on Daily Collection Scheme with FREE Clocks.

Persons interested in Fire, Marine and Motor Insurance may be pleased to consult.

The Pioneer General Insurance & Mercantile Agencies of West Coast,
Car Street, MANGALORE.

ನಮ್ಮ ಪತ್ರಿಕೆಗಳು

(ಬಿ. ಶಂಕರ ಭಟ್ಟ)

ಕರ್ನಾಟಕದಲ್ಲಿ ಪತ್ರಿಕಾವ್ಯವಸಾಯವು ಆರಂಭವಾಗಿ ಇಂದಿಗೆ ಸುಮಾರು ೯೫ ವರ್ಷಗಳಾದುವು. ಇಷ್ಟರೊಳಗೆ ಎಷ್ಟೋ ಪತ್ರಿಕೆಗಳು ಹುಟ್ಟಿ ಬೆಳೆದು ಸತ್ತು ಹೋದುವು. ಕೆಲವು ಇನ್ನೂ ತಮ್ಮ ಸೇವೆಯನ್ನು ಸಲ್ಲಿಸುತ್ತಿವೆ. ಪತ್ರಿಕಾಪ್ರಪಂಚದಲ್ಲಿ ನಮ್ಮ ಜಿಲ್ಲೆಯು ಕೂಡ ಏನೂ ಹಿಂದೆ ಬಿದ್ದಿಲ್ಲ. ಸ್ವದೇಶಾಭಿಮಾನಿ, ಕಂಠೀರವ, ರಾಷ್ಟ್ರಬಂಧು ಮೊದಲಾದ ವಾರಪತ್ರಿಕೆಗಳು ಕೀರ್ತಿ ಪಡೆದಿವೆ. ನಮ್ಮಲ್ಲಿ ಉತ್ತಮೋತ್ತಮ ಮಾಸಪತ್ರಿಕೆಗಳಿದ್ದರೂ ಹೆಚ್ಚು ಕಾಲ ಬಾಳಲಿಲ್ಲ. ಬಾಸೆಲ್ ಮಿಶನಿನವರು 'ಕರ್ಣಾಟಕ ಪತ್ರಿಕಾವ್ಯವಸಾಯಕ್ಕೆ ಮೊತ್ತಮೊದಲು ಆರಂಭಿಸಿದವರು. ೧೮೪೩ರಲ್ಲಿ ಮತಪ್ರಚಾರಕ್ಕಾಗಿ ಸಭಾಪತ್ರಿಕೆಯೆಂಬ ಮೊತ್ತಮೊದಲನೇ ಕನ್ನಡ ಪತ್ರಿಕೆಯನ್ನು ಹೊರಡಿಸಿದರು. ಅನಂತರವೇ ಕರ್ಣಾಟಕದಲ್ಲಿ ಪತ್ರಿಕಾವ್ಯವಸಾಯಕ್ಕಾರಂಭ. ಅಂದಿನಿಂದ ಇಂದು ವರೆಗೆ ನಮ್ಮ ಜಿಲ್ಲೆಯಲ್ಲಿ ಸುಮಾರು ೪೦ ಪತ್ರಿಕೆಗಳು ಆಗಿ ಹೋದುವು. ಅವುಗಳ ಸಾಮಾನ್ಯ ಚರಿತ್ರೆಯೊಂದನ್ನು ಬರೆಯಲಾಗಿದೆ.

ಸುದರ್ಶನ.

ಉಡುಪಿಯ ಹಿಂದೂ ಪ್ರೆಸ್ಸಿನಿಂದ ಪ್ರಕಟವಾಗುತ್ತಿದ್ದ ಸುದರ್ಶನವೆಂಬ ಮಾಸಪತ್ರಿಕೆಯು ಸುಮಾರು ೧೮೮೫ರಲ್ಲಿ ಹೊರಟಂತೆ ತೋರುತ್ತದೆ. ಇದರ ಸಂಪಾದಕರಾರೆಂದು ಗೊತ್ತಿಲ್ಲ. ನನ್ನ ಹತ್ತಿರವಿರುವ ೧೮೮೫ನೇ ಫೆಬ್ರವರಿಯ ಎನೇ ಸಂಚಿಕೆಯ ೭ನೇ ಅಂಕದಲ್ಲಿ 'ಬ್ರಹ್ಮದೇಶ', 'ಕಚ್ಚಯ್ಯ, ಕುಚ್ಚಯ್ಯ, ಅಚ್ಚಯ್ಯ ಇವರ ಸಂವಾದ', 'ಹಿಂದೂದೇಶದ ಸಾಲ', 'ವಿವಿಧ ವಿಷಯ ಸಂಗ್ರಹ', 'ವಿಚಿತ್ರ ರತ್ನಾವಲಿ', 'ಪದ್ಮಮಾಲಿಕಾ' ಮೊದಲಾದ ವಿಷಯಗಳು ಬಂದಿವೆ. ಅಲ್ಲದೆ ಈಗಿನ ವಾರಪತ್ರಿಕೆಗಳಲ್ಲಿ ಬರುವಂತೆ ಸಾಮಾನ್ಯ ವರ್ತಮಾನಗಳು ಕೂಡ ಬರುತ್ತಿದ್ದುವು. ಕೊಲ್ಲೂರು ದೇವಸ್ಥಾನದ ಕಳವಿನ ವಿಷಯವಾದ ವರ್ತಮಾನವು ಈ ಪತ್ರಿಕೆಯಲ್ಲಿ ಬಂದಿದೆ. ದಕ್ಷಿಣ ಕನ್ನಡದಲ್ಲಿ ಹಿಂದೂ ಜನರು ಹೊರಡಿಸಿದ ಕನ್ನಡ ಪತ್ರಿಕೆಗಳಲ್ಲಿ ಸುದರ್ಶನವು ಮೊದಲನೆಯದು.

ಕೃಷ್ಣಸೂಕ್ತ.

ಶ್ರೀಮಾನ್ ಕಡೇಕಾರ್ ರಾಜಗೋಪಾಲ ಕೃಷ್ಣರಾಯರು ೧೯೦೬ರ ಸುಮಾರಿಗೆ ಉಡುಪಿಯಿಂದ ಕೃಷ್ಣಸೂಕ್ತಿಯನ್ನು ಹೊರಡಿಸಿ ಸುಮಾರು ೧೦ ವರ್ಷ ಕಾಲ ಅಖಂಡವಾಗಿ ನಡೆಸಿ ಅಖಿಲ ಕರ್ಣಾಟಕದಲ್ಲಿ ಆ ಕಾಲದಲ್ಲಿ ಸಾಹಿತ್ಯ ವಿಷಯಕವಾದ ಪತ್ರಿಕೆ ಇದೊಂದೇ ಎಂಬ ಕೀರ್ತಿಯನ್ನುಗಳಿಸಿದರು. ಕೃಷ್ಣಸೂಕ್ತಿಯಲ್ಲಿ ಆ ಕಾಲದ ಹೆಸರು ಎತ್ತಿದ ಬರೆಹಗಾರರಾದ ಆರ್. ಶ್ರೀನಿವಾಸ ರಾವ್, ರೊದ್ದ ಶ್ರೀನಿವಾಸ ರಾವ್, ಬಿ. ವೆಂಕಟಾಚಾರ್, ಗುಡಿಬಂಡೆ ಕೇಶವಯ್ಯ, ಎಂ. ಎನ್. ಗೋಪಾಲ ರಾವ್ ಮೊದಲಾದ ಅನೇಕ ಮಹನೀಯರ ಲೇಖಗಳು ಆಗಾಗ ಬರುತ್ತಿದ್ದುವು. ಶ್ರೀಮಾನ್ ಮಾಸ್ತಿಯವರ ವಿಮರ್ಶೆ ಎಂಬ ಪುಸ್ತಕದ ಮೊದಲನೆಯ ಲೇಖವು ಪ್ರಕಟವಾದುದು ಕೃಷ್ಣಸೂಕ್ತಿಯಲ್ಲಿ. ಈ ಪತ್ರಿಕೆಯಲ್ಲಿ ಕವಿತೆ, ಕತೆ, ಕಾದಂಬರಿ, ಪ್ರಬಂಧ ಮೊದಲಾದ ಹಲವು ಸಾಹಿತ್ಯಾಂಗಲೇಖಗಳು ಬರುತ್ತಿದ್ದುವು. ಕೃಷ್ಣಸೂಕ್ತಿಯ ಹಳೆ ಸಂಚಿಕೆಗಳು ಈಗಲೂ ಕೂಡ ಸಂಗ್ರಹಿಸಿ ಓದಲು ಅರ್ಹತೆಯುಳ್ಳವುಗಳು. ಕರ್ನಾಟಕ ಸಾಹಿತಿಗಳು ಕೃಷ್ಣಸೂಕ್ತಿಯನ್ನು ಎಂದೆಂದಿಗೂ ಮರೆಯಲಾರರು.

ಜೈನಬಂಧು.

೧೯೧೫ನೇ ಇಸವಿಯ ಜನವರಿಯಿಂದ ಸೂರಾಲ್ ಅರಮನೆಯ ನಾಭಿರಾಜಯ್ಯನವರು ಜೈನ ಬಂಧುವನ್ನು ಮಂಗಳೂರಿಂದ ಹೊರಡಿಸಿ ಸುಮಾರು ಎರಡು ವರ್ಷಗಳ ಕಾಲ ನಡೆಸಿದಂತೆ ತೋರುತ್ತದೆ. ಈ ಪತ್ರಿಕೆಯಲ್ಲಿ ಜೈನ ಧರ್ಮದ ವಿಷಯವಾದ ಲೇಖಗಳು ತುಂಬಾ ಬರುತ್ತಿದ್ದುವು. ಒಂದನೆಯ ಸಂಪುಟದ ೧೧ನೆಯ ಸಂಚಿಕೆಯಲ್ಲಿ ದಿವಂಗತ ಆರ್. ತಾತಾಚಾರ್ಯ, ಎಮ್. ಎ., ಎಲ್. ಟಿ., ರಿಟಾಯರ್ಡ್ ಎಜ್ಯುಕೇಶನಲ್ ಆಫೀಸರ್ ಅವರು ಬರೆದ 'ತ್ರಿಪೃಷ್ಠಾದಿಚರಿತಂ' ಎಂಬ ಲೇಖವು ಬಂದಿದೆ.

(ಮುಂದುವರಿಯುವುದು.)

ಅತ್ಯಲ್ಪ ಬೆಲೆ — The TWIN — ಅಮಂದ ಆನಂದ

ಆಸೇತು ಹಿಮಾಚಲ ಪರ್ಯಂತವೂ ಅಶೇಷ ಭಾರತ ಸಮುದಾಯಕ್ಕೆ
ಅತ್ಯಲ್ಪ ಬೆಲೆಗೆ ಅಮಂದ ಆನಂದವನ್ನು ಕೊಡುವ
"ಟ್ವಿನ್" ರಿಕಾರ್ಡುಗಳಲ್ಲಿ
ಕರ್ಣಾಟಕ ನಾಟ್ಯಕಲೆಗೆ ಹೊಸ ವಿಕಾಸವನ್ನು ಕಲ್ಪಿಸಿದ
ಕರ್ಣಾಟಕ ನಾಟಕ ಮಂಡಲಿಯವರ

ಭಾರತ ನಾಟಕಗಳು

ದ್ರೌಪದೀ ಸ್ವಯಂವರ	ಸೆಟ್ಟು ನಂ.	566	ಬೆಲೆ ರೂ.	9—0
ರುಕ್ಮಾಂಗದ	,,	568	,,	9—0
ದಾನಶೂರ ಕರ್ಣ	,,	575	,,	12—0
ವೀರ ಅಭಿಮನ್ಯು	,,	580	,,	10—8
ಗಯ ಚರಿತ್ರೆ	,,	591	,,	9—0
ಭೀಷ್ಮ ಪ್ರತಿಜ್ಞೆ	,,	596	,,	10—8

ಇವುಗಳಲ್ಲೆಲ್ಲಾ ಶ್ರೀಯುತ ಕೊಟ್ಟೂರಪ್ಪನವರು ಮುಖ್ಯ ನಾಯಕಾ ಪಾತ್ರವನ್ನು ಪಡೆದಿರುತ್ತಾರೆ. ಇವುಗಳನ್ನೀಗಲೇ ನಿಮ್ಮ ವ್ಯಾಪಾರಿಗಳಲ್ಲಿ ಕೇಳುವಿರಿ!

ಈ ನಾಟಕ ಪುಸ್ತಕಗಳು ಬೇಕಾದವರಿಗೆ ನಮ್ಮಲ್ಲಿ ಉಚಿತವಾಗಿ ದೊರೆಯುವುವು.

ದಿ "ಟ್ವಿನ್" ರಿಕಾರ್ಡು ಕಂಪೆನಿ, ಲಿಮಿಟೆಡ್,
45, ಸೌತ್ ಪೆರೇಡ್, ಬೆಂಗಳೂರು.

ಬಾಲಸಾಹಿತ್ಯ ಮಂಡಲ ಲಿಮಿಟೆಡ್,

ಕೊಡಿಯಾಲಬೈಲು, ಮಂಗಳೂರು.

ಈ ವಾರದಲ್ಲಿ ಬಂದ ಹೊಸ ಪುಸ್ತಕಗಳು— ಕೊಲಿನ್ಸ್ ಕಂಪೆನಿಯವರಿಂದ ಪ್ರಕಟವಾದ ಶಾಲಾ ಇನಾಮಿನ ಪುಸ್ತಕಗಳು—(ಬೆಲೆ 3 ಆಣೆಗಳಿಂದ ಮೇಲ್ಪಟ್ಟು)—ಚಿಕ್ಕ ಮಕ್ಕಳಿಗೆ ಆನಂದ ಕೊಡುವ ಮನೋರಂಜಕವಾದ ಬಗೆಬಗೆಯ ಸಚಿತ್ರ ಪುಸ್ತಕಗಳು.

ಜವಾಹೀರಲಾಲ ನೆಹರುರವರ ಈ ಕೆಳಗಿನ ಪುಸ್ತಕಗಳ ಕೆಲವೇ ಪ್ರತಿಗಳು ಉಳಿದಿವೆ:—

1. ಜವಾಹೀರಲಾಲರ ಜನ್ಮಕಥೆ	7—0—0
2. ಜವಾಹೀರಲಾಲರ ಇಂಡಿಯಾವೂ ಪ್ರಪಂಚವೂ	3-12—0
3. ಜವಾಹೀರಲಾಲರು ಮಗಳಿಗೆ ಬರೆದ ಲೇಖನಗಳು	1—8—0

ಲಿಯೊ ಟೊಲ್‌ಸ್ಟಾಯಿಯವರ—ಗ್ರಂಥಗಳು.

ಸುಪ್ರೀಮ್ ಡಿಕ್ಶನರಿ—(ಸಚಿತ್ರವಾದ ಮತ್ತು ಅತೀ ಅಗ್ಗವಾದ ಅತ್ಯುತ್ತಮ ಪ್ರತಿ)—1200 ಪುಟಗಳುಳ್ಳದ್ದು 2-10—0
ಇಂಗ್ಲಿಷ ಭಾಷೆಯ ಪ್ರಯೋಗದ ಮೂಲಸೂತ್ರಗಳು 1—4—0

1. ಕನ್ನಡ ಸಾಹಿತ್ಯ. ವಿದ್ವಾನ್, ಪ್ರಿಲಿಮಿನರಿ ಮತ್ತು ಫೈನಲ್ ಪರೀಕ್ಷೆಗೆ ಅಗತ್ಯವಾದ ಪಠ್ಯಪುಸ್ತಕಗಳು. ಅಷ್ಟೇ ಅಲ್ಲ—ನಿಖಿಲ ಕರ್ಣಾಟಕದ ವಿವಿಧ ವಿಚಾರಗಳುಳ್ಳ ಪುಸ್ತಕಗಳು.

2. ಸ್ವೇಶನೆರಿ. ಬ್ಲೆಕಬರ್ಡ್ ಫೌಂಟನ್ ಪೆನ್ನುಗಳು (ಬಗೆಬಗೆ ಬಣ್ಣದವು), ಎವರ್‌ಶಾರ್ಪ್ ಫೌಂಟನ್ ಪೆನ್ನುಗಳು, ಪಾರ್ಕರ್ ಪಾಕೆಟ್ ಫೌಂಟನ್ ಪೆನ್ನುಗಳು, ವಾರ್ರಿಸ್ ಫೌಂಟನ್ ಪೆನ್ನುಗಳು (ಇತ್ತೀಚೆಗೆ ಬಂಡವುಗಳು) ಬೆಲೆ 2—8—0.

ಅತ್ಯುತ್ತಮ ಮತ್ತು ಪ್ರಯೋಜನಕರವಾದ ಲೇಖನಸಾಮಗ್ರಿ ಮತ್ತು ನ್ಯೂ ಇಯರ್ ಕ್ರಿಸ್ತಮಸ್ ಕಾರ್ಡುಗಳು ಮತ್ತು ಹೊಸ ವರ್ಷದ ಡೈರಿಗಳು ಬರುವ ವಾರದಲ್ಲಿ ಸಿಗುವವು.

SPECIAL X'MAS COMPETITION. Guaranteed Rs. 15000/- in prizes.

Special prizes of 800 BOTTLES of wellknown Honeymoon pills and cream (for nervous debility). Up to this day we have distributed Rs. 14491/- in prizes in our past competitions.

Rs. 10000/- for all correct. Rs. 2000/- for One Error. Rs. 1000/- Special Prize to the all correct winner out of Bombay. Rs. 1000/- to the all correct who will send their entries before 1—12—1936. Rs. 1000/- to the sender of highest number of entries.

All correct and One Error winner's solution should tally figure by figure with our sealed solution deposited in Bank. Rs. 500/- GUARANTEED to each all correct winner and extra Prize of Rs. 100/- each to the first ten all correct. Any number of entries may be sent on plain papers (each set on separate papers), along with the requisite fee of Re. 1/- per set of Two-Squares or Rs. 4/- for five sets. No entry without fee will be considered. Manager's decision is final and legally binding in all matters.



Arrange the numbers from 0 to 10 in Square No. 1 and from 0 to 12 in Square No. 2, so that each Row, Column and Diagonal total must be 15 of Square No. 1, and 18 of Square No. 2. Each number should be used once only in each Square.

CLOSING DATE, 15—12—1936. RESULT ON 18—12—1936.

A "Gold-Top" Camel Fountain-pen will be awarded to the sender of 10 or more entries.

Address your Fees and Entries to:—

EXCELSIOR COMPETITION BUREAU,
5/7, Oak lane, Medows Street, Fort, Bombay.

ಭಾರತೀಯ ಮತ್ತು ವಿದೇಶೀಯ ಔಷಧಗಳಲ್ಲಿ ಅಸಮಾನವಾದುದು.

ಎಲ್ಲಾ ನೇತ್ರರೋಗಗಳಿಗೂ ಅಮೃತಪ್ರಾಯವಾದುದು.

ನೇತ್ರ-ತಾಪ-ಹಾರಿಣಿ—'ಕಣ್ಣುಕಾಣದವರ ಜೀವನವು' ದುಸ್ಸಹವೂ, ಜೀವಿಸಲಸದಳವೂ ಆಗಿರುತ್ತದೆ. ವೈದ್ಯಭೂಷಣ—ಕೆ. ಜಿ. ಕುಡುಕರ್, ಟಿ. ಬಿ. ಆ್ಯಂಡ್ ಸ್ಪೂ ಸ್ಪೆಶಲಿಸ್ಟ್ ಮತ್ತು ಮೆಡಿಕೊ-ಇನ್-ಚಾರ್ಜ್, ದಯಾರ್ಣವ ಸೆನಿಟೋರಿಯಂ, ಸಂಗಮ್ನೇರ್ (ಅಹಮದನಗರ) ಇವರು 7 ತಿಂಗಳು ಈ ಔಷಧವನ್ನುಪಯೋಗಿಸಿ ಬರೆಯುವದು—'ಅದು ಶೇಕಡಾ 80 ನೇತ್ರವ್ಯಾಧಿಗಳನ್ನು ಗುಣಪಡಿಸಿಯದೆ. ಅದು ಪರೆ ಬರುವದು, ಆರಿ, ಮೋತಿಬಿಂದು, ಮಾಂಸ ಬೆಳೆಯುವುದು, ಹುಣ್ಣುಗಳು ಇತ್ಯಾದಿಗಳಿಗೆ ಖಾತ್ರಿಯಾದ ಔಷಧ'—ಭಾರತೀಯ ವೈದ್ಯಕೀಯ ಉದ್ಯೋಗದಲ್ಲಿ ಅದೊಂದು ಅಮೌಲ್ಯ ಸಹಾಯವಾಗಿದೆ. 20 ದಿನಗಳ ಔಷಧದ ಬಾಟ್ಲಿಯ ಕ್ರಯ ರೂ. 1—8—0.

ತ್ವಚಾ-ರೋಗಾರಿ-ಮಲಮು—ಈ ಸಿದ್ಧೌಷಧವು, ಒಂದೇ ಒಂದು ಲೇಪನದಿಂದ, ಉರಿಯನ್ನುಂಟುಮಾಡದೆ, ತನ್ನ ಗುಣಕಾರತ್ವವನ್ನು ತೋರಿಸುವುದು. 'ಕಜ್ಜಿ, ದದ್ದು, ಹುರುಕು, ಇಸಬು. ಗಜಕರ್ಣ' ಇತ್ಯಾದಿಗಳನ್ನೂ, ಎಷ್ಟೇ ಪೀರ್ಘಕಾಲದ ಯಾ ಕಠಿಣವಾದ ಚರ್ಮವ್ಯಾಧಿಗಳನ್ನೂ, ಸಮೂಲವಾಗಿ ನಾಶಗೊಳಿಸುತ್ತದೆ. ಗುಣವಾದ ಮೇಲೆ ಚರ್ಮದ ಮೇಲೆ ಏನೊಂದೂ ಕಲೆಯನ್ನು ಬಿಡುವದಿಲ್ಲ, ಕ್ರಯ: ಸಣ್ಣ ಬಾಟ್ಲಿ 4 ಆಣೆ ಮತ್ತು ದೊಡ್ಡ ಬಾಟ್ಲಿ 8 ಆಣೆ.

ಶಿರೋ-ರೋಗಾಮೃತ—ಅದು 'ತಲೆನೋವು, ಕೆನ್ನೆ ಹೊಡೆಯುವುದು' ಇತ್ಯಾದಿಗಳನ್ನು ಎಷ್ಟೋ ಪೀರ್ಘಕಾಲದ್ದೂ, ಗಡುತರವಾದದ್ದೂ ಆಗಿದ್ದರೂ ಗುಣಪಡಿಸುವದು. ಅಲ್ಲದೆ ಅದು ಎಲ್ಲಾ ಕಣ್ಣುನೋವುಗಳನ್ನೂ ಅದರಿಂದುಂಟಾಗುವ ತಲೆನೋವನ್ನೂ ಸಂಪೂರ್ಣವಾಗಿ ಗುಣಪಡಿಸುವದು. ಕ್ರಯ: ಸಣ್ಣ ಬಾಟ್ಲಿಗೆ 4 ಆಣೆ ಮತ್ತು ದೊಡ್ಡ ಬಾಟ್ಲಿಗೆ 8 ಆಣೆ.

ಪೋಸ್ಟೇಜು ಮತ್ತು ಪ್ಯಾಕಿಂಗ್ ಚಾರ್ಜು ಪ್ರತ್ಯೇಕ.

ಪತ್ರವ್ಯವಹಾರವನ್ನು ಸುವಾಚ್ಯ ಇಂಗ್ಲೀಷಿನಲ್ಲಾಗಲಿ, ಮರಾಠಿಯಲ್ಲಾಗಲಿ ಮಾಡಬೇಕು.

The National Industrial & Manufacturing Company,
432 A, Narayan-Peth, POONA-2.

ಪರ್ಮಾಸನ್ ಮಾತ್ರೆಗಳು ಉನ್ಮಾದಕ್ಕೆ ಸಂಜೀವನ

ಇದೀಗ ಅದ್ವಿತೀಯ ಸಿದ್ಧೌಷಧ. ಈಗ ಚಾಲ್ತಿಯಲ್ಲಿರುವ ಹಿಂದುಸ್ಥಾನದ ಮತ್ತು ಆಂಗ್ಲೇಯ ಚಿಕಿತ್ಸೆಗಳು, ಹುಚ್ಚು, ನಿದ್ರಾಭಂಗ, ಮನೋಭ್ರಾಂತಿ, ಹಿಸ್ಟೇರಿಯಾ ಮತ್ತು ಅಪಸ್ಮಾರ ಮುಂತಾದ ಎಲ್ಲಾ ರೋಗಗಳಿಗೆ ನಿಷ್ಫಲವಾದಲ್ಲಿ, ಕೊನೆಗೆ ಒಂದಾವರ್ತಿಯಾದರೂ ಪರಮಾಸನ್ ಮಾತ್ರೆಗಳನ್ನು ಉಪಯೋಗಿಸಿ ಖಾತ್ರಿ ಮಾಡಿರಿ. ಇದನ್ನು ರೋಗಿಗಳಿಗೆ ಉಪಯೋಗಿಸಿ ಇದರ ಆಶ್ಚರ್ಯಕರವಾದ ಗುಣಗಳನ್ನು ನೋಡಿ, ಅನೇಕ ಪಂಡಿತ, ಡಾಕ್ಟರುಗಳು ಹೊಗಳಿ, ಕೊಟ್ಟ ಸರ್ಟಿಫಿಕೇಟುಗಳು ಇದರ ಕೀರ್ತಿಯನ್ನು ವರ್ಣಿಸುತ್ತವೆ. ಈ ಮಾತ್ರೆಗಳಿಂದ ಚಿಕಿತ್ಸೆಮಾಡಿದರೆ ರೋಗಿಗಳನ್ನು ಎಂದೆಂದಿಗೂ ಮೆಂಟಲ್ ಆಸ್ಪತ್ರೆಗೆ ಕಳುಹಿಸುವ ಅಗತ್ಯವಿರದು. 60 ಮಾತ್ರೆಗಳ ಬಾಟ್ಲಿ 1ಕ್ಕೆ ರೂ. 4—0—0 ಮಾತ್ರ, ವ್ಯಾಪಾರಸ್ಥರಿಗೆ ಕಮೀಷನ್ ಕೊಡಲಾಗುವುದು.

ಮಂಗಳೂರಿನಲ್ಲಿ
ಪೊಪ್ಯುಲರ್ ಸ್ಟೋರ್ಸ್, ಕಾರ್ ಸ್ಟ್ರೀಟ್. ಮಲೇರಿಯಾನ ಕಂಪೆನಿ, ಹಂಪನಕಟ್ಟೆ.
ಕಾರ್ನಾಡ್ ಶಿವರಾವ್, ಮಾರ್ಕೆಟ್ ರೋಡ್,
ಇವರಲ್ಲಿ ಮಾತ್ರೆಗಳು ಮಾರಾಟಕ್ಕೆ ದೊರೆಯುವವು.

C. V. KAMATH,
Hysteria & Mental Expert, Post Udipi.

The Premier Bank of India, Ltd., Madras

ದಿ ಪ್ರಿಮಿಯರ್ ಬೇಂಕ್ ಒಫ್ ಇಂಡಿಯಾ, ಲಿಮಿಟೆಡ್,

ಹೆಡ್ ಆಫೀಸ್:—ತಂಬುಚೆಟ್ಟಿ ಸ್ಟ್ರೀಟು, ಮದ್ರಾಸು.

ಚೇರ್‌ಮೇನ್—ಡಾಕ್ಟರ್ ಯು. ಎಲ್. ನಾರಾಯಣ ರಾವ್,
(ಭುಜಂಗನಿವಾಸ, ತ್ಯಾಗರಾಯನಗರ.)

ಕಾಯಂ ಠೇವಣಾತಿಗಳು ವರುಷ ಒಂದಕ್ಕೆ ಶೇಕಡಾ 5½ ಸಲೆಯಲ್ಲಿಯೂ, ಎರಡು ವರುಷಗಳಿಗೆ ಶೇಕಡಾ 6ರ ಸಲೆಯಲ್ಲಿಯೂ ಸ್ವೀಕರಿಸಲ್ಪಡುತ್ತವೆ. ಆರು ತಿಂಗಳಿಗೊಮ್ಮೆ ಬಡ್ಡಿಯು ಕೊಡಲಾಗುವುದು. ಬ್ಯಾಂಕಿನ ಇತರ ಎಲ್ಲಾ ವಹಿವಾಟುಗಳೂ ನಡೆಸಲ್ಪಡುತ್ತವೆ. ಹೆಚ್ಚಿನ ಮಾಹಿತಿ ಬಗ್ಗೆ ಹೆಡ್ಡಾಫೀಸಿಗೆ ಬರೆದುಕೊಳ್ಳುವುದು.

S. V. RAO, D. Com.,
Managing Director.

MODERN PRINTING! AT MODERATE RATES!

CONSULT

THE

Saraswathi Printing Works, Ltd.,

CANTONMENT, MANGALORE.

KIDNEY & BLADDER TROUBLES

ಒಬ್ಬನ ಆರೋಗ್ಯವನ್ನೂ ಶಕ್ತಿಯನ್ನೂ, ರಕ್ತದಲ್ಲಿನ ಹುಳಿ ಮತ್ತು ವಿಷಪದಾರ್ಥಗಳು ಹಾನಿಪಡಿಸುವಷ್ಟು ಸಂಪೂರ್ಣವಾಗಿ ಯಾವದೂ ಹಾನಿಪಡಿಸುವುದಿಲ್ಲ. ಈ ವಿಷಪದಾರ್ಥಗಳು ಮೂತ್ರವ್ಯಾಧಿ, ಪ್ರಮೇಹ, ವಾತ, ಸೊಂಟನೋವು, ಉರಿ, ಹುಳಿ, ಚೈತನ್ಯ ನಾಶ ಇತ್ಯಾದಿಗಳನ್ನು ಉಂಟುಮಾಡುತ್ತವೆ.

W. RIHR. SANTASOL PILLS.

ಡಬ್ಲ್ಯು. ರ್ಹರ್ 'ಸಂತಾಸೋಲ್' ಪಿಲ್ಸ್‌ಗಳು ತೀವ್ರವಾಗಿ ಮೂತ್ರಪಿಂಡ ಮತ್ತು ಕೋಶದ ಎಲ್ಲಾ ಉಪದ್ರವಗಳನ್ನು ನಿವಾರಿಸುತ್ತವೆ ಮತ್ತು ನಿಮ್ಮನ್ನು ಪುನಃ ಹೊಸ ಮನುಷ್ಯರನ್ನಾಗಿ ಮಾಡುತ್ತವೆ. ನಿಮ್ಮ ಕೆಮಿಸ್ಟರಿಂದ ಪಡೆಯಿರಿ.

ಕ್ರಯ ಬಾಟ್ಲಿಯೊಂದರ ರೂ. 2—4—0. ಪೋಸ್ಟೇಜು ಅಲಾಯಿದಾ.

ಸೋಲ್ ಏಜಂಟರು:—ಲಕ್ಷ್ಮೀದಾಸ್ ದಯಾಭಾಯಿ ಮತ್ತು ಕಂಪೆನಿ,
ಕೆಮಿಸ್ಟ್‌ಸ್ ಮತ್ತು ಡ್ರಗಿಸ್ಟ್‌ಸ್,
6, ಪ್ರಿನ್ಸ್‌ಸೆಸ್ ಸ್ಟ್ರೀಟ್, ಮುಂಬಾಯಿ.

ಶ್ರೇಷ್ಠ ತರಗತಿಯೇ ಅಧಿಕವ್ಯಾಪಾರದ ಲಕ್ಷಣ
ಅದಕ್ಕಾಗಿಯೇ

"ರಾಜಾ ಸೈಕಲ್"

ಸಾಹಿತ್ಯಗಳು, ರಚನೆ ಮತ್ತು ಸೊಬಗು ಇವುಗಳಲ್ಲಿ ಅತ್ಯುತ್ತಮವಾದುದೆಲ್ಲವೂ ಇದರಲ್ಲಿ ಇದೆ.

ಸ್ವಾಕಿಷ್ಟರು:—ದಿ ಸಿಟಿ ಸೈಕಲ್ ಕೋ., ಮಂಗಳೂರು.

ಹೆಚ್ಚು ಮಾಹಿತಿಗೆ:—
ಸೋಲ್ ಕನ್ಸೆಷನರೀಸ್‌ಯವರಿಗೆ ಬರೆಯಿರಿ.

ರಾಜಾ ಸೈಕಲ್ ಅಂಡ್ ಮೋಟಾರ್ ವರ್ಕ್ಸ್,
"ರಾಜಾ ಬಿಲ್ಡಿಂಗ್ಸ್", ನರತಿಂಹರಾಜಾ ರೋಡ್
ಬೆಂಗಳೂರು ಸಿಟಿ,
ದಕ್ಷಿಣ ಇಂಡಿಯ.

ಮೂಲವ್ಯಾಧಿಗೆ ಹೆಡನ್ಸಾ ಚಿಕಿತ್ಸೆ

ಯಾವುದೇ ಸ್ಥಿತಿಯಲ್ಲಿಯಾದರೂ ಮೂಲವ್ಯಾಧಿಯನ್ನು ಗುಣಪಡಿಸುವುದು.

ಮೂಲವ್ಯಾಧಿಗೆ ಅತ್ಯುತ್ತಮ, ಪೂರ್ಣ ಭರವಸೆಯುಳ್ಳ ಮತ್ತು ಬಹು ಬೇಗ ಗುಣಪಡಿಸುವ ಚಿಕಿತ್ಸೆಯಿದು. ರಕ್ತ ಬರುವುದನ್ನು ನಿಲ್ಲಿಸುವುದು, ಬಿರುಕುಗಳನ್ನು ಮುಚ್ಚುವುದು, ಹುಣ್ಣುಗಳನ್ನೂ ಗಾಯಗಳನ್ನೂ ಗುಣಪಡಿಸುವುದು. ಅನೇಕ ಚಿಕಿತ್ಸಾಲಯಗಳಲ್ಲಿ ಇದನ್ನುಪಯೋಗಿಸುತ್ತಿರುವರು.

ಯೂರೋಪಿನ ಪ್ರಸಿದ್ಧ ವೈದ್ಯರೂ, ಶಸ್ತ್ರಚಿಕಿತ್ಸಕರೂ ಬಹಳ ಶಿಫಾರಸು ಮಾಡಿದ್ದಾರೆ

ಯಾವ ಕೆಮಿಸ್ಟ್ ಅಂಗಡಿಯಲ್ಲಾದರೂ ಸಿಗುತ್ತದೆ.

Madras Stockists:—
Messrs. DADHA & CO., 52, Nainiappa Naick Street, Madras.

ಕೋರ್ಟು ಕಚೇರಿಗಳು, ಶಾಲಾ ಕೊಲೇಜುಗಳು ಬೋರ್ಡು, ಮುನಿಸಿಪಾಲಿಟಿಗಳು, ರೈತ, ವರ್ತಕರು ಇತ್ಯಾದಿ ಎಲ್ಲಾ ಇಲಾಖೆಯವರೂ ಉಪಯೋಗಿಸುತ್ತಿರುವರು.

ಅಂದ ಮೇಲೆ ನೀವೂ ನಿಮ್ಮ ಸೌಕರ್ಯಕ್ಕಾಗಿ ನಮ್ಮ 'ಯುಟಿಲಿಟಿ' ಸ್ಟಾಂಪನ್ನು ಏಕೆ ಉಪಯೋಗಿಸಬಾರದು? ಈ ಒಂದೇ ರಬ್ಬರು ಮೊಹರಿನಿಂದ ನಿಮ್ಮ ಎಲ್ಲಾ ಕೆಲಸಗಳೂ ಸುಲಭವಾಗಿ ಆಗುವುವು.

ದಿ ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ,
ವಿವಿಧ ರಬ್ಬರು ಮೊಹರುಗಳನ್ನೂ, ಕೆತ್ತನೆ ಕೆಲಸಗಳನ್ನೂ, ಪೈಂಟಿಂಗನ್ನೂ ಮಾಡುವವರು,
ಬಲ್ಮಠ ರಸ್ತೆ, ಮಂಗಳೂರು.
ನಾವು ಫೌನ್‌ಟನ್ ಪೆನ್ನುಗಳನ್ನು ರಿಪೇರಿ ಮಾಡಿಕೊಡುತ್ತೇವೆ.

HUMPI RUINS.
(Vijayanagar.)

(Contributed by the M. & S. M. Railway.)

The ruins of the City of Vijayanagar are situated near the M. & S. M. Railway Metre Gauge station of Hospet near Guntakal Junction on the Bombay-Madras Broad Gauge Main Line.

These ancient ruins are of extraordinary interest and the story of the rise and fall of this forgotten Hindu Empire is a tale of romance which must interest not only the student but also the ordinary man of affairs.

Humpi is a tiny hamlet which grew up around the great Pampapati temple which stands on the southern bank of the Tungabhadra in the Hospet taluk of the Bellary district of the Madras Presidency. It is of no importance in itself, but it has given its name to the ruins of Vijayanagar which lies scattered about it, 'The City of Victory', the birth place of the empire of that name and also of old the capital of its kings.

To know Vijayanagar as its best, the visitor should climb the steps leading to the little shrine on the top of the hill called Matanga Parvatam and watch the evening light fade across the ruins, and if the fates are kind and grant him the added glory of a Deccan sunset, he will surely return content.

The best base from which to see what remains of the city today, 350 years since its destruction, is Kamalapuram, seven miles from Hospet Railway Station, where there is a Travellers' Resthouse fully furnished. It is available to the general public. Food supplies that can be obtained locally are milk, eggs, fowls, mutton and rice. Other supplies should be obtained before leaving Hospet, where there is one of Spencer's Refreshment Room at the Railway Station.

The town of Hospet was built by Krishna Deva Raya, the Greatest of all the Vijayanagar kings, between 1509 and 1520 in honour of Nagala Devi, a courtesan whom he had known in the days of his youth and whom he married after he became king. He called it after her, Nagalapur, and it was his favourite residence. In his time it was the entrance gate as it were to the City of Vijayanagar for all travellers coming up from Goa and the West Coast.

The modern town of Hospet contains nothing of any antiquarian interest and there is hardly a trace of the old fortified walls that once enclosed the original town of Nagalapur.

The Portuguese traveller Paes who visited Vijayanagar in the sixteenth century says that in his time all this road was "a street as wide as a place of tourney with both sides lined throughout with rows of houses and shops where they sell everything; and all along this road are many trees that the king commanded to be planted, so as to afford shade to those that pass along". Both houses and trees have long since disappeared.

If legendary history and local tradition be credited, there was

OMNIUM-GATHERUM.

a town on this site many centuries before the Vijayanagar kings selected it for their capital. Some of the most dramatic scenes in the great epic of the Ramayana occurred at a place called Kishkindha, and it is asserted by the local Brahmans and generally acknowledged by the learned in such matters that this Kishkindha was close to Humpi.

About A. D. 1310, a year which is one of the great landmarks in South Indian chronicles, the advance of the Muhammadans from the North began seriously to threaten the very existence of all Hindu Dominions in the South. Malik Kafur, the famous general of Alla-ud-din of the Khilji dynasty of Delhi, swept into the Deccan with an immense force, captured Orangal (Warangal) in the Nizam's Dominions and took and sacked Dvarasamudra. Two years later his armies again marched south and Devagiri fell. Both the Hoysalas and the Yadavas were practically extinguished.

Foundation of Vijayanagar, A. D. 1336.-

Anarchy followed, Mussalman Governors, representatives of the old royal families and local chiefs struggling for supremacy, until out of the confusion arose the great Hindu Empire of Vijayanagar, which from its capital near Humpi for two centuries remained a bulwark against Muhammadan invasion.

Hoysalas form the stage of history, the founders being two Hindu princes named Hukka and Bukka, sons of Sangama. The former became the first king, taking the name of Harihara, and his brother succeeded him.

Of Harihara I, not much is known, but Bukka Raya, whom he appointed as his Yuvaraja, was famous. Though the establishment of the capital is attributed to the former, the building of the city and the transformation of its name to Vijayanagari or City of Victory, are said to have been the work of Bukka Raya.

Harihara II, Bukka Raya's son by Gaurambika, succeeded him on the throne and became involved in severe struggles with the Sultans of the Bahmani Kingdom of Gulbarga, which was founded 11 years after Vijayanagar. Thus, in 1380, when the Turushkas (Muhammadans) were swarming over the Adavani (Adoni) hill-fort and kingdom, Mallappa Odeyar's son defeated them, took possession of the fort and kingdom and handed them to Harihara. In 1384, the Turushkas are said to have attacked Kottakonda when the army had gone to the Orangal country. In 1397, we are informed of the exploits of the general Gunda, 'into the flames of whose valour the Yavanas, Turushkas and Andhras fell like moths.' The struggles with the Muhammadans to the north continued with varying fortunes until Krishna Raya, who was the most powerful and distinguished of the Vijayanagar Monarchs, came to the throne. About 1520, he inflicted a severe defeat upon the Muhammadans, in consequence of which a good understanding prevailed between the courts of Vijayanagar and Bijapur for a considerable time.

After the death of Achyuta Raya's son, Sadasiva Raya, the son of Ranga, a deceased brother of Achyuta by the same mother was raised to the throne by the great minister Rama Raya, who was his brother-in-law and who wielded the chief power in the State and is called the ruler of the great Karnata Kingdom. Though possessed of commanding abilities, so great was his arrogance that the Musalman States of Bijapur, Golconda, Ahmednagar and Bidar were provoked to combine in an attack on Vijayanagar as their common enemy.

The Muhammadans combine against Vijayanagar.

On Christmas day, 1564, they began their united advance southward and halted near the town and fortress of Talikota, 25 miles north of the Kistna river. Rama Raja despatched his brother Tirumala with 20,000 horses, 100,000 foot and 500 elephants to block the passage of the river, then sent off his other brother Venkatadri with another large force, and finally marched in person to the point of attack with the whole remaining power of the Vijayanagar Empire. His total force is said to have numbered 600,000 foot and 100,000 horse. The Hindus had fortified their side of the ford opposite the enemy's camp, but the latter drew them off by pretending to attempt another passage, and then returning suddenly to the original ford crossed it unopposed. They then marched south towards Rama Raja's camp.

The battle of Talikota, A. D. 1565.

On the 23rd January, 1565, the great battle of Talikota (as it was called), one of the most decisive battles in all South Indian history, was fought. All the available forces on either side took part in it. Rama Raja, though over ninety years of age, commanded the Vijayanagar centre and his brothers Tirumala and Venkatadri led, respectively, the left and right divisions. The Muhammadans awaited the attack with their artillery in the centre, opposite Rama Raja's division. This consisted of six hundred pieces of ordnance disposed in three lines, the heavy artillery in front, then the smaller pieces, and in the rear light swivel guns. Masking all these were two thousand archers. These latter kept up a heavy fire as the enemy advanced and then falling rapidly back allowed the massed batteries to open fire. Their effect was murderous and fecisive and the Hindus retreated in disorder. On the flanks they had, however, been more successful and had driven back the Musalmans, and the centre rallied for a charge upon the guns. At first their onslaught seemed to prevail, but the Musalman's heavy guns loaded with bags of copper coin, were fired into them at close quarters. 5,000 of them fell, and the Musalman cavalry charged through the intervals of the guns and cut their way straight through the dis-organised masses of the enemy right up to where Rama Raja was posted.

Rama Raja had at first superintended operations from a litter. Later, thinking to encourage his men, he seated himself on a "rich throne set with jewels, under a canopy of crimson velvet embroidered with gold and adorned with fringes of pearls", from whence he distributed money, gold and jewels to those of his followers who acquitted themselves well. Later again, he returned to his litter and it was at this moment that the Musalman cavalry charged up to his position. One of the enemy's elephants stampeded towards him, his bearers dropped him and fled, and before he could mount a horse he was taken before the king of Ahmednagar, who immediately had his head cut off and raised on a long spear so that the Hindu troops might see it.

This disaster caused an instant panic among Vijayanagar forces and they broke and fled. "They were pursued", says Ferishta, "by the allies with such successful slaughter that the river which ran near the field was dyed red with their blood. It is computed on the best authorities that above 100,000 infidels were slain in fight and during pursuit."

Their panic was so great that they made no attempt to rally on a fresh position or even to defend the hills and approaches round about their capital. Venkatadri had been slain and of the three brothers Tirumala alone remained He hastily returned to Vijayanagar and fled thence with the puppet king Sadasiva to the hill fort of Penukonda in the Anantapur District, taking with him a few follo-

(Continued on page 11)

ಪಿತ್ತಕೋಶವನ್ನು
ಕಲೋಮಲ್ ಇಲ್ಲದೆ-
ಎಚ್ಚರಿಸಿರಿ.

ಮೋಟಾರು ಗಾಡಿಯನ್ನು ನೂಕುವಷ್ಟು ಉತ್ಸಾಹ ಉಂಟಾಗುವುದು.

ಪ್ರತಿದಿವಸವೂ ಎರಡು ಪೈಂಟಿನಷ್ಟು ಪಿತ್ತರಸವು ಪಿತ್ತಕೋಶದಿಂದ ಜೀರ್ಣಕೋಶಕ್ಕೆ ಹರಿಯಬೇಕು. ಹೀಗೆ ಹರಿಯದಿದ್ದರೆ, ನಿಮ್ಮ ಆಹಾರವು ಜೀರ್ಣವಾಗದೆ ಮಲಕೋಶದಲ್ಲಿ ಕೊಳೆಯುತ್ತದೆ. ಇದರಿಂದ ಹೊಟ್ಟೆಯಲ್ಲಿ ವಾಯು ಉತ್ಪತ್ತಿಯಾಗಿ ಮಲಬದ್ಧತೆಯುಂಟಾಗುತ್ತದೆ. ನಿಮ್ಮ ಶರೀರ ಯಂತ್ರವೆಲ್ಲಾ ವಿಷಮಯವಾಗಿ, ಪ್ರಪಂಚವೇ ಬೇಡವೆಂಬ ಮನೋ ಜಿಗುಪ್ಸೆಯುಂಟಾಗುತ್ತದೆ.

ಲವಣಗಳು, ರುಚಿಕರವಾದ ಸೌಮ್ಯ ಮತ್ತು ಕಠಿನತರ ಜುಲಾಬುಗಳು, ಇವೆಲ್ಲಾ ತಾತ್ಕಾಲಿಕ ಕ್ಷೇಮಮಾತ್ರ ಉಪಯೋಗವಾದವುಗಳಲ್ಲದೆ ಮೂಲ ಕಾರಣವನ್ನು ತಾಕುವುದಿಲ್ಲ. ಆರೀತಿ ಮಾಡಬೇಕಾದರೆ ಜಗತ್ಪ್ರಸಿದ್ಧವಾದ "ಕಾರ್ಟರ್ಸ್ ಲಿಟ್ಟಲ್ ಲಿವರ್ ಪಿಲ್ಸ್"ಗಳು ಮೇಲೆ ಹೇಳಿದ ತೊಂದರೆಯ ಪಿತ್ತವನ್ನು ಕಪ್ಪಡೆ ಸಲೀಸಾಗಿ ಉತ್ಪತ್ತಿಮಾಡುತ್ತದೆ. ನಿರಪಾಯ, ಸೌಮ್ಯ ಮತ್ತು ಪೂರ್ಣಗುಣಕಾರಿಯಿದೆ. ಯಾವಾಗಲೂ ಕಾರ್ಟರ್ಸ್ ಲಿಟ್ಟಲ್ ಲಿವರ್ ಪಿಲ್ಸ್‌ಗಳನ್ನೇ ಕೇಳಿರಿ. ಪ್ರತಿಯೊಂದು ಕೊಪ್ಪು ಪೊಟ್ಟಣದ ಮೇಲೆ ಕಾರ್ಟರರ ಹೆಸರನ್ನು ನೋಡಿರಿ. ಬೆಲೆ ೧೦ ಆಣೆ.

THE ASIAN ASSURANCE CO., LTD., BOMBAY.

ಇನ್ಶೂರೆನ್ಸಿಗಾಗಿ ಈ ಸಂಸ್ಥೆಯೊಡನೆ ಆಲೋಚಿಸಿರಿ

ದಿ ಏಶಿಯನ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಬೊಂಬಯಿ.

ರಜತಮಹೋತ್ಸವದ ಮೂಲ್ಯವೇತನದ ಫಲಿತಾಂಶವನ್ನು ಕಾಯುತ್ತಿರಿ.

ವಿಸ್ತಾರಗೊಳಿಸಿದ 'ಇನೂರೆನ್ಸ್'

ಇದಕ್ಕೊಂದು ಉದಾಹರಣೆ:—ಒಬ್ಬ ಯುವಕನು, "ಕೋಷ್ಟಕ" III Aಯಂತೆ, ಲಾಭಸಹಿತವಾದ 20 ವರ್ಷಗಳ ಎಂಡೋಮೆಂಟಿಗಾಗಿ, 10,000 ರೂಪಾಯಿಗಳಿಗೆ ವಿಮೆ ಮಾಡುತ್ತಾನೆ ಎನ್ನುವ. ಆತನ ವರ್ಷಾವಧಿ ಪ್ರೀಮಿಯಮಿನ ಪೊತ್ತ ರೂ. 500—15—0. ಈ ಕಂತನ್ನು ಆತನು 5 ವರ್ಷ ಕಟ್ಟುತ್ತಾ ಬರುತ್ತಾನೆ; ಆ ಮೇಲೆ ಅದವನಿಂದ ಸಾಧ್ಯವಿಲ್ಲ ವೆಂದಾಗಲು, ಆತನು ವಿಸ್ತಾರಗೊಳಿಸಿದ ಈ ವಿಮಾ ಕ್ರಮದ ಪ್ರಯೋಜನ ಪಡೆಯಲು ಮನವಿ ಮಾಡುತ್ತಾನೆ. ಆಗ ಕಂಪೆನಿ, ಮುಖನುಲ್ಯದ ಪೂರ್ಣ ಪೊತ್ತ ರೂ. 10,000ಗಳಿಗೇ, ಆತನ ಪೋಲಿಸಿಯನ್ನು ಉಳಿದ 15 ವರ್ಷಗಳ ವರೆಗೂ ಊರ್ಜಿತದಲ್ಲಿರಿಸಲು ತಕ್ಕ ಭರವಸೆ ಕೊಡುತ್ತದೆ. ಈ ಅವಧಿಯಲ್ಲಿ ಆತನೆಲ್ಲಿಯಾದರೂ ಮೃತನಾದರೆ, ಈತನು ತೆರದೆ ಇರುವ ಪ್ರೀಮಿಯಮಿನಲ್ಲಿ ಎಷ್ಟನ್ನಾದರೂ ಕಳೆಯದೆ, ಆ 10,000 ರೂಪಾಯಿಗಳನ್ನೂ ಕಂಪೆನಿಯು ಸಲ್ಲಿಸಿಬಿಡುವುದು.

ಜೆ. ಎ. ಪುತ್ರನ್, ಬ್ರಾಂಚ್ ಮ್ಯಾನೇಜರ್,
ದಿ ಏಶಿಯನ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

Obtain 100% Satisfaction!

By using our Famous, Regd. Deer Brand, Flower Vase Brand, Steamer (King George) Brand and Gold Mohar Brand

Roofing Tiles, Ridges, Ventilators, Skylights, Flooring Tiles, Building Bricks, etc.

They are hall marks of perfection—genuine in quality and superb in kind.

That is why we want you to insist on buying them.

Buy only goods bearing our genuine Trade Marks & Names.

Also superfine fish oil, manure & dried fish available,

Messrs. C. Abdurahiman & Coragappa,

MANGALORE.

Props: HAMEEDIAH TILE WORKS, MANGALORE,
Mang. Props: ISLAMIAH TILE CO., KASARAGODE.

THE BANK OF MANGALORE, LTD.

MANGALORE.

ESTD. 1931.

Head Office:-MANGALORE.

Branches:-

MANGALORE, PANEMANGALORE, MUDABIDRI & PADUBIDRI.

Chairman:-**Philip J. Chandran, Esq.,**

Retd. Dt. Registrar of Joint Stock Companies.

On & from 1st of November 1936

Fixed Deposits will be received at following rates of interest.

For	3 months		4 %
,,	6 ,,		4½%
,,	12 ,,		5½%
,,	24 ,,	& upwards	6 %

Interest Payable Quarterly.

All kinds of banking business transacted.

U. R. PAI, *Managing Director.*

ಶ್ರೀ ದುರ್ಗಾಪರಮೇಶ್ವರೀ ಮೋಟರ್ ಸರ್ವೀಸ್,
ಮಂಗಳೂರು.

ಸ್ಥಾಪಿತವಾದುದು 1927ರಲ್ಲಿ!

ನಮ್ಮ ಮೋಟಾರು ಬಸ್ಸುಗಳು ಕ್ರಮವಾಗಿ ಪ್ರತೀತ್ಯವೂ ಮಂಗಳೂರಿಂದ ಮೂಲ್ಕಿ, ಬಜಪೆ, ಪಡುಬಿದ್ರೆ, ಕಿನ್ನಿಗೋಳಿ ಮಾರ್ಗವಾಗಿ ಮೂಲ್ಕಿಗೂ; ಗುರುಪುರ, ಬಜಪೆ, ಕಟೀಲ್ ಮಾರ್ಗವಾಗಿ ಮೂಲ್ಕಿಗೂ; ಮೂಲ್ಕಿ, ಬಜಪೆ, ಕಟೀಲ್ ಮತ್ತು ಮುಂಡ್ಕೂರಿಗಾಗಿ ಪಕ್ಕಪ್ಪೆಗೂ; ಅಡ್ಯಾರ್, ಫರಂಗಿಪೇಟೆ ಮಾರ್ಗವಾಗಿ ಮಂಚ್ಟೊಳಕ್ಕೂ; ಮೂಲ್ಕಿಯಿಂದ ಪಡುಬಿದ್ರೆ, ಬಳ್ಕುಂಜ, ಕಾರ್ಕಳಕ್ಕೂ; ಕಾರ್ಕಳದಿಂದ ಬೆಳ್ಮಣ್ಣು, ಮಂಚಿ ಳ್ಳಿ ಮಾರ್ಗವಾಗಿ ಉಡುಪಿಗೂ ಚಲಾವಣೆಯಾಗುವುವು.

ನಮ್ಮ ಹೊಸ ಲೈನುಗಳು.

ಮೂಲ್ಕಿ—ಕಿನ್ನಿಗೋಳಿ—ಮೂಡಬಿದರೆ ಮಾರ್ಗವಾಗಿ ಕಾರ್ಕಳಕ್ಕೂ; ಕಾರ್ಕಳದಿಂದ ಸೀದಾ ಸೋಮೇಶ್ವರಕ್ಕೂ ಬೆಳಿಗ್ಗೆ ಮತ್ತೂ ಮಧ್ಯಾಹ್ನ ಎರಡು ಸರ್ವೀಸುಗಳು ಹೊಸದಾಗಿ ನಡೆಯುತ್ತಿವೆ. ಶಿವಮೊಗ್ಗಾ—ತೀರ್ಥಹಳ್ಳಿ—ಕೊಪ್ಪ—ಹರಿಹರ ಮೊದಲಾದ ಪ್ರದೇಶಗಳಿಗೆ ಹೋಗುವವರಿಗೆ ಇದರಿಂದ ಬಹಳ ಅನುಕೂಲ.

ವಿ. ಸೂ.—ಮಂಗಳೂರು, ಮೂಲ್ಕಿ, ಪುಂಚಕಲ್, ಉಡ್ಪಿ, ಕಿನ್ನಿಗೋಳಿ ಮೊದಲಾದ ಕಡೆಗಳಿಂದ ಹೊರಡುವ ಬೆಳಿಗಿನ ಮತ್ತೂ ಮಧ್ಯಾಹ್ನದ 'ಸರ್ವೀಸು'ಗಳು, ಸಮಯಕ್ಕೆ ಸರಿಯಾಗಿ ಸೋಮೇಶ್ವರಕ್ಕೆ ತಲುಪಿ, ಮೇಲಿನ ಬಸ್ಸು ಸರ್ವೀಸುಗಳಲ್ಲಿ ಕೂಡಲೇ ಪ್ರಯಾಣ ಮಾಡುವಂತೆ ಏರ್ಪಡಿಸಲಾಗಿದೆ.

ಪ್ರಯಾಣಿಕರ ಸೌಕರ್ಯವೇ ನಮ್ಮ ಮುಖ್ಯಧ್ಯೇಯ!
ಇದಕ್ಕಾಗಿಯೇ ಹೊಸ ಬಸ್ಸುಗಳು!

ಹೆಚ್ಚಿನ ಮಾಹಿತಿ ಈ ಸರ್ವೀಸಿನ ಏಜಂಟರುಗಳಿಂದ ತಿಳಿದುಕೊಳ್ಳಬಹುದು.

ಗುಣ ಬಾರದಿದ್ದರೆ] ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ [ಹಣ ಪರತ.

ಸ್ತ್ರೀಧರ್ಮ ಸಂಜೀವಿನೀ ಚೂರ್ಣ (ರಿಜಿಸ್ಟರ್ಡ್)

ಈ ಚೂರ್ಣವು ಕಂಪು, ಬಿಳಿ ಶರಗಿಗೆ ಶತ್ರುವಾಗಿರುವದು! ಅನಿಯಮಿತಶನದಿಂದ ಮುಟ್ಟಾಗುವಿಕೆ ಕ್ಲೇಶ, ಮೈಯಲ್ಲಿ ನೋವು, ಉಷ್ಣತಾ, ಶ್ವೇತತಾ, ಗರ್ಭಾಶಯದಲ್ಲಿಯ ದೋಷ, ಗರ್ಭಧಾರಣವಾಗದಿರೋಣ, ಅಕಾಲದಲ್ಲಿ ಗರ್ಭಪತನವಾಗೋಣ, ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭ ಕೋಶವು ಸ್ವಚ್ಛವಾಗುವದು. ಮಕ್ಕಳಾಗುವದಿಲ್ಲೆಂದು ತನೇ ಲಗ್ನವಾಗಿನ ಮೊದಲು ಗೃಹದೇವತೆಯಾಗಿ ಮೊದಲನೇ ಕಸ್ತಿಗೆ ಈ ಚೂರ್ಣ ಅವಶ್ಯ ಕೊಡಿರಿ. ಮುಂಬ್ಯ ಸರ್ಟಿಫಿಕೇಟು, ಪಾ. ರಾ. ಎ. ಎಂ. ಇನ್ಸ್‌ಪೆಕ್ಟರ್ ಬೆಳಗಾಂವ—'ಈ ಚೂರ್ಣದಿಂದ ನನ್ನ ಬಾಟುಂಬದ ಹೊಟ್ಟೆಯೊಳಗಿನ ರಕ್ತಗುಲ್ಮದ ಗಂಟು ನಾಮಾವಶೇಷವಾಯಿತು.. ಮತ್ತು ಎಲ್ಲ ರೋಗಗಳೂ ನಿರ್ಮೂಲವಾದವು. ನನ್ನ ಮಿತ್ರನ ಹೆಂಡತಿಯ ರಕ್ತ ಮತ್ತು ಬಿಳಿ ಶರಗು ಇಳ್ಳಪಂತಾಹವು.' ಏನ ಬಿಡಿಸದ ಡಬ್ಬಿಯ ಕಿ. ರೂ. ೩. ವಿ. ಪಿ. ಆಣೆ ಲ.

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಸಾರಿ ಹಡೆಯುವುದರಿಂದ ಹೆಂಗಸರಿಗೆ ಅಶಕ್ತಿಯಾಗುತ್ತದೆ. ಬಡತನದಲ್ಲಿ ಮಕ್ಕಳಾಗುವದರಿಂದ ಮುಸಿವಾಗುತ್ತದೆ, ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡೆಯುವದು ಬಂದಾಗಬೇಕೆಂದು ಇಚ್ಛೆ ಪಡುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮ ದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವದಿಲ್ಲ. ಮೊದಲ ವಿಚಾರ ಮಾಡಿ ಔಷಧ ಬೇಡಿರಿ. ಮುಂಬ್ಯ ಸರ್ಟಿಫಿಕೇಟು—ಡಾಕ್ಟರ್ ಬಿ. ಎ. ವೈದ್ಯ, ಎಲ್. ಸಿ. ಪಿ. ಎಸ್., ಕೆಳದಮಾಹಿದಾ, ಕಾಜೇ—ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ, ಗರ್ಭಧಾರಣವಾಗುವದಿಲ್ಲ. ಪೂರ್ಣ ಗುಣಕಾರಿ. ಡಬ್ಬಿ ಕಿಮ್ಮತು ರೂ. ೪; ವಿ. ಪಿ. ಆಣೆ ಲ.

ವಿಳಾಸ:—ಸಂಜೀವಿನೀ ಔಷಧಾಲಯ, ಮು. ಪೊ. ಮಿರಜಿ, (S. M. C.)

SEX-OL

'ಸೆಕ್ಸೋಲ್' ಸೇವನೆಯಿಂದ ನರಗಳ ವಿತ್ರಾಣ, ನಿದ್ರಾಭಂಗ, ಮೂತ್ರಕೋಶದ ದೋಷಗಳು ಮೊದಲಾದುವು ಅತಿ ಶೀಘ್ರವಾಗಿ ಗುಣವಾಗುವುದಲ್ಲದೆ, ನೀವು ಅಪೇಕ್ಷಿಸುವ ದೇಹದಾರ್ಢ್ಯವುಳ್ಳ ಆರೋಗ್ಯದ ಸೊಂಪನ್ನು ಸುಲಭ ರೀತಿಯಲ್ಲಿ ಒದಗಿಸುತ್ತದೆ.

ಸೆಕ್ಸೋಲ್, ಶಾಸ್ತ್ರೀಯವಾಗಿ ಪರಿಶೋಧಿಸಲ್ಪಟ್ಟು, ಅಮೋಘವಾದ ಜೈತನ್ಯದಾಯಕವೆಂದು ಖ್ಯಾತ ಮುಖ್ಯ ವೈದ್ಯರ ಮತವಿದೆ. ಇದು ದೇಹಪ್ರಕೃತಿಯೊಳಗಿನ ದೋಷಗಳನ್ನೆಲ್ಲಾ ನಿವಾರಿಸಿ, ಶಕ್ತಿಸಾಮರ್ಥ್ಯ—ಆರೋಗ್ಯಸುಖಗಳನ್ನು ಪುನಃ ಕಲ್ಪಿಸುತ್ತದೆ.

ಡಬ್ಲ್ಯೂ. ರ್ಹರ್

ಸೆಕ್ಸೋಲ್

(ನವಯೌವನದಾಯಕ.)

ಈ ಯುಗದ ಅತಿ ಅಮೋಘವಾದ ನರ್ವ್ ಟಾನಿಕ್. ದೀರ್ಘಕಾಲದ ನರಗಳ ಬಲಹೀನತೆಯನ್ನು ಸರಿಪಡಿಸಿ ಸತಿಸಿಹೋದ ಜೈತನ್ಯವನ್ನೂ ಇಂದ್ರಿಯಬಲವನ್ನೂ ಪುನಃ ಕೊಡುತ್ತದೆ.

'ಸೆಕ್ಸೋಲ್, ಅಶಕ್ತಿ, ನಪುಂಸಕತ್ವ, ನಿದ್ರಾನಾಶ, ಮೆದುಳು ಮತ್ತು ನರಗಳ ದೌರ್ಬಲ್ಯ, ರುಚಿಭಂಗ, ಇತ್ಯಾದಿಗಳಿಗೆ ನಿರ್ದೋಷಧಿಯಾಗಿ, ಶುಖಸಂಪತ್ತುಗಳನ್ನೀಯುವುದು.

ಬಾಟಲಿ ಒಂದಕ್ಕೆ ರೂ. 3—4—0. ಅಂಚೆವೆಚ್ಚ ಬೇರೆ.

ಸೋಲ್ ಏಜೆಂಟರು:—ಲಕ್ಷ್ಮೀದಾಸ್ ದಯಾಭಾಯಿ ಮತ್ತು ಕಂಪೆನಿ,
ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್,
6, ಫ್ರೆನ್ಸೆಸ್ ಸ್ಟ್ರೀಟ್, ಮುಂಬಾಯಿ.

Printed and published by U. Ganesh Shenai, Superintendent at the Saraswathi Printing Works, Ltd., Mangalore. Editor:—B. Vittal Rau.